ಪಟ್ಟಣ ಸಹಕಾರ

ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 11
ಸಂಚಿಕೆ : 4
ಅಕ್ಟೋಬರ್/ನವೆಂಬರ್
ಡಿಸೆಂಬರ್ : 2023
ಪುಟಗಳು : 44

ಉದ್ಯೋಗ ಸೃಷ್ಟಿಗೆ ಭಾರತಕ್ಕೆ ಬೇಕು 8.5% ಜಿಡಿಪಿ : ರಘುರಾಮ್‌ರಾಜನ್

ಅಡಮಾನರಹಿತ ವೈಯಕ್ತಿಕ ಸಾಲದ ನಿಯಮಗಳನ್ನು ಬಿಗಿಗೊಳಿಸಿದ ಆರ್‌ಬಿಐ



ನಿಮ್ಮ ಹಣಕ್ಕೆ ಬಯೋಮೆಟ್ರಿಕ್ಸ್ ಲಾಕ್ ಭದ್ರತೆ, ಆಧಾರ್ ಡೇಟಾ ಕಳವು ತಡೆಗೆ ಹೀಗೆ ಮಾಡಿ

ಅನವಶ್ಯಕವಾಗಿ ಹಣ ಸೋಲಾಗುವುದನ್ನು ತಪ್ಪಿಸುವ 10 ಸೂತ್ರಗಳು

ಹಣಕಾಸು ವಿಷಯ ಓದಿದವರು ಆಯ್ಕೆ ಮಾಡಿಕೊಳ್ಳಬಹುದಾದ ಸೂಕ್ತ ವ್ಯವಹಾರಗಳು

ರಜತ ಮಹೋತ್ಸವ ಸಂಭ್ರಮ ಆಚರಿಸಿಕೊಳ್ಳುತ್ತಿರುವ ಎಸ್.ಪಿ.ಎಸ್. ಬ್ಯಾಂಕು

ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 47ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ದಿನಾಂಕ : 23.09.2023ರಂದು ನವದೆಹಲಿಯ, ಎನ್‌ಸಿಯುಐ ಸಭಾಂಗಣದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ನ್ಯಾಫಕಬ್‌ನ ಪ್ರೆಸಿಡೆಂಟ್ ಎಮಿರೆಟಸ್ ರವರಾದ ಶ್ರೀ ಎಚ್.ಕೆ. ಪಾಟೀಲರವರು, ನ್ಯಾಫಕಬ್‌ನ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ದಿನಾಂಕ:20.09.2023ರಂದು ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಜರುಗಿದ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 58ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀಯುತರಾದ ಡಿ.ಟಿ. ಪಾಟೀಲ, ರುದ್ರೇಗೌಡ, ಅಶೋಕ ಎಂ. ಮನಗೂಳಿ, ಹೆಚ್.ಸಿ. ಕೃಷ್ಣ, ಕೋಗುಂಡಿ ಬಕ್ಕೇಶಪ್ಪ, ಎಂ.ಕೆ. ಪಟ್ಟಣಶೆಟ್ಟಿ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ಹರೀಶ್ ಆಚಾರ್, ಕೃಷ್ಣಮೂರ್ತಿ ಭಂಡಾರಿ, ಮಲಕಣ್ಣ ಡಿ. ಪಾಟೀಲ, ರಾಜಕುಮಾರ ಬಸವರಾಜ ಬಾದವಾಡಗಿ, ನಿರಂಜನ್ ಟಿ.ಎಸ್., ವಾಸು ಹೆಚ್., ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ಶ್ರೀಮತಿ ವೀರಮ್ಮ ಪಿ., ರಾಜಶೇಖರ್ ಎಸ್. ಹಾವಣಗಿ, ರಘುನಾಥ್ ಸಿ., ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಪಿ.ಎಲ್. ವೆಂಕಟರಾಮರೆಡ್ಡಿ, ಎಮ್.ಎಮ್.ಮೆಟಗುಡ್ಡ, ಶರಣಪ್ಪ ಎಸ್. ವಾರದ, ಆರ್.ಎಸ್. ಸುಬ್ರಹ್ಮಣ್ಯ, ಚಂದ್ರಮೌಳಿ ಎಸ್., ಬಿ.ಎನ್. ಲೋಕೇಶ್, ಷಣ್ಮುಖಪ್ಪ ಎಸ್. ಮುಚ್ಚಂಡಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎನ್. ಕೇರೂರೆ ರವರುಗಳು ಉಪಸ್ಥಿತರಿದ್ದರು.

ಸಂಪಾದಕೀಯ

ಆತ್ಮೀಯ ಸಹಕಾರಿ ಬಂಧುಗಳೇ...

▶▶ ಎಚ್.ಕೆ. ಪಾಟೀಲ

ಜನರ ಆರ್ಥಿಕ ಪ್ರಗತಿ ಸುಧಾರಿಸಲು ಪರಿಣಾಮಕಾರಿ ಕ್ರಮಗಳನ್ನು ಕೇಂದ್ರ ಸರಕಾರ ತಡಮಾಡದೆ ತೆಗೆದುಕೊಳ್ಳಬೇಕಿದೆ

ನಮ್ಮ ದೇಶ ಆರ್ಥಿಕತೆಯಲ್ಲಿ ಜಗತ್ತಿನಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಆರ್ಥಿಕತೆಯಲ್ಲಿ ಈ ವರ್ಷ ಐತಿಹಾಸಿಕ ಬೆಳವಣಿಗೆಯಾಗಿದೆ. ದೇಶದ ಕನಿಷ್ಟ ಬೆಳವಣಿಗೆ, ಗರಿಷ್ಟ ಹಣದುಬ್ಬರ ಮತ್ತು ಕುಂಠಿತ ಉತ್ಪಾದನೆಯ ಕಾಲಘಟ್ಟವನ್ನು ದಾಟಿ, ಆರ್ಥಿಕತೆ ಬೆಳವಣಿಗೆ ಭರ್ಜರಿ ಬೆಳವಣಿಗೆ ಕಾಣುತ್ತಿದೆ. ದೇಶದ ಜಿಡಿಪಿ ಬೆಳವಣಿಗೆಯು ರಾಕೆಟ್ ವೇಗದಲ್ಲಿ ಸಾಗುತ್ತಿದೆ. ಜಗತ್ತಿನ ಬಲಾಢ್ಯ ದೇಶಗಳ ಪೈಕಿ ಅತಿ ವೇಗವಾಗಿ ಬೆಳೆಯುತ್ತಿರುವ ನಮ್ಮ ದೇಶವಾಗಿ ಮುಂಚೂಣಿಯಲ್ಲಿದೆ. ಪ್ರಸಕ್ತ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ಅವಧಿಯಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇಕಡ 7.6ರಷ್ಟು ಆಗಿದೆ. ಇದು, ರಿಸರ್ವ್ ಬ್ಯಾಂಕ್ ಮಾತ್ರವಲ್ಲದೆ ಆರ್ಥಿಕ ವಿಶ್ಲೇಷಕರ ಅಂದಾಜಿಗಿಂತಲೂ ಹೆಚ್ಚಾಗಿದೆ. ಈ ರೀತಿಯಾದ ವರದಿಗಳನ್ನು ನಾವು ಇತ್ತೀಚಿನ ದಿನಗಳಲ್ಲಿ ಓದುತ್ತಿದ್ದೇವೆ, ಕೇಳುತ್ತಿದ್ದೇವೆ.

ಆದರೆ ರಘುರಾಮ್ ರಾಜನ್ ಹೇಳುತ್ತಾರೆ, ಷೇರು ಮಾರುಕಟ್ಟೆ ಜಿಗಿತವನ್ನೇ ದೇಶದ ಆರ್ಥಿಕತೆಯ ಬೆಳವಣಿಗೆ ಎಂದು ಬಿಂಬಿಸಲಾಗುತ್ತಿದೆ. ವಾಸ್ತವವಾಗಿ ದೇಶದ ಕೆಲವೇ ಕೆಲ ಉದ್ಯಮಿಗಳು ಸಿರಿವಂತರಾಗುತ್ತಿದ್ದಾರೆ ಹೊರತು, ಅಸಂಖ್ಯಾತ ಜನ ಬಡವರಾಗುತ್ತಿದ್ದಾರೆ. ಹೀಗೆಂದು ಇತ್ತೀಚೆಗಷ್ಟೇ ಬಿಡುಗಡೆಯಾದ ತಮ್ಮ 'ಬ್ರೇಕಿಂಗ್ ದ ಮೌಲ್ಡ್' ಪುಸ್ತಕದಲ್ಲಿ ರಘುರಾಮ್ ರಾಜನ್ ಮತ್ತು ಅರ್ಥಶಾಸ್ತ್ರಜ್ಞ ರೋಹಿತ್ ಲಂಬಾ ಅವರುಗಳು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಬ್ಬ ಖ್ಯಾತ ಅರ್ಥಶಾಸ್ತ್ರಜ್ಞರಾದ ಅಶೋಕ ಮೋದಿ, ಇವರು ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ. ಇವರ ಪ್ರಕಾರ; ಭಾರತದ ಜಿಡಿಪಿ ಬೆಳವಣಿಗೆಯ ಬಗ್ಗೆ ನೀಡುತ್ತಿರುವ ಅಂಕಿ–ಅಂಶಗಳೇ ಸುಳ್ಳಾಗಿವೆ. ಪ್ರಸ್ತುತ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ನಿಜವಾಗಿಯೂ 4.5% ಆಗಿತ್ತು ಎಂದವರು ಹೇಳುತ್ತಾರೆ. ಇದು ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ ಎಂದು ಬಿಂಬಿಸುವ ಬ್ರಾಂಡಿಂಗ್ ಪ್ರಯತ್ನವಾಗಿದೆ ಹೊರತು, ಆರ್ಥಿಕತೆಯಲ್ಲಿ ಯಾವುದೇ ಬೆಳವಣಿಗೆ ಆಗಿಲ್ಲ ಎನ್ನುವುದು ಅಶೋಕ ಮೋದಿ ಅವರ ಅಭಿಪ್ರಾಯವಾಗಿದೆ.

ಇಲ್ಲಿ ಆರ್ಥಿಕ ತಜ್ಞರ ಅಭಿಪ್ರಾಯಗಳು ಏನೇ ಇರಲಿ, ದೇಶದ ಬಹುತೇಕ ಜನರಿಗೆ ದೇಶದ ಆರ್ಥಿಕ ಬೆಳವಣಿಗೆಯಿಂದ ಏನಾದರೂ, ತುಸುವಾದರೂ ಅನುಕೂಲವಾಗಿದೆಯೇ ಎಂದು ನೋಡಿದರೆ, ನಿರಾಸೆಯಾಗುತ್ತದೆ. ಇಲ್ಲಿ ಅಂಕಿ–ಅಂಶಗಳ ಶುಷ್ಕ ವಿಚಾರಗಳನ್ನು ಬದಿಗಿಟ್ಟು ವಾಸ್ತವ ನೋಡಬೇಕಿದೆ. ಮುಂದಿನ ದಿನಗಳಲ್ಲಿ ಜನರ ಆರ್ಥಿಕ ಸಂಕಟ ಇನ್ನಷ್ಟು ತೀವ್ರವಾಗುವ ಮುಂಚೆ ಕೇಂದ್ರ ಸರಕಾರ ಎಚ್ಚೆತ್ತುಕೊಳ್ಳುವುದು ಅಗತ್ಯ. ಬಹು ಆಯಾಮಗಳ, ಪರಿಣಾಮಕಾರಿ ಕ್ರಮಗಳನ್ನು ಕೇಂದ್ರ ಸರಕಾರ ತಡಮಾಡದೆ ತೆಗೆದುಕೊಳ್ಳಬೇಕಿದೆ. ಆಗ ಮಾತ್ರ ದೇಶದ, ಜನರ ಆರ್ಥಿಕ ಪ್ರಗತಿ ಸಾಧ್ಯ ಎಂದು ಹೇಳ ಬಯಸುತ್ತೇನೆ.

ಭಾರತದ ಜಿಡಿಪಿ ಬೆಳವಣಿಗೆಯ ಬಗ್ಗೆ ನೀಡುತ್ತಿರುವ ಅಂಕಿ–ಅಂಶಗಳೇ ಸುಳ್ಳಾಗಿವೆ. ಪ್ರಸ್ತುತ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ನಿಜವಾಗಿಯೂ 4.5% ಆಗಿತ್ತು ಎಂದವರು ಹೇಳುತ್ತಾರೆ. ಇದು ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ ಎಂದು ಬಿಂಬಿಸುವ ಬ್ರಾಂಡಿಂಗ್ ಪ್ರಯತ್ನವಾಗಿದೆ ಹೊರತು, ಆರ್ಥಿಕತೆಯಲ್ಲಿ ಯಾವುದೇ ಬೆಳವಣಿಗೆ ಆಗಿಲ್ಲ ಎನ್ನುವುದು ಅಶೋಕ ಮೋದಿ ಅವರ ಅಭಿಪ್ರಾಯವಾಗಿದೆ.

ಒಳಪುಟಗಳಲ್ಲಿ

ಪಟ್ಟಣ ಸಹಕಾರ
ಬ್ಯಾಂಕಿಂಗ್ ಪ್ರಪಂಚ

ಸಂಪುಟ : 11 ಸಂಚಿಕೆ : 4

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ

ಅಕ್ಟೋಬರ್, ನವೆಂಬರ್, ಡಿಸೆಂಬರ್ - 2023

ಶ್ರೀ ಎಚ್.ಕೆ. ಪಾಟೀಲ
ಗೌರವಾಧ್ಯಕ್ಷರು

ಶ್ರೀ ಬಿ.ಎಸ್. ಪರಮಶಿವಯ್ಯ
ಉಪಾಧ್ಯಕ್ಷರು

ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

ಸಂಚಿಕೆ ನಿರ್ವಹಣೆ / ವಿನ್ಯಾಸ :
ವರ್ಣ ಕಮ್ಯೂನಿಕೇಷನ್

ಪ್ರಕಟಣೆ :
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

ದೂರವಾಣಿ :
080-22233662, 080-22279574

ಫ್ಯಾಕ್ಸ್ : 080-22220774

ಇ-ಮೇಲ್ :
editorkubf@gmail.com

ಅಂತರ್ಜಾಲ : www.kubfed.com

ಮುದ್ರಣ : ನವರತ್ನ ಪ್ರಿಂಟರ್ಸ್, ಬೆಂಗಳೂರು.

ಸೆನ್ಸೆಕ್ಸ್ ಏರಿಕೆ ದೇಶದ ಆರ್ಥಿಕತೆಯ ಸಂಕೇತವಲ್ಲ: ರಘುರಾಮ್‌ರಾಜನ್..... 5

ಶೇ.67ರಷ್ಟು ತೆರಿಗೆ ಪಾವತಿದಾರರಿಗೆ ಹಳೆಯ ಪದ್ಧತಿಯೇ ಅಚ್ಚುಮೆಚ್ಚು.........7

ವೇತನದಾರರಿಗೆ ಗೃಹಸಾಲ 8

ಅಡಮಾನರಹಿತ ವೈಯಕ್ತಿಕ ಸಾಲದ ನಿಯಮ 9

ಹಣಕಾಸು ಸಂಸ್ಥೆಗಳಿಗೆ ಆರ್‌ಬಿಐ ಕಡಿವಾಣ ಸಾಧ್ಯತೆ 10

ನವೆಂಬರ್‌ನಲ್ಲಿ ಭಾರತದ ರಫ್ತು –ಆಮದು ಅಂತರದಲ್ಲಿ ಗಣನೀಯ ಇಳಿಕೆ.....11

ನಿಮ್ಮ ಹಣಕ್ಕೆ ಬಯೋಮೆಟ್ರಿಕ್ಸ್ ಲಾಕ್ 12

ಹಣಕಾಸು ವಿಷಯ ಓದಿದವರು ಆಯ್ಕೆ ಮಾಡಿಕೊಳ್ಳಬಹುದಾದ ಸೂಕ್ತ ವ್ಯವಹಾರಗಳು 14

ಅನವಶ್ಯಕವಾಗಿ ಹಣ ಪೋಲಾಗುವುದನ್ನು ತಪ್ಪಿಸುವ 10 ಸೂತ್ರಗಳು 16

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮ 1960ರ ಮುಖ್ಯಾಂಶಗಳ ಟಿಪ್ಪಣಿ........ 19

ಡಾಲರ್ ಎದುರು ರೂಪಾಯಿ ಮೌಲ್ಯವೇಕೆ ಕುಸಿಯುತ್ತಿದೆ? 23

ಎಸ್.ಪಿ.ಎಸ್. ಬ್ಯಾಂಕ್: ರಜತ ಮಹೋತ್ಸವ ಸಂಭ್ರಮ 25

ಮಹಾಲಿಂಗಪೂರ ಪಟ್ಟಣ ಸಹಕಾರಿ ಬ್ಯಾಂಕಿನ ಯಶೋಗಾತೆ 27

ಬ್ಯಾಂಕ್ ಲಾಕರ್ ಒಪ್ಪಂದಗಳ ಬಗ್ಗೆ ಪರಿಷ್ಕೃತ ಮಾರ್ಗಸೂಚಿ........29

ಸೈಬರ್ ಮೂಲಕ ಕೋಟ್ಯಂತರ ರೂಪಾಯಿ ವಂಚನೆ 32

Recent Policy initiatives by the Reserve Bank of India for Urban co-operative banks 34

ಗ್ಲಾಮರ್ ಪ್ರಪಂಚ 37

ಗಣ್ಯರ ಅನಿಸಿಕೆ 39

ಸೆನ್ಸೆಕ್ಸ್ ಏರಿಕೆ ದೇಶದ ಆರ್ಥಿಕತೆಯ ಸಂಕೇತವಲ್ಲ: ರಘುರಾಮ್‌ರಾಜನ್

ಈ ದೇಶದಲ್ಲಿ ದೊಡ್ಡ ಸಂಸ್ಥೆಗಳ ಲಾಭ ವೃದ್ಧಿಯಾಗಿದೆ. ಆದರೆ ಸಣ್ಣ ಮತ್ತು ಅಸಂಘಟಿತ ವಲಯದ ಸಂಸ್ಥೆಗಳ ಸ್ಥಿತಿ ಕಳಪೆಯಾಗಿದೆ. ದೇಶದ ನೈಜ ಸ್ಥಿತಿಯನ್ನು ಮುಚ್ಚಿಟ್ಟು ಭಾರತವು ಉನ್ನತ ಮಟ್ಟದಲ್ಲಿದೆ ಎನ್ನುವ ತಪ್ಪು ಸಂದೇಶವನ್ನು ಷೇರು ಮಾರುಕಟ್ಟೆಯ ಏರಿಕೆಯು ನೀಡುತ್ತಿದೆ.

ಮುಂಬಯಿ: ಭಾರತದ ಆರ್ಥಿಕತೆ ವೃದ್ಧಿಯಾಗುತ್ತಿದೆ ಎನ್ನುವ ತಪ್ಪು ಸಂದೇಶವನ್ನು ಷೇರು ಮಾರುಕಟ್ಟೆ ಜಿಗಿತವು ನೀಡುತ್ತಿದೆ. ಇದೊಂದು ದಾರಿ ತಪ್ಪಿಸುವ ಚಿತ್ರಣವಾಗಿದೆ ಎಂದು ವಿತ್ತ ತಜ್ಞ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ರಘುರಾಮ್ ರಾಜನ್ ಹೇಳಿದ್ದಾರೆ.

ಇತ್ತೀಚೆಗಷ್ಟೇ ಬಿಡುಗಡೆಯಾದ 'ಬ್ರೇಕಿಂಗ್ ದಿ ಮೌಲ್ಡ್' ಪುಸ್ತಕದಲ್ಲಿ ರಘುರಾಮ್ ರಾಜನ್ ಮತ್ತು ಅರ್ಥಶಾಸ್ತ್ರಜ್ಞ ರೋಹಿತ್ ಲಂಬಾ ಅವರು, "ದೊಡ್ಡವರು ದೊಡ್ಡವರಾಗುತ್ತಿದ್ದಾರೆ. ಚಿಕ್ಕವರು ಚಿಕ್ಕವರಾಗುತ್ತಿದ್ದಾರೆ. ಷೇರು ಮಾರುಕಟ್ಟೆಯ ಏರಿಕೆಯು ಭಾರತದ ಆರ್ಥಿಕತೆಯು ವಿಸ್ತರಣೆಯಾಗುತ್ತಿದೆ ಎನ್ನುವ ತಪ್ಪು ಸಂದೇಶವನ್ನು ನೀಡುತ್ತಿದೆ," ಎಂದಿದ್ದಾರೆ.

"ದಲಾಲ್ ಸ್ಟ್ರೀಟ್‌ನಲ್ಲಿ ಭಾರತವು 4 ಟ್ರಿಲಿಯನ್ ಡಾಲರ್ ಮಾರುಕಟ್ಟೆ ಬಂಡವಾಳವನ್ನು ಹೊಂದಿರುವ ದೇಶಗಳ ಗಣ್ಯ ಗುಂಪಿಗೆ ಸೇರುತ್ತಿದೆ. ಅಲ್ಲದೇ, ಸೆನ್ಸೆಕ್ಸ್ ಸಾರ್ವಕಾಲಿಕ ದಾಖಲೆಯ ಗರಿಷ್ಠ ಮಟ್ಟವನ್ನು ತಲುಪಿದೆ. ಆದರೆ, ಇದಾವುದೂ ಆರ್ಥಿಕ ಅಭಿವೃದ್ಧಿಗೆ ಉತ್ತಮ ಸೂಚಕವಲ್ಲ," ಎಂದು ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ರಘುರಾಮ್ ರಾಜನ್ ವಾದಿಸಿದ್ದಾರೆ.

"ನೋಟು ಅಮಾನ್ಯೀಕರಣ, ಕೋವಿಡ್ ಬಿಕ್ಕಟ್ಟು ಮತ್ತು ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಅನುಷ್ಠಾನ ಸೇರಿದಂತೆ ವಿವಿಧ ಕಾರಣಗಳಿಗಾಗಿ, ಈ ದೇಶದಲ್ಲಿ ದೊಡ್ಡ ಸಂಸ್ಥೆಗಳ ಲಾಭ ವೃದ್ಧಿಯಾಗಿದೆ. ಆದರೆ ಸಣ್ಣ ಮತ್ತು ಅಸಂಘಟಿತ ವಲಯದ ಸಂಸ್ಥೆಗಳ ಸ್ಥಿತಿ ಕಳಪೆಯಾಗಿದೆ. ದೇಶದ ನೈಜ ಸ್ಥಿತಿಯನ್ನು ಮುಚ್ಚಿಟ್ಟು ಭಾರತವು ಉನ್ನತ ಮಟ್ಟದಲ್ಲಿದೆ ಎನ್ನುವ ತಪ್ಪು ಸಂದೇಶವನ್ನು ಷೇರು ಮಾರುಕಟ್ಟೆಯ ಏರಿಕೆಯು ನೀಡುತ್ತಿದೆ," ಎಂದು ರಘುರಾಮ್ ರಾಜನ್ ಕಳವಳ ವ್ಯಕ್ತಪಡಿಸಿದ್ದಾರೆ.

2016ರ ಜೂನ್‌ನಿಂದ ಉಡುಪು ಮತ್ತು ಚರ್ಮದಂತಹ ಉತ್ಪನ್ನಗಳನ್ನು ತಯಾರಿಸುವ ಅನೇಕ ಸಣ್ಣ ಸಂಸ್ಥೆಗಳು ಕುಸಿದಿವೆ. ಹೆಚ್ಚಿನ ಉದ್ಯೋಗದ ವಲಯಗಳು ಕುಗ್ಗಿವೆ ಎಂದೂ ಅವರು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ.

ಷೇರು ಮಾರುಕಟ್ಟೆ ಏರಿಕೆ ಕಂಡಿದ್ದು ಏಕೆ?

ಜಾಗತಿಕ ಅಂಶಗಳಾದ ಆರ್ಥಿಕ ಹಿಂಜರಿತದ ಭಯ ಮತ್ತು ಚೀನಾದಿಂದ ಭಾರತಕ್ಕೆ ಕಂಪನಿಗಳ ವಲಸೆ ಮತ್ತಿತರ ಕಾರಣಗಳಿಂದ ಷೇರು ಮಾರುಕಟ್ಟೆ ಜಿಗಿದಿದೆ ಎಂದು ರಘುರಾಮ್ ರಾಜನ್ ವಿವರಿಸಿದ್ದಾರೆ.

ಷೇರುಪೇಟೆ ಸೂಚ್ಯಂಕಗಳು ಹೊಸ ಸಾರ್ವಕಾಲಿಕ ಎತ್ತರಕ್ಕೆ ತಲುಪಿದ್ದವು. ದಿನದ ಆರಂಭಿಕ ವಹಿವಾಟಿನ ವೇಳೆ ಸೆನ್ಸೆಕ್ಸ್ ಮೊದಲ ಬಾರಿಗೆ 70,000 ಅಂಕ ದಾಟಿದರೆ, ನಿಫ್ಟಿ 50 ಕೂಡ ದಾಖಲೆಯ 21,019 ಮಟ್ಟವನ್ನು ಮುಟ್ಟಿದ್ದವು.

ಉದ್ಯೋಗ ಸೃಷ್ಟಿಗೆ ಭಾರತಕ್ಕೆ ಬೇಕು 8.5% ಜಿಡಿಪಿ : ರಘುರಾಮ್‌ರಾಜನ್

ಇತರ ದೇಶಗಳಿಗೆ ಹೋಲಿಸಿದರೆ ಪ್ರತಿ ವರ್ಷ ಲಕ್ಷಾಂತರ ಜನರಿಗೆ ದೇಶವು ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ. ಒಟ್ಟಾರೆ ನಿರುದ್ಯೋಗ ದರವು ಅಕ್ಟೋಬರ್‌ನಲ್ಲಿ ಶೇ.10.05ಕ್ಕೆ ಏರಿತು. ಇದು ಕಳೆದ ಎರಡು ವರ್ಷಗಳಲ್ಲೇ ಹೆಚ್ಚಿನ ಮಟ್ಟದ್ದಾಗಿದೆ

ಹೊಸದಿಲ್ಲಿ : ಭಾರತದ ಆರ್ಥಿಕತೆಯು ಸ್ಥಿರವಾದ ಬೆಳವಣಿಗೆಯ ಲಕ್ಷಣಗಳನ್ನು ತೋರಿಸುತ್ತಿದೆ. ಆದರೆ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಕ್ಕೆ ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸಲು ಶೇ.8ಕ್ಕಿಂತ ಹೆಚ್ಚಿನ ವೇಗದಲ್ಲಿ ಜಿಡಿಪಿ ಬೆಳವಣಿಗೆಯಾಗಬೇಕಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಮಾಜಿ ಗವರ್ನರ್ ರಘುರಾಮ್ ರಾಜನ್ ಹೇಳಿದ್ದಾರೆ.

ಹಿರಿಯ ಅರ್ಥಶಾಸ್ತ್ರಜ್ಞರೂ ಆಗಿರುವ ರಾಜನ್, "ಜನಸಂಖ್ಯೆಯ ಅಗತ್ಯತೆಗಳು ಮತ್ತು ಉದ್ಯೋಗಗಳ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ನಾವು ಶೇ .8–8.5ರ ಜಿಡಿಪಿ ಸಾಧಿಸಲು ಮುಂದಾಗಬೇಕು. ಈ ನಿಟ್ಟಿನಲ್ಲಿ ಸರಕಾರ ಗಮನ ಹರಿಸಬೇಕು," ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೀಜಿಂಗ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, "ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಶೇ. 6–6.5ರ ಆರ್ಥಿಕ ಬೆಳವಣಿಗೆಯು (ಜಿಡಿಪಿ) ಪ್ರಬಲವಾಗಿದೆ. ಆದರೆ ನಮ್ಮ ಉದ್ಯೋಗಗಳ ಅಗತ್ಯಕ್ಕೆ ಹೋಲಿಸಿದರೆ ಇದು ಇನ್ನೂ ಸ್ವಲ್ಪ ನಿಧಾನವಾಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನಮ್ಮಲ್ಲಿ ಸಾಕಷ್ಟು ಯುವಕರು ಉದ್ಯೋಗ ಮಾಡಬೇಕಾಗಿದೆ. ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಬೇಕಾದ ಸವಾಲು ಸರಕಾರದ ಮುಂದಿದೆ," ಎಂದರು.

ಭಾರತದ ಆರ್ಥಿಕತೆಯ ವಿಸ್ತರಣೆಯು ಇತರ ಪ್ರಮುಖ ದೇಶಗಳ ಆರ್ಥಿಕತೆಗಳನ್ನು ಮೀರಿಸಿದ್ದರೂ, ಪ್ರತಿ ವರ್ಷ ಲಕ್ಷಾಂತರ ಜನರಿಗೆ ದೇಶವು ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ. ಒಟ್ಟಾರೆ ನಿರುದ್ಯೋಗ ದರವು ಅಕ್ಟೋಬರ್‌ನಲ್ಲಿ ಶೇ.10.05ಕ್ಕೆ ಏರಿತು. ಇದು ಕಳೆದ ಎರಡು ವರ್ಷಗಳಲ್ಲೇ ಹೆಚ್ಚಿನ ಮಟ್ಟದ್ದಾಗಿದೆ ಎಂದು ಮುಂಬಯಿ ಮೂಲದ ಸಂಶೋಧಕರ ಕೇಂದ್ರದ (ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ) ವರದಿ ಹೇಳಿದೆ. ಭಾರತೀಯ ಆರ್ಥಿಕತೆಯನ್ನು ಈ ಸಂಸ್ಥೆ ಮೇಲ್ವಿಚಾರಣೆ ಮಾಡುತ್ತದೆ.

7.5% ಜಿಡಿಪಿ ಸಾಕಾಗದು : ಮುಂದಿನ 10 ವರ್ಷಗಳಲ್ಲಿ ಭಾರತವು 7 ಕೋಟಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಅಗತ್ಯವಿದೆ ಎಂದು ಎಚ್‌ಎಸ್‌ಬಿಸಿ ಅಂದಾಜು ಮಾಡಿದೆ. ದೇಶವು ಶೇ.7.5ರ ಜಿಡಿಪಿ ಬೆಳವಣಿಗೆಯೊಂದಿಗೆ, ಉದ್ಯೋಗ ಸೃಷ್ಟಿಯ ಗುರಿ ಮುಟ್ಟಲು ಸಾಧ್ಯವಾಗದು.

ಚೀನಾ ಜತೆ ಸ್ಪರ್ಧಿಸಲು ಸೂಕ್ತ ತರಬೇತಿ ಅತ್ಯಗತ್ಯ : ಚೀನಾ ಮತ್ತು ವಿಯೆಟ್ನಾಂ ಸೇರಿದಂತೆ ಇತರ ದಕ್ಷ ಉತ್ಪಾದನಾ ರಾಷ್ಟ್ರಗಳೊಂದಿಗೆ ಸ್ಪರ್ಧಿಸಲು ಭಾರತವು ತನ್ನ ಉದ್ಯೋಗಿಗಳಿಗೆ ಕೌಶಲಾಧಾರಿತ ಸೂಕ್ತ ತರಬೇತಿ ನೀಡುವ ಅಗತ್ಯವಿದೆ ಎಂದು ರಘುರಾಮ್ ರಾಜನ್ ಹೇಳಿದ್ದಾರೆ. ಚಿಪ್ ತಯಾರಿಕೆಯಲ್ಲಿ ಚೀನಾ ದೇಶವು ಪ್ರಚಂಡ ಆವಿಷ್ಕಾರವನ್ನು ಹೊಂದಿದೆ ಮತ್ತು ಭಾರತವು ಇನ್ನೂ ಬಹಳ ಹಿಂದುಳಿದಿದೆ ಎಂದೂ ಅವರು ತಿಳಿಸಿದ್ದಾರೆ.

ಹಳೆಯ ತೆರಿಗೆ ಪದ್ಧತಿಯ ಪ್ರಯೋಜನಗಳು ಹೊಸ ತೆರಿಗೆ ಪದ್ಧತಿಯಲ್ಲಿ ಇಲ್ಲದೇ ಇರುವುದರಿಂದ ಹೆಚ್ಚಿನ ಜನರು ಹಳೆಯ ತೆರಿಗೆ ಪದ್ಧತಿಗೆ ಆದ್ಯತೆ ನೀಡಿದ್ದಾರೆ

ಶೇ. 67ರಷ್ಟು ತೆರಿಗೆ ಪಾವತಿದಾರರಿಗೆ ಹಳೆಯ ತೆರಿಗೆ ಪದ್ಧತಿಯೇ ಅಚ್ಚುಮೆಚ್ಚು

ಹೊಸದಿಲ್ಲಿ: ಹೆಚ್ಚಿನ ಆದಾಯ ತೆರಿಗೆದಾರರು ಹಳೆಯ ತೆರಿಗೆ ಪದ್ಧತಿಯ ಪರವಾಗಿದ್ದಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ. ಈ ಸಮೀಕ್ಷೆಗೆ ಒಳಪಟ್ಟವರಲ್ಲಿ ಶೇ. 37ರಷ್ಟು ಜನರು ಹೊಸ ತೆರಿಗೆ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡರೆ, ಶೇ. 67ರಷ್ಟು ಜನರು ಹಳೆಯ ತೆರಿಗೆ ವ್ಯವಸ್ಥೆಯನ್ನು ಆರಿಸಿಕೊಂಡಿದ್ದಾರೆ. ಪಿಬಿ ಫಿನ್‌ಟೆಕ್ ನಡೆಸಿದ ಸಮೀಕ್ಷೆಯಲ್ಲಿ ಈ ವಿಷಯ ಬಹಿರಂಗವಾಗಿದೆ.

ದೇಶದ 350 ನಗರಗಳಲ್ಲಿ ಈ ಸಮೀಕ್ಷೆ ನಡೆಸಲಾಗಿದೆ. ಎಲ್ಲಾ ಲೆಕ್ಕಾಚಾರಗಳನ್ನು ಮಾಡಿದ ನಂತರವೇ ಯಾವ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ನಿರ್ಧರಿಸುತ್ತೇವೆ ಎಂದು ಶೇ. 74ರಷ್ಟು ಮಹಿಳೆಯರು ಹೇಳಿದ್ದಾರೆ. ಇದೇ ರೀತಿ ನಿರ್ಧಾರ ತೆಗೆದುಕೊಂಡ ಪುರುಷರ ಸಂಖ್ಯೆ ಶೇ. 71ರಷ್ಟಿದೆ.

ದೀರ್ಘಾವಧಿ ಹೂಡಿಕೆ ಯೋಜನೆ ಹೊಂದಿರುವವರು ಹಳೆಯ ತೆರಿಗೆ ಪದ್ಧತಿಗೆ ಆದ್ಯತೆ ನೀಡಿದ್ದಾರೆ. ಅವರಲ್ಲಿ ಹೆಚ್ಚಿನವರು ಪಿಎಫ್ (ಭವಿಷ್ಯ ನಿಧಿ ಯೋಜನೆಗಳಲ್ಲಿ) ಹೂಡಿಕೆ ಮಾಡಿದ್ದಾರೆ. ಅದರ ನಂತರ ಜೀವ ವಿಮೆಗೆ ಸಂಬಂಧಿಸಿದ ಯೋಜನೆಗಳಲ್ಲಿ ಹೂಡಿಕೆ ಮಾಡಿದ್ದಾರೆ.

"ಈ ಸಮೀಕ್ಷೆಯಲ್ಲಿ ಭಾಗವಹಿಸಿದವರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಯಾವುದೇ ಲೆಕ್ಕಾಚಾರಗಳನ್ನು ಮಾಡದೆ ತೆರಿಗೆ ವ್ಯವಸ್ಥೆಯನ್ನು ಆಯ್ಕೆ ಮಾಡಿದ್ದಾರೆ. ಉಳಿದ ಮೂರನೇ ಎರಡರಷ್ಟು ಜನರಲ್ಲಿ, ಶೇ. 38ರಷ್ಟು ಜನರು ಆರ್ಥಿಕ ಸಲಹೆಗಾರರಿಂದ ಸಲಹೆ ಕೇಳಿದ್ದಾರೆ," ಎಂದು ಪಿಬಿ ಫಿನ್‌ಟೆಕ್‌ಜಂಟಿ ಗ್ರೂಪ್‌ಸಿಇಒ ಸರ್ಬ್‌ವೀರ್‌ಸಿಂಗ್‌ಹೇಳಿದ್ದಾರೆ.

* ದೀರ್ಘಾವಧಿ ಹೂಡಿಕೆಗೆ ತೆರಿಗೆ ವಿನಾಯಿತಿ ಇರುವುದರಿಂದ ಶೇ. 46ರಷ್ಟು ಜನರು ಹಳೆಯ ತೆರಿಗೆ ಪದ್ಧತಿಯನ್ನೇ ಆಯ್ಕೆ ಮಾಡಿಕೊಂಡಿದ್ದಾರೆ.



* ಶೇ. 67ರಷ್ಟು ಉದ್ಯೋಗಿಗಳು ಹಳೆಯ ತೆರಿಗೆ ವ್ಯವಸ್ಥೆಯಲ್ಲಿಯೇ ಸ್ಥಿರರಾಗಿದ್ದಾರೆ.

* ಶೇ. 49ರಷ್ಟು ಉದ್ಯಮಿಗಳು ಹೊಸ ತೆರಿಗೆ ಪದ್ಧತಿಯನ್ನು ಆರಿಸಿಕೊಂಡಿದ್ದಾರೆ.

ಹಳೆಯ ತೆರಿಗೆ ಪದ್ಧತಿಯ ಪ್ರಯೋಜನಗಳು ಹೊಸ ತೆರಿಗೆ ಪದ್ಧತಿಯಲ್ಲಿ ಇಲ್ಲದೇ ಇರುವುದರಿಂದ ಅನೇಕ ಜನರು ಹಳೆಯ ತೆರಿಗೆ ಪದ್ಧತಿಗೆ ಆದ್ಯತೆ ನೀಡಿದ್ದಾರೆ. ಆದರೆ, ಯಾವುದೇ ಹೂಡಿಕೆ ಇಲ್ಲದೆ ಅನಿವಾರ್ಯವಾಗಿ ಹಳೆಯ ತೆರಿಗೆ ಪದ್ಧತಿಯಲ್ಲಿ ಉಳಿದುಕೊಂಡು ತೆರಿಗೆ ಪಾವತಿಸುತ್ತಿದ್ದವರು ಮಾತ್ರ ಇದೀಗ ತೆರಿಗೆ ಉಳಿಸಲು ಹೊಸ ತೆರಿಗೆ ಪದ್ಧತಿ ಆಯ್ದುಕೊಂಡಿದ್ದಾರೆ. ಹೊಸ ತೆರಿಗೆ ಪದ್ಧತಿಯಲ್ಲಿ ಮಿತಿ ಹೆಚ್ಚು ಇರುವುದರಿಂದ ಇವರಿಗೆಲ್ಲ ಈಗ ತೆರಿಗೆ ಮೊತ್ತದಲ್ಲಿ ಒಂದಿಷ್ಟು ಉಳಿತಾಯವಾಗುತ್ತಿದೆ.

ವೇತನದಾರರಿಗೆ ಗೃಹಸಾಲ ನೀಡಲು ಹೆಚ್ಚಿನ ಮಣೆ ಹಾಕುತ್ತಿರುವ ಬ್ಯಾಂಕುಗಳು

ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಗೃಹ ಖರೀದಿಗೆ ಹೆಚ್ಚಿನ ಸಾಲವನ್ನೂ ಒದಗಿಸಿವೆ. ಕೆಲವು ಬ್ಯಾಂಕ್‌ಗಳು ಸುಲಭ ಇಎಂಐ, ಕಡಿಮೆ ಬಡ್ಡಿ ದರ ಮುಂತಾದ ಆಮಿಷವೊಡ್ಡಿ ಸಾಲ ನೀಡಿವೆ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಈ ರೀತಿ ನೀಡಿದ ಎಲ್ಲಾ ಸಾಲಗಳಲ್ಲಿ ಬ್ಯಾಂಕ್‌ಗಳು ಸಂಬಳ ಪಡೆಯುವವರಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿವೆ ಎನ್ನುವುದು.

ಉದಾಹರಣೆಗೆ ಗೃಹ ಖರೀದಿಗೆ ಸಾಲ ನೀಡುವ ಖಾಸಗಿ ಬ್ಯಾಂಕ್‌ಗಳು, ಸಂಬಳ ಪಡೆಯುವವರ ಸಾಲಗಳ ಮೇಲೆ ಶೇ. 9.25 ಬಡ್ಡಿ ವಿಧಿಸಿದೆ. ಅದೇ ಬ್ಯಾಂಕ್‌ಗಳು ಸ್ವಂತ ಉದ್ಯೋಗಿಗಳಿಗೆ ಅಷ್ಟೇ ಮೊತ್ತದ ಸಾಲಕ್ಕೆ ಶೇ. 9.40ರಷ್ಟು ಹೆಚ್ಚಿನ ಬಡ್ಡಿ ವಿಧಿಸಿದೆ.

ಬ್ಯಾಂಕ್‌ಗಳು ಉದ್ಯೋಗದಾತರಿಗೆ ಅಂದರೆ ಸಂಬಳ ಪಡೆಯುವವರಿಗೆ ಹಾಗೂ ಸ್ವಂತ ಉದ್ಯೋಗ ಮಾಡುವವರಿಗೆ ಈ ತಾರತಮ್ಯ ಮಾಡಲು ಕೆಲವು ಕಾರಣಗಳಿವೆ. ಅವು ಯಾವುವೆಂದರೆ, ಸಾಮಾನ್ಯವಾಗಿ ಸಾಲ ಒದಗಿಸುವ ಬ್ಯಾಂಕ್‌ಗಳು ಅದರಿಂದ ಬರುವ ಬಡ್ಡಿ ದರವನ್ನೇ ಅವಲಂಬಿಸಿವೆ. ಸಾಲಗಾರ ಬಡ್ಡಿ ಕಟ್ಟುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡಿದರೆ ಬ್ಯಾಂಕ್‌ಗಳ ಬಡ್ಡಿ ಅಂದರೆ ಆದಾಯ ಖೋತವಾಗುತ್ತದೆ. ಹೀಗಾಗದಂತೆ ತಡೆಯುವುದೇ ಬ್ಯಾಂಕ್‌ಗಳ ಮಹಾನ್‌ಧ್ಯೇಯ. ಇದಕ್ಕಾಗಿ ಉದ್ಯೋಗ ಭದ್ರತೆ ಇರುವ ವೇತನದಾರರನ್ನು ಬ್ಯಾಂಕ್‌ಗಳು ಹೆಚ್ಚು ನೆಚ್ಚಿಕೊಳ್ಳುತ್ತವೆ ಮತ್ತು ಅಂತಹವರನ್ನು ಕರೆದು ಸಾಲ ಕೊಡುತ್ತವೆ.

ವೇತನದಾರರಿಗೆ ನಿಗದಿತ ಆದಾಯವಿರುತ್ತದೆ. ಆದರೆ ಸ್ವಂತ ಉದ್ಯೋಗಿಗಳಲ್ಲಿ ಆದಾಯ ಏರಿಳಿತವಾಗುತ್ತಿರುತ್ತದೆ. ಈ ಕಾರಣ ಬ್ಯಾಂಕ್‌ಗಳು ಸಾಲ ನೀಡುವ ವಿಷಯದಲ್ಲಿ ವೇತನದಾರರಿಗೆ ಮಣೆ ಹಾಕುತ್ತವೆ.

ಬ್ಯಾಂಕ್‌ಖಾತೆಗೆ ಸಂಬಂಧಿಸಿದಂತೆ ಇರುವ ಸಿಬಿಲ್‌ಟ್ರಾನ್ಸ್‌ಯೂನಿಯನ್‌ಪ್ರಕಾರ, ಉದ್ದೇಶಪೂರ್ವಕವಾಗಿ ಬ್ಯಾಂಕ್‌ಗೆ ಬಡ್ಡಿ ಕಟ್ಟದಿರುವ ಪ್ರಕರಣಗಳ ಅಂದಾಜು ಮೊತ್ತ 50 ಸಾವಿರ ಕೋಟಿ ರೂ.ಗಳಷ್ಟಿದೆಯಂತೆ. ಮಾರ್ಚ್ 2022ರಲ್ಲಿ ಒಟ್ಟು 14,899 ಖಾತೆಗಳಿಂದ 3,04,063 ಕೋಟಿ ರೂ. ಬಾಕಿ ಇದ್ದು, 2023ರ ಮಾರ್ಚ್‌ಗೆ ಹೀಗೆ ಬಡ್ಡಿ ಕಟ್ಟದಿರುವ ಖಾತೆಗಳ ಸಂಖ್ಯೆ 16,883ರಷ್ಟಿತ್ತು ಎನ್ನಲಾಗಿದೆ. ಹೀಗೆ ಆರು ತಿಂಗಳಿಗಿಂತ ಹೆಚ್ಚು ಅವಧಿಗೆ ಸಾಲ ಅಥವಾ ಬಡ್ಡಿ ಕಟ್ಟದಿದ್ದರೆ ಅಂತಹ ಖಾತೆ ಅಥವಾ ಖಾತೆದಾರರನ್ನು ಸುಸ್ತಿದಾರರು ಎಂದೇ ಪರಿಗಣಿಸಲಾಗುತ್ತದೆ. ಹೀಗೆ ಬಡ್ಡಿಯನ್ನು ನಿರಂತರವಾಗಿ ಕಟ್ಟಲು ಹಿಂಜರಿಯುವವರಲ್ಲಿ ಸ್ವಂತ ಉದ್ಯೋಗಿಗಳೇ ಹೆಚ್ಚು ಎನ್ನುತ್ತದೆ ಸಿಬಿಲ್ ವರದಿ.

ಆದ್ದರಿಂದ ಬ್ಯಾಂಕ್ ಮತ್ತು ಗೃಹ ಖರೀದಿ ಹಣಕಾಸು ಸಂಸ್ಥೆಗಳು ಸಂಬಳ

ಇರುವವರೆಡೆಗೆ ಹೆಚ್ಚು ಗಮನ ಹರಿಸುತ್ತವೆ. ಸಂಬಳ ಪಡೆಯುವವರ ತಿಂಗಳ ದುಡಿಮೆ ತಮ್ಮ ಬ್ಯಾಂಕ್‌ಗೆ ಬರುವಂತೆ ಅವರು ಮಾಡಿರುತ್ತಾರೆ. ಇದರಿಂದ ಬ್ಯಾಂಕ್‌ಗೆ ಸುಲಭವಾಗಿ ಹಣ ವಹಿವಾಟು ಆಗುತ್ತದೆ. ತನ್ನ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ನೌಕರನಿಗೆ ಬರುವ ಸಂಬಳದ ಬಗ್ಗೆ ಬ್ಯಾಂಕ್‌ಗಳಿಗೆ ಅಂದಾಜು ಇರುತ್ತದೆ ಮತ್ತು ಅವನು ಪಡೆದ ಸಾಲದ ಮರುಪಾವತಿ ಅಥವಾ ಬಡ್ಡಿ ಹಣದ ಪಾವತಿಗೆ ಆ ಬ್ಯಾಂಕ್ ಖಾತೆಯ ನೆರವು ಪಡೆಯುತ್ತಿರುತ್ತಾನೆ. ಹೀಗಾಗಿ ಬ್ಯಾಂಕ್‌ಗಳು ಸಂಬಳ ಬರುವವರ ಬಗ್ಗೆ ಹೆಚ್ಚು ಆಶಾದಾಯಕವಾಗಿರುತ್ತವೆ.

ಇನ್ನು ಸ್ವಂತ ಉದ್ಯೋಗಿಗಳ ಆದಾಯ ಅಸ್ಥಿರವಾದದ್ದು. ಈ ತಿಂಗಳು ಹೆಚ್ಚು ಬರಬಹುದು, ಮುಂದೆ ಕೆಲವು ತಿಂಗಳು ಹೆಚ್ಚು ಆದಾಯ ಆಗಬಹುದು. ಆದರೆ ಆದೇ ನಿರಂತರವಲ್ಲ. ಕೆಲವು ತಿಂಗಳು ಇದು ನಿಂತರೂ ನಿಲ್ಲಬಹುದು ಎನ್ನುವ ಆತಂಕ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳದ್ದಾಗಿರುತ್ತದೆ.

ಗೃಹ ಖರೀದಿಗೆ ಸಾಲ ಪಡೆಯುವ ಅರ್ಜಿದಾರರು ಉತ್ತಮ ಸಿಬಿಲ್‌ಸ್ಕೋರ್ ಹೊಂದಿದ್ದರೆ, ಬ್ಯಾಂಕ್‌ಗಳು ಅಂತಹವರಿಗೆ ಸಾಲವನ್ನು ಸುಲಭವಾಗಿ ಒದಗಿಸುತ್ತವೆ. ಜಾಮೀನುದಾರರೊಂದಿಗೆ ಜಂಟಿಯಾಗಿ ಅರ್ಜಿ ಸಲ್ಲಿಸುವವರಿಗೆ ಸಾಲ ಪಡೆಯುವ ಪ್ರಕ್ರಿಯೆ ಇನ್ನೂ ಸುಲಭದ ಕೆಲಸ. ಇಂತಹ ಸಾಲದ ಅರ್ಜಿಗಳು ಬೇಗ ಅನುಮೋದನೆ ಪಡೆಯುತ್ತವೆ. ಅಲ್ಲದೆ ಸಂಬಳ ಪಡೆಯುವವರ ಕಚೇರಿ ವಿಳಾಸ, ಮನೆ ವಿಳಾಸಗಳೆರಡರ ಮಾಹಿತಿಯೂ ಇರುತ್ತದೆ. ಜೊತೆಗೆ ಅವರ ಖಾತೆ ತಮ್ಮ ಬ್ಯಾಂಕ್‌ನಲ್ಲೇ ಇರುವುದರಿಂದ, ಒಂದು ವೇಳೆ ಏನಾದರೂ ಸಾಲ ಪಡೆದವರು ಸುಸ್ತಿದಾರರಾದರೆ, ಬ್ಯಾಂಕ್‌ಗಳಿಗೆ ಅವರ ಮುಂದಿನ ಹೆಜ್ಜೆ ಚೆನ್ನಾಗಿಯೇ ತಿಳಿದಿರುತ್ತದೆ.

ಅಡಮಾನರಹಿತ ವೈಯಕ್ತಿಕ ಸಾಲದ ನಿಯಮಗಳನ್ನು ಬಿಗಿಗೊಳಿಸಿದ ಆರ್‌ಬಿಐ

ಬ್ಯಾಂಕುಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಅಡಮಾನರಹಿತ ವೈಯಕ್ತಿಕ ಸಾಲ ನೀಡುವುದರಿಂದ ಆಗಬಹುದಾದ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್‌ವೇಯ್ಟ್) ಈಗಿರುವ ಶೇ 100 ರಿಂದ ಶೇ 125ಕ್ಕೆ ಆರ್‌ಬಿಐ ಹೆಚ್ಚಿಸಿದೆ. ಈ ಕುರಿತು ಅವರು ವಿವರಿಸಿದ್ದಾರೆ. ಗೃಹ, ವಾಹನ ಮತ್ತು ಸಣ್ಣ ಪ್ರಮಾಣದಲ್ಲಿ ವಹಿವಾಟು ನಡೆಸುವುದಕ್ಕೆ ನೀಡುವ ಸಾಲಗಳನ್ನು ಈ ನಿಯಮದಿಂದ ಹೊರಗಿಡಲಾಗಿದೆ. ಈ ರೀತಿಯ ಸಾಲಗಳನ್ನು ನೀಡುವುದರಿಂದ ಆಗಲಿರುವ ಪ್ರಯೋಜನವನ್ನು ಗಮನದಲ್ಲಿ ಇಟ್ಟುಕೊಂಡು ಈ ನಿರ್ಧಾರಕ್ಕೆ ಬರಲಾಗಿದೆ

ಮುಂಬೈ : ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಎದುರಾಗಬಹುದಾದ ಅಪಾಯವನ್ನು ತಡೆಯುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆಯ ಹೆಜ್ಜೆಯಾಗಿ ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆಯ ನಿಯಮಗಳನ್ನು ಬಿಗಿಗೊಳಿಸಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತದಾಸ್ ಅವರು ಹೇಳಿದ್ದಾರೆ.

ಬ್ಯಾಂಕಿಂಗ್ ವ್ಯವಸ್ಥೆಯ ಚೇತರಿಕೆಯು ಮುಂದುವರಿಯಲಿದೆ. ವ್ಯವಸ್ಥೆಗೆ ತಕ್ಷಣಕ್ಕೆ ಯಾವುದೇ ಅಪಾಯ ಇಲ್ಲ ಎಂದು ಅವರು ಹೇಳಿದ್ದಾರೆ. ಬಹಳ ಎಚ್ಚರಿಕೆಯಿಂದ ಇದ್ದು, ಯಾವುದಾದರೂ ಅಪಾಯ ಎದುರಾಗುತ್ತಿದೆಯೇ ಎನ್ನುವುದನ್ನು ಮುಂಚಿತವಾಗಿಯೇ ಪತ್ತೆ ಮಾಡುವಂತೆ ಹಣಕಾಸು ಸಂಸ್ಥೆಗಳಿಗೆ ಅವರು ಸಲಹೆ ನೀಡಿದ್ದಾರೆ.

ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ (ಫಿಕ್ಕಿ) ಮತ್ತು ಭಾರತೀಯ ಬ್ಯಾಂಕ್‌ಗಳ ಒಕ್ಕೂಟ (ಐಬಿಎ) ಆಯೋಜಿಸಿದ್ದ ಎಫ್‌ಐಬಿಎಸಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬ್ಯಾಂಕಿಂಗ್ ವ್ಯವಸ್ಥೆಯನ್ನು ಸ್ಥಿರವಾಗಿ ಇರಿಸುವ ಉದ್ದೇಶದಿಂದ ಮುನ್ನೆಚ್ಚರಿಕೆಯ ಭಾಗವಾಗಿ ಈಚೆಗೆ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಬ್ಯಾಂಕುಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಅಡಮಾನರಹಿತ ವೈಯಕ್ತಿಕ ಸಾಲ ನೀಡುವುದರಿಂದ ಆಗಬಹುದಾದ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್‌ವೇಯ್ಟ್) ಈಗಿರುವ ಶೇ 100 ರಿಂದ ಶೇ 125ಕ್ಕೆ ಆರ್‌ಬಿಐ ಹೆಚ್ಚಿಸಿದೆ. ಈ ಕುರಿತು ಅವರು ವಿವರಿಸಿದ್ದಾರೆ. ಪಟ್ಟಣ ಸಹಕಾರ ಬ್ಯಾಂಕುಗಳು ಈಗಾಗಲೆ ಆಧಾರ ರಹಿತ ಸಾಲಗಳಿಗೆ 125% ರಿಸ್ಕ್‌ವೇಯ್ಟ್ ತೆಗೆದಿರಿಸಬೇಕಾಗಿದೆ.

ಗೃಹ, ವಾಹನ ಮತ್ತು ಸಣ್ಣ ಪ್ರಮಾಣದಲ್ಲಿ ವಹಿವಾಟು ನಡೆಸುವುದಕ್ಕೆ ನೀಡುವ ಸಾಲಗಳನ್ನು ಈ ನಿಯಮದಿಂದ ಹೊರಗಿಡಲಾಗಿದೆ. ಈ ರೀತಿಯ ಸಾಲಗಳನ್ನು ನೀಡುವುದರಿಂದ ಆಗಲಿರುವ ಪ್ರಯೋಜನವನ್ನು ಗಮನದಲ್ಲಿ ಇಟ್ಟುಕೊಂಡು ಈ ನಿರ್ಧಾರಕ್ಕೆ ಬರಲಾಗಿದೆ. ಅಲ್ಲದೆ, ಈ ರೀತಿಯ ಸಾಲಗಳಿಂದ ಅಪಾಯ ಎದುರಾಗುವ ಸಾಧ್ಯತೆ ಕಡಿಮೆ ಎಂದು ದಾಸ್ ಹೇಳಿದ್ದಾರೆ.

ಅಪಾಯ ನಿರ್ವಹಿಸುವ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳುವಂತೆ ಮತ್ತು ಯಾವುದೇ ರೀತಿಯ ಅಡಚಣೆಗಳನ್ನು ಎದುರಿಸಲು ಸಜ್ಜಾಗುವಂತೆ ಬ್ಯಾಂಕ್‌ಗಳಿಗೆ ಸಲಹೆ ನೀಡಿದ್ದಾರೆ. ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಆರ್‌ಬಿಐ ಇನ್ನಷ್ಟು ಬಲಪಡಿಸಿದೆ ಎಂದೂ ತಿಳಿಸಿದ್ದಾರೆ.

ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳ ಸ್ಥಿತಿ ಉತ್ತಮವಾಗಿದೆ. ಇಂತಹ ಸಂದರ್ಭದಲ್ಲಿ ಅಪಾಯವು ಎಲ್ಲಿಂದ ಎದುರಾಗಬಹುದು ಎನ್ನುವುದನ್ನು ಪರಿಶೀಲಿಸಿಕೊಳ್ಳುವ ಅಗತ್ಯ ಇದೆ ಎಂದು ದಾಸ್‌ಸಲಹೆ ನೀಡಿದ್ದಾರೆ.

'ಬಡ್ಡಿ ವಿಚಾರದಲ್ಲಿ ವಿವೇಚನೆಯಿಂದ ವರ್ತಿಸಿ'

ಬಡ್ಡಿದರದ ವಿಚಾರದಲ್ಲಿ ವಿವೇಚನೆಯಿಂದ ವರ್ತಿಸುವಂತೆ ಎನ್‌ಬಿಎಫ್‌ಸಿ ಮತ್ತು ಕಿರು ಹಣಕಾಸು ಸಂಸ್ಥೆಗಳಿಗೆ ದಾಸ್‌ಸೂಚನೆ ನೀಡಿದ್ದಾರೆ. ಬಡ್ಡಿ ದರಗಳು ನಿಯಂತ್ರಣಕ್ಕೆ ಒಳಪಡದೇ ಇದ್ದರೂ ಕೆಲವು ಎನ್‌ಬಿಎಫ್‌ಸಿ ಮತ್ತು ಕಿರು ಹಣಕಾಸು ಸಂಸ್ಥೆಗಳು ಗರಿಷ್ಠ ಬಡ್ಡಿ ವಿಧಿಸುವ ಮೂಲಕ ಹೆಚ್ಚಿನ ಲಾಭ ಮಾಡಿಕೊಳ್ಳುತ್ತಿವೆ.

ಹೀಗಾಗಿ ಕಿರು ಹಣಕಾಸು ಸಂಸ್ಥೆಗಳು ಬಡ್ಡಿದರ ನಿಗದಿಪಡಿಸುವಾಗ ವಿವೇಚನೆಯಿಂದ ವರ್ತಿಸುವ ಅಗತ್ಯ ಇದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಬಡ್ಡಿದರ ನಿಗದಿಪಡಿಸುವಾಗ ಸಾಲ ಪಡೆಯುವವರ ಮರುಪಾವತಿ ಸಾಮರ್ಥ್ಯವನ್ನು ಗಮನದಲ್ಲಿ ಇಟ್ಟುಕೊಳ್ಳುವಂತೆ ದಾಸ್ ಹೇಳಿದ್ದಾರೆ.

ಹಣಕಾಸು ಸಂಸ್ಥೆಗಳಿಗೆ ಆರ್‌ಬಿಐ ಕಡಿವಾಣ : ಪರ್ಸನಲ್ ಲೋನ್ ದುಬಾರಿ ಸಾಧ್ಯತೆ

ಮುಂಬೈ: ಹಲವಾರು ವಾರಗಳಿಂದ ಅಸುರಕ್ಷಿತ ವೈಯಕ್ತಿಕ ಸಾಲಗಳ ಹೆಚ್ಚಳದ ಬಗ್ಗೆ ಸಾಲ ನೀಡುವ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿದ ನಂತರ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬುಧವಾರ ಬ್ಯಾಂಕುಗಳು ಮತ್ತು ಬ್ಯಾಂಕೇತರ ಸಂಸ್ಥೆಗಳಿಗೆ ಬಂಡವಾಳ ಮೀಸಲು ಪ್ರಮಾಣ ಹೆಚ್ಚಿಸುವ ಮೂಲಕ ಈ ವಿಭಾಗಕ್ಕೆ ಸಾಲ ನೀಡುವುದನ್ನು ದುಬಾರಿಯಾಗಿಸಲು ಮುಂದಾಗಿದೆ.

ಆರ್‌ಬಿಐ ಗ್ರಾಹಕ ಸಾಲದ ಮೇಲಿನ ರಿಸ್ಕ್ ವೇಯ್ಟ್ ಅನ್ನು ನಾಲ್ಕನೇ ಒಂದು ಭಾಗದಷ್ಟು ಅಂದರೆ ಶೇ.100 ರಿಂದ 125ಕ್ಕೆ ಹೆಚ್ಚಿಸಿದೆ. ಇದರರ್ಥ ಈ ಹಿಂದೆ ಬ್ಯಾಂಕುಗಳು ತಾವು ಸಾಲ ನೀಡಿದ ಪ್ರತಿ 100 ರೂ.ಗೆ 9 ರೂ.ಗಳ ಬಂಡವಾಳ ಕಾಯ್ದುಕೊಳ್ಳಬೇಕಿತ್ತು. ಆದರೆ, ಈಗ ಅವು 11.25 ರೂ.ಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ.

ಶೇ. 100ಕ್ಕಿಂತ ಕಡಿಮೆ ರಿಸ್ಕ್ ವೇಯ್ಟ್ ಹೊಂದಿದ ಕ್ರೆಡಿಟ್ ಕಾರ್ಡ್ ನೀಡುವಿಕೆ ಮತ್ತು ಎನ್‌ಬಿಎಫ್‌ಸಿಗಳಿಗೆ ಬ್ಯಾಂಕ್‌ಗಳು ನೀಡುವ ಸಾಲದ ಮೇಲಿನ ರಿಸ್ಕ್ ವೇಯ್ಟ್ ಅನ್ನು ಆರ್‌ಬಿಐ ಹೆಚ್ಚಿಸಿದೆ. ಈ ನಿರ್ದೇಶನವು ಉನ್ನತ ಶ್ರೇಣಿಯ ಹಣಕಾಸು ಕಂಪನಿಗಳ ಬ್ಯಾಂಕ್ ಸಾಲದ ವೆಚ್ಚ ಹೆಚ್ಚಿಸುತ್ತದೆ. ಆದರೆ ವಸತಿ ಮತ್ತು ಸಣ್ಣ ಮತ್ತು ಮಧ್ಯಮ ಉದ್ಯಮಗಳಂತಹ ಆದ್ಯತೆಯ ಕ್ಷೇತ್ರಗಳಿಗೆ ಸಾಲ ನೀಡುವ ಎನ್‌ಬಿಎಫ್‌ಸಿಗಳನ್ನು ಹೊಸ ನಿಯಮದಿಂದ ಹೊರಗಿಡಲಾಗಿದೆ. ಅಲ್ಲದೇ ಹೊಸ ನಿಯಮ ಗೃಹ, ವಾಹನ ಅಥವಾ ಶಿಕ್ಷಣ ಸಾಲಗಳ ಮೇಲೆ ಪರಿಣಾಮ ಬೀರುವುದಿಲ್ಲ. ಅಸುರಕ್ಷಿತ ವೈಯಕ್ತಿಕ ಸಾಲಗಳಿಗೆ ಆರ್‌ಬಿಐ ಅಪಾಯದ ವೇಟೇಜ್ ಅನ್ನು ಹೆಚ್ಚಿಸಿದ್ದರೂ, ಬ್ಯಾಂಕ್ ಹಲವಾರು ವಿನಾಯಿತಿಗಳನ್ನು ಕೂಡ ನೀಡಿರುವುದರಿಂದ ಚಿಲ್ಲರೆ ಸಾಲದ ದರಗಳಲ್ಲಿ ಹೆಚ್ಚಳವಾಗುವ ಸಾಧ್ಯತೆಗಳಿಲ್ಲ ಎಂಬುದು ಎನ್‌ಬಿಎಫ್‌ಸಿಗಳ ಅಭಿಪ್ರಾಯವಾಗಿದೆ. ಹೆಚ್ಚಿದ ಬಂಡವಾಳದ ಅವಶ್ಯಕತೆಗಳು ಸಾಲದ ಬಡ್ಡಿದರ ಹೆಚ್ಚಾಗಲು ಕಾರಣವಾಗಬಹುದು. ಇದರಿಂದ ಸಾಲ ನೀಡುವ ವೇಗ ಕುಂಠಿತವಾಗಬಹುದು. ಆದರೆ ಸಾಲದ ದರಗಳು ಕೇವಲ ನಿಯಮಗಳಿಂದ ಮಾತ್ರವಲ್ಲದೇ ಸ್ಪರ್ಧಾತ್ಮಕ ಮಾರುಕಟ್ಟೆ ಮತ್ತು ಮಾರುಕಟ್ಟೆ ಬೇಡಿಕೆಯಿಂದ ಕೂಡ ಪ್ರಭಾವಿತವಾಗುತ್ತವೆ.

ಕೆಲ ಮಾದರಿಯ ಸಾಲಗಳ ಬಗ್ಗೆ ಆರ್‌ಬಿಐ ಸ್ಪಷ್ಟವಾಗಿ ಅಸಮಾಧಾನ ವ್ಯಕ್ತಪಡಿಸಿದೆ. ಬ್ಯಾಂಕ್ ಸಾಲಗಳ ಬೆಳವಣಿಗೆ ಸುಮಾರು 20% ರಷ್ಟು ಹೆಚ್ಚಾಗಿದ್ದರೆ, ಚಿಲ್ಲರೆ ಸಾಲಗಳು 30% ರಷ್ಟು ಹೆಚ್ಚಾಗಿದೆ. ಇದರೊಳಗೆ ಕ್ರೆಡಿಟ್ ಕಾರ್ಡ್ ಬಾಕಿ ಸುಮಾರು ಶೇ.30ರಷ್ಟು ಹೆಚ್ಚಾಗಿದೆ ಎಂದು ಅಂದಾಜಿಸಲಾಗಿದೆ. ಅಸುರಕ್ಷಿತ ಮತ್ತು ವೈಯಕ್ತಿಕ ಮತ್ತು ಗ್ರಾಹಕ ಸಾಲಗಳನ್ನು ನೀಡುವ ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ ಬ್ಯಾಂಕುಗಳು ಸಾಲ ನೀಡುತ್ತಿವೆ.

ಎರಡು ತಿಂಗಳಲ್ಲಿ 11 ಬಿಲಿಯನ್ ತಲುಪಿದ ಯುಪಿಐ ವಹಿವಾಟು : ಆರ್‌ಬಿಐ

ನವದೆಹಲಿ : ಮೊಬೈಲ್ ಪಾವತಿಗಳ ವೇದಿಕೆ ಏಕೀಕೃತ ಪಾವತಿ ಇಂಟರ್ಫೇಸ್ (ಯುಪಿಐ) ಎರಡು ತಿಂಗಳ ಅವಧಿಯಲ್ಲಿ 11.4 ಶತಕೋಟಿ ವಹಿವಾಟುಗಳ ಸಾಧನೆ ಮಾಡಿದ್ದು ಹೊಸ ದಾಖಲೆಯನ್ನು ಮಾಡಿದೆ ಎಂದು ಆರ್‌ಬಿಐ ತಿಳಿಸಿದೆ. ಅಕ್ಟೋಬರ್ 2023ರಲ್ಲಿ 11 ಬಿಲಿಯನ್ ಯುಪಿಐ ವಹಿವಾಟುಗಳನ್ನು ಮಾಡಲಾಗಿದೆ. ಗ್ರಾಹಕರು ಮೊಬೈಲ್‌ನಲ್ಲಿ ಯುಪಿಐ ಬಳಸಿಕೊಂಡು ರಿಯಲ್ ಟೈಮ್‌ನಲ್ಲಿ ತಡೆರಹಿತ ಪಾವತಿಗಳನ್ನು ನಡೆಸುತ್ತಿದ್ದಾರೆ ಎಂದು ಅಪೆಕ್ಸ್ ಬ್ಯಾಂಕ್ ತಿಳಿಸಿದೆ. ಯುಪಿಐ ಮೂಲಕ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಸೌಲಭ್ಯವು ದೃಢವಾದ ಅಳವಡಿಕೆಯನ್ನು ಪ್ರದರ್ಶಿಸಿದೆ, ಅಕ್ಟೋಬರ್ 2023ಕ್ಕಿಂತ 2022ರಲ್ಲಿ ಹಣ ವರ್ಗಾವಣೆ ದ್ವಿಗುಣವಾಗಿದೆ. ಕ್ಯಾಶ್‌ಬ್ಯಾಕ್, ರಿವಾರ್ಡ್ ಪಾಯಿಂಟ್‌ಗಳು, ಕಾಂಟ್ಯಾಕ್ಟ್‌ಲೆಸ್ ಕಾರ್ಡ್‌ಗಳು ಮತ್ತು ಯುಪಿಐ – ಲಿಂಕ್ಡ್ ಕ್ರೆಡಿಟ್ ಕಾರ್ಡ್‌ಗಳ ಬಳಕೆಯಲ್ಲೂ ಹೆಚ್ಚಳವಾಗಿದೆ. ಹಬ್ಬದ ಸೀಸನ್‌ಗಳಾದ ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಯುಪಿಐ ಪ್ಲಾಟ್‌ಫಾರ್ಮ್ ಇತರ ತಿಂಗಳುಗಳಿಗಿಂತ ಹೆಚ್ಚಿನ ಮೇಲುಗೈ ಸಾಧಿಸುತ್ತದೆ, ಇದು ಯುಪಿಐ ಅನ್ನು ಇನ್ನಷ್ಟು ಬಲಿಷ್ಟಗೊಳಿಸಲಿದೆ. ಯುಪಿಐ ಇಂದು ಗಮನಾರ್ಹ ರೀತಿಯಲ್ಲಿ ಬೆಳವಣಿಗೆ ಕಂಡುಕೊಂಡಿದೆ. ಡಿಜಿಟಲ್ ಪಾವತಿ ವ್ಯವಸ್ಥೆಗಳಿಗೆ ಬದಲಿ ವ್ಯವಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿದೆ ಎಂದು ಆರ್‌ಬಿಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ನವೆಂಬರ್‌ನಲ್ಲಿ ಭಾರತದ ರಫ್ತು ಮತ್ತು ಆಮದು ಅಂತರದಲ್ಲಿ ಗಣನೀಯ ಇಳಿಕೆ

ನವದೆಹಲಿ: ಭಾರತದ ಅಂತಾರಾಷ್ಟ್ರೀಯ ಸರಕು ವಹಿವಾಟಿನಲ್ಲಿ (ಒಜಡಿಛಿಚಿಟಿಜಛಿ ಣಡಿಚಿಜಿಟಿ) ಟ್ರೇಡ್ ಡೆಫಿಸಿಟ್ ಅಥವಾ ವ್ಯಾಪಾರ ಅಂತರ (ಖಿಡಿಚಿಜಜ ಆಜಜಿಛಿಣ) ನವೆಂಬರ್ ತಿಂಗಳಲ್ಲಿ 20.58 ಬಿಲಿಯನ್ ಡಾಲರ್‌ಗೆ ಇಳಿದಿದೆ. ಹಿಂದಿನ ಅಕ್ಟೋಬರ್ ತಿಂಗಳಲ್ಲಿ ಇದ್ದ 31.46 ಬಿಲಿಯನ್ ಡಾಲರ್‌ಗೆ ಹೋಲಿಸಿದರೆ ನವೆಂಬರ್‌ನಲ್ಲಿ ಟ್ರೇಡ್ ಡೆಫಿಸಿಟ್ ಗಣನೀಯವಾಗಿ ತಗ್ಗಿದೆ. 2022ರ ನವೆಂಬರ್‌ನಲ್ಲಿ ವ್ಯಾಪಾರ ಅಂತರ 32 ಬಿಲಿಯನ್ ಡಾಲರ್ ಇತ್ತು. ಕಳೆದ ವರ್ಷದ ನವೆಂಬರ್‌ಗೆ ಹೋಲಿಸಿದರೆ ಈ ನವೆಂಬರ್‌ನಲ್ಲಿ ಆಮದು ಮತ್ತು ರಫ್ತು ಎರಡೂ ಕೂಡ ಕಡಿಮೆ ಆಗಿವೆ. ಆದರೆ, ರಫ್ತು ಕಡಿಮೆ ಆಗಿರುವುದಕ್ಕಿಂತ ಆಮದು ಕಡಿಮೆ ಆಗಿರುವ ಪ್ರಮಾಣ ಹೆಚ್ಚಿದೆ. ಹೀಗಾಗಿ, ಟ್ರೇಡ್ ಡೆಫಿಸಿಟ್ ಕೂಡ ಕಡಿಮೆ ಆಗಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ದತ್ತಾಂಶದ ಪ್ರಕಾರ 2023ರ ನವೆಂಬರ್ ತಿಂಗಳಲ್ಲಿ 54.48 ಬಿಲಿಯನ್ ಡಾಲರ್‌ನಷ್ಟು ಆಮದು ಮಾಡಿಕೊಳ್ಳಲಾಗಿದೆ. ಇನ್ನು, ರಫ್ತು 33.90 ಬಿಲಿಯನ್ ಡಾಲರ್ ಆಗಿದೆ.

2022ರ ನವೆಂಬರ್‌ನಲ್ಲಿ ಆಮದುಗಳ ಪ್ರಮಾಣ 56.95 ಬಿಲಿಯನ್ ಡಾಲರ್ ಇದ್ದರೆ, ರಫ್ತುಗಳು 34.89 ಬಿಲಿಯನ್ ಡಾಲರ್ ಆಗಿದ್ದವು. ರಫ್ತು ಈ ವರ್ಷ ಶೇ. 2.8ರಷ್ಟು ಕಡಿಮೆ ಆಗಿದ್ದರೆ, ಆಮದುಗಳು ಶೇ. 4.3ರಷ್ಟು ಇಳಿಮುಖ ಆಗಿವೆ.

ಹಾಗೆಯೇ, ಈ ಹಣಕಾಸು ವರ್ಷದ ಮೊದಲ ಎಂಟು ತಿಂಗಳು, ಅಂದರೆ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ಅವಧಿಯಲ್ಲಿ ರಫ್ತು ಪ್ರಮಾಣ 278.8 ಬಿಲಿಯನ್ ಡಾಲರ್‌ನಷ್ಟಿತ್ತು. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಫ್ತು ಶೇ. 6.51ರಷ್ಟು ಕಡಿಮೆ ಆಗಿದೆ. ಇನ್ನು, ಆಮದು ಶೇ. 8.67ರಷ್ಟು ಕಡಿಮೆ ಆಗಿರುವುದು ಗಮನಾರ್ಹ.

ರಫ್ತು ಮತ್ತು ಆಮದು ಯಾಕೆ ಕಡಿಮೆ ಆಗುತ್ತಿದೆ?

ಕಳೆದ ಕೆಲ ತಿಂಗಳಿಂದಲೂ ರಫ್ತು ಮತ್ತು ಆಮದು ಎರಡೂ ಕೂಡ ಕಡಿಮೆ ಆಗುತ್ತಿವೆ. ಇದಕ್ಕೆ ಕಾರಣಗಳು ಭಿನ್ನ. ಸರ್ಕಾರ ಸಾಧ್ಯವಾದೆಡೆಯೆಲ್ಲಾ ಆಮದನ್ನು ಕಡಿಮೆ ಮಾಡುವ ಪ್ರಯತ್ನ ಮಾಡುತ್ತಿದೆ.

ಇನ್ನು, ರಫ್ತು ಕಡಿಮೆಗೊಳ್ಳಲು ಬೇರೆ ಕಾರಣಗಳಿವೆ. ಅಂತಾರಾಷ್ಟ್ರೀಯ ವಿದ್ಯಮಾನ, ಹೆಚ್ಚಿನ ಹಣದುಬ್ಬರ, ಮುಂದುವರಿದ ದೇಶಗಳಲ್ಲಿ ಮಂದಗತಿಯ ಆರ್ಥಿಕತೆ, ರಷ್ಯಾ ಉಕ್ರೇನ್ ಸಮಸ್ಯೆ, ಇಸ್ರೇಲ್ ಪ್ಯಾಲಸ್ಟೀನ್ ಬಿಕ್ಕಟ್ಟು, ಚೀನಾ, ತೈವಾನ್, ಅಮೆರಿಕ ಇತ್ಯಾದಿ ಅಂಶಗಳೆಲ್ಲವೂ ಭಾರತದ ರಫ್ತಿನ ಮೇಲೆ ಪರಿಣಾಮ ಬೀರುತ್ತಿವೆ ಎಂದು ಹೇಳಲಾಗುತ್ತಿದೆ.

ನಿಮ್ಮ ಹಣಕ್ಕೆ ಬಯೋಮೆಟ್ರಿಕ್ಸ್ ಲಾಕ್ ಭದ್ರತೆ, ಆಧಾರ್ ಡೇಟಾ ಕಳವು ತಡೆಗೆ ಹೀಗೆ ಮಾಡಿ

ನೀವು ವಂಚನೆಗೆ ಒಳಗಾಗದಂತೆ ಸುರಕ್ಷಿತವಾಗಿ ಇರಬೇಕೆಂದರೆ, ನೀವು ಬಯೋಮೆಟ್ರಿಕ್ ಮಾಹಿತಿಯನ್ನು ಆಧಾರ್‌ನಲ್ಲಿ ಲಾಕ್‌ಮಾಡಬೇಕು. ಬಯೋಮೆಟ್ರಿಕ್ ಮಾಹಿತಿಯನ್ನು ಲಾಕ್‌ಮಾಡಿದ ನಂತರ, ನಿಮ್ಮ ಆಧಾರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಯಾರಿಗೂ ಸಾಧ್ಯವಾಗುವುದಿಲ್ಲ. ಆದಾಗ್ಯೂ, ನೀವು ಆಧಾರ್‌ಅನ್ನು ಬಳಸಬೇಕಾದಾಗ, ನೀವು ಅದನ್ನು ಮತ್ತೆ ಅನ್‌ಲಾಕ್ ಮಾಡಬಹುದು ಮತ್ತು ಅದನ್ನು ಬಳಸಬಹುದು. ಇದು ವಂಚನೆಯ ಸಾಧ್ಯತೆಯನ್ನು ಬಹಳವಾಗಿ ಕಡಿಮೆ ಮಾಡುತ್ತದೆ.



ದೇಶದಲ್ಲಿ ದಿನೇ ದಿನೆ ಸೈಬರ್ ವಂಚನೆ ಪ್ರಕರಣಗಳು ಹೆಚ್ಚುತ್ತಿವೆ. ಆಧಾರ್ ಮಾಹಿತಿಗೆ ಕನ್ನ ಹಾಕಿ, ಅವುಗಳನ್ನು ದುರ್ಬಳಕೆ ಮಾಡಿಕೊಂಡು ವಂಚಕರು ಬ್ಯಾಂಕ್ ಖಾತೆಗಳಿಂದಲೇ ಹಣ ದೋಚುತ್ತಿದ್ದಾರೆ. ಇತ್ತೀಚೆಗಷ್ಟೇ ಸರಕಾರಿ ಸ್ವಾಮ್ಯದ 'ಬ್ಯಾಂಕ್ ಆಫ್ ಬರೋಡಾ'ದ ಉದ್ಯೋಗಿಗಳೇ ವಂಚನೆಯಲ್ಲಿ ತೊಡಗಿರುವುದು ವರದಿಯಾಗಿತ್ತು. ಈ ಪ್ರಕರಣ ಸಂಬಂಧ 60 ನೌಕರರನ್ನು ಅಮಾನತು ಮಾಡಲಾಗಿದೆ. ಕರ್ನಾಟಕದಲ್ಲಿಯೇ ಮಹಿಳೆಯೊಬ್ಬರ ಬಯೋ ಮೆಟ್ರಿಕ್ ಡೇಟಾವನ್ನು ದುರ್ಬಳಕೆ ಮಾಡಿಕೊಂಡ ವಂಚಕರು, ಬ್ಯಾಂಕ್ ಖಾತೆಯಲ್ಲಿದ್ದ ರೂ. 20,000 ದೋಚಿದ ಉದಾಹರಣೆಯೂ ಇದೆ.

ಈಗ ಆಧಾರ್ ಬಯೋಮೆಟ್ರಿಕ್ಸ್ ಬಳಸಿಕೊಂಡು ವಂಚಕರು ಹಣ ದೋಚುತ್ತಿರುವ ಹಲವಾರು ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ನೀವು ನಿಮ್ಮ ಆಧಾರ್ ಕಾರ್ಡ್‌ನಲ್ಲಿ ಕೆಲವು ಸೆಟ್ಟಿಂಗ್ ಮಾಡಿಕೊಳ್ಳಬೇಕು. ಆ ಮೂಲಕ ವಂಚನೆಗಳಿಂದ ಸುರಕ್ಷಿತವಾಗಿರಬಹುದು. ಬ್ಯಾಂಕಿಂಗ್, ಸರಕಾರಿ ಯೋಜನೆಗಳಲ್ಲಿ ಆಧಾರ್‌ಅನ್ನು ಬಳಸಲಾಗುತ್ತದೆ. ಸರಕಾರಿ ಕೆಲಸಗಳ ಜೊತೆಗೆ ಖಾಸಗಿ ಕೆಲಸಗಳಿಗೂ ಆಧಾರ್ ಬಳಕೆಯಾಗುತ್ತಿದೆ. ನಿಮ್ಮ ಬಳಿ ಆಧಾರ್ ಕಾರ್ಡ್ ಇಲ್ಲದಿದ್ದರೆ ಸರಕಾರದ ಯಾವುದೇ ಸೌಲಭ್ಯ ಪಡೆಯಲು ಸಾಧ್ಯವೇ ಇಲ್ಲ ಎನ್ನಬಹುದು.

ರಕ್ಷಣೆ ಹೇಗೆ? : ನೀವು ವಂಚನೆಗೆ ಒಳಗಾಗದಂತೆ ಸುರಕ್ಷಿತವಾಗಿ ಇರಬೇಕೆಂದರೆ, ನೀವು ಬಯೋಮೆಟ್ರಿಕ್ ಮಾಹಿತಿಯನ್ನು ಆಧಾರ್‌ನಲ್ಲಿ ಲಾಕ್‌ಮಾಡಬೇಕು. ಬಯೋಮೆಟ್ರಿಕ್ ಮಾಹಿತಿಯನ್ನು ಲಾಕ್‌ಮಾಡಿದ ನಂತರ, ನಿಮ್ಮ ಆಧಾರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಯಾರಿಗೂ ಸಾಧ್ಯವಾಗುವುದಿಲ್ಲ. ಆದಾಗ್ಯೂ, ನೀವು ಆಧಾರ್‌ಅನ್ನು ಬಳಸಬೇಕಾದಾಗ, ನೀವು ಅದನ್ನು ಮತ್ತೆ ಅನ್‌ಲಾಕ್ ಮಾಡಬಹುದು ಮತ್ತು ಅದನ್ನು ಬಳಸಬಹುದು. ಇದು ವಂಚನೆಯ ಸಾಧ್ಯತೆಯನ್ನು ಬಹಳವಾಗಿ ಕಡಿಮೆ ಮಾಡುತ್ತದೆ.

ಆಧಾರ್ ಬಯೋಮೆಟ್ರಿಕ್ ಲಾಕ್ ಎನ್ನುವುದು ಸುರಕ್ಷತಾ ವೈಶಿಷ್ಟ್ಯವಾಗಿದ್ದು, ತಮ್ಮ ಬ್ಯಾಂಕ್ ಖಾತೆಗಳಿಗೆ ಅನಧಿಕೃತ ಪ್ರವೇಶವನ್ನು ತಡೆಯಲು, ಬೆರಳಚ್ಚುಗಳು, ಐರಿಸ್‌ಸ್ಕ್ಯಾನ್‌ಗಳು ಮತ್ತು ಮುಖದ ಗುರುತಿಸುವಿಕೆ ಡೇಟಾ ಸೇರಿದಂತೆ ತಮ್ಮ ಬಯೋಮೆಟ್ರಿಕ್ ಮಾಹಿತಿಯನ್ನು ರಕ್ಷಿಸಲು ಆಧಾರ್ ಕಾರ್ಡ್‌ದಾರರಿಗೆ ಅಧಿಕಾರ ನೀಡುತ್ತದೆ. ಈ ವೈಶಿಷ್ಟ್ಯವು ಭಾರತದಲ್ಲಿ ವಿಶೇಷವಾಗಿ ನಿರ್ಣಾಯಕವಾಗಿದೆ.

ಆಧಾರ್ ಬಯೋಮೆಟ್ರಿಕ್ಸ್ ಲಾಕ್ ಅನ್ನು ಸಕ್ರಿಯಗೊಳಿಸಲು, ನೀವು UADAI ವೆಬ್‌ಸೈಟ್ ಅನ್ನು ಪ್ರವೇಶಿಸಬಹುದು ಅಥವಾ mAadhaar ಅಪ್ಲಿಕೇಶನ್ ಅನ್ನು ಬಳಸಿಕೊಳ್ಳಬಹುದು. ಒಮ್ಮೆ ನಿಮ್ಮ ಬಯೋಮೆಟ್ರಿಕ್ಸ್ ಲಾಕ್ ಆಗಿದ್ದರೆ, ನೀವು ಅವುಗಳನ್ನು ಅನ್‌ಲಾಕ್ ಮಾಡುವವರೆಗೆ ಆಧಾರ್ ದೃಢೀಕರಣ ಸಾಧ್ಯವಾಗುವುದಿಲ್ಲ.

ಸುರಕ್ಷತೆಗಾಗಿ ಆಧಾರ್ ಬಯೋಮೆಟ್ರಿಕ್ಸ್ ಲಾಕ್‌ಮಾಡುವುದು ಹೇಗೆ?

- ಮೊದಲು ನೀವು UADAI ವೆಬ್‌ಸೈಟ್‌ಗೆ ಭೇಟಿ ನೀಡಿ ಅಥವಾ ಆಧಾರ್

ಆ್ಯಪ್ mAadhaar ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.

- ನಿಮ್ಮ ಆಧಾರ್ ಸಂಖ್ಯೆ ಮತ್ತು ಒಟಿಪಿಯನ್ನು ಒದಗಿಸುವ ಮೂಲಕ ನಿಮ್ಮ ಆಧಾರ್ ಖಾತೆಗೆ ಲಾಗ್‌ಇನ್ ಆಗಿ.
- ಮೈ ಆಧಾರ್ ವಿಭಾಗದಲ್ಲಿನ 'ಲಾಕ್/ಅನ್‌ಲಾಕ್ ಬಯೋಮೆಟ್ರಿಕ್ಸ್' ಆಯ್ಕೆಯನ್ನು ಕ್ಲಿಕ್‌ಮಾಡಿ.
- ಪರಿಶೀಲನೆಗಾಗಿ ನಿಮ್ಮ ಆಧಾರ್‌ಸಂಖ್ಯೆ ಮತ್ತು ಒಟಿಪಿ ಅನ್ನು ಮರು ನಮೂದಿಸಿ.
- 'ಲಾಕ್ ಬಯೋಮೆಟ್ರಿಕ್ಸ್' ಮೇಲೆ ಕ್ಲಿಕ್‌ಮಾಡಿ.
- ಬಯೋ ಮೆಟ್ರಿಕ್ ಲಾಕ್ ಅನ್ನು ಖಚಿತಪಡಿಸಲು ನಿಮಗೆ ದೃಢೀಕರಣ ಸಂದೇಶವನ್ನು ಕಳುಹಿಸಲಾಗುತ್ತದೆ.

ಮೇಲಿನ ಪ್ರಕ್ರಿಯೆ ಬಳಿಕ ನಿಮ್ಮ ಆಧಾರ್ ಬಯೋಮೆಟ್ರಿಕ್ಸ್ ಸುರಕ್ಷಿತವಾಗಿ ಲಾಕ್ ಆಗುತ್ತದೆ. ನೀವು ಯಾವುದೇ ಹಂತದಲ್ಲಿ ಅವುಗಳನ್ನು ಅನ್‌ಲಾಕ್ ಮಾಡಲು ಬಯಸಿದರೆ, ಮೇಲಿನ ಪ್ರಕ್ರಿಯೆಯನ್ನು ಅನುಸರಿಸಿ ಮತ್ತು 'ಬಯೋಮೆಟ್ರಿಕ್ಸ್' ಅನ್ನು ಅನ್‌ಲಾಕ್ ಮಾಡಬಹುದು.

ಆಧಾರ್ ಬಯೋಮೆಟ್ರಿಕ್ಸ್ ಸುರಕ್ಷತೆ ಏಕೆ ಮುಖ್ಯ?

- ಇದು ಸಂಭಾವ್ಯ ಆಧಾರ್ ಆಧಾರಿತ ಹಣಕಾಸು ವ್ಯವಸ್ಥೆಯಲ್ಲಿನ (ಎಇಪಿಎಸ್) ವಂಚನೆಗಳಿಂದ ನಿಮ್ಮ ಹಣವನ್ನು ರಕ್ಷಿಸುತ್ತದೆ.
- ಇದು ನಿಮ್ಮ ಗುರುತನ್ನು ಮೋಸದ ಚಟುವಟಿಕೆಗಳಿಂದ ರಕ್ಷಿಸುತ್ತದೆ.
- ನಿಮ್ಮ ಬಯೋಮೆಟ್ರಿಕ್ಸ್ ಡೇಟಾ ಸುರಕ್ಷಿತವಾಗಿದೆ ಮತ್ತು ಉತ್ತಮವಾಗಿ ರಕ್ಷಿಸಲ್ಪಟ್ಟಿದೆ ಎಂಬ ಭರವಸೆಯನ್ನು ಬಯೋಮೆಟ್ರಿಕ್ಸ್ ಲಾಕ್ ನೀಡುತ್ತದೆ.

ಎಇಪಿಎಸ್‌ವಂಚನೆ ತಡೆಗೆ ಇನ್ನೇನು ಮಾಡಬಹುದು?

- ಎಟಿಎಂಗಳು ಮತ್ತು ಪಿಒಎಸ್ ಸಾಧನಗಳನ್ನು ಬಳಸಿ ನಗದು ಹಿಂಪಡೆಯುವಾಗ ಎಚ್ಚರಿಕೆ ವಹಿಸಿ.
- ನಿಮಗೆ ಸಂಪೂರ್ಣ ನಂಬಿಕೆಯಿಲ್ಲದ ವ್ಯಕ್ತಿಗಳಿಗೆ ನಿಮ್ಮ ಆಧಾರ್ ಕಾರ್ಡ್ ಅಥವಾ ಆಧಾರ್ ಸಂಖ್ಯೆಯನ್ನು ಬಹಿರಂಗಪಡಿಸಬೇಡಿ.
- ನಿಮ್ಮ ಆಧಾರ್ ಬಯೋಮೆಟ್ರಿಕ್ಸ್ ಅನ್ನು ನಿರ್ದಿಷ್ಟವಾಗಿ ಬಳಸಿಕೊಳ್ಳುವ ಅಗತ್ಯವಿಲ್ಲದಿದ್ದಲ್ಲಿ ಲಾಕ್‌ಮಾಡಿ.
- ಇತ್ತೀಚಿನ ಎಇಪಿಎಸ್ ವಂಚನೆಗಳ ಬಗೆಗೆ ಮತ್ತು ಸೈಬರ್ ತಜ್ಞರು ನೀಡುವ ಎಚ್ಚರಿಕೆಗಳನ್ನು ಕಟ್ಟು ನಿಟ್ಟಾಗಿ ಅನುಸರಿಸಿ.

ಬಡವರಿಂದಲೇ ಜಿಎಸ್‌ಟಿ ಗರಿಷ್ಠ ಸಂಗ್ರಹ : ಅಕ್ಟೋಬರ್‌ನಲ್ಲಿ ಖಜಾನೆಗೆ 1.72 ಲಕ್ಷ ಕೋಟಿ ರೂ. ಜಮೆ

ನವದೆಹಲಿ : ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ಜನಸಾಮಾನ್ಯರ ಆದಾಯ ಮತ್ತು ಖರ್ಚಿನ ಮೇಲೆ ತೀವ್ರ ಪ್ರಭಾವ ಬೀರುತ್ತಿದೆ. ಕೇಂದ್ರದ ಈ ಪರೋಕ್ಷ ತೆರಿಗೆಯಿಂದ ದೇಶ ಮತ್ತು ಸಮಾಜವನ್ನು ಪ್ರಭಾವಿತವಾಗಿದೆ. ಕೇಂದ್ರ ಸರ್ಕಾರ ಆದಾಯವನ್ನು ಹೆಚ್ಚಿಸಿಕೊಳ್ಳಲು ಪರೋಕ್ಷ ತೆರಿಗೆ ಮೇಲೆ ಆಧಾರಪಡುತ್ತಿದೆ. ಸರ್ಕಾರದ ಉತ್ಪನ್ನಗಳ ಮಾರಾಟ, ಅನುದಾನ, ಅಭಿವೃದ್ಧಿ ಕಾರ್ಯಕ್ರಮಗಳು, ಕೃಷಿ, ಕಾಮಗಾರಿಗಳು, ಪ್ರವಾಸೋದ್ಯಮ, ವೈದ್ಯಕೀಯ ಹೀಗೆ ಹತ್ತು ಹಲವು ಆದಾಯ ಮಾರ್ಗಗಳಿದ್ದರೂ ಜಿಎಸ್‌ಟಿ ಆದಾಯ ಸಂಗ್ರಹವೇ ಅಧಿಕವಾಗಿರುವುದು ವಿಶೇಷವಾಗಿದೆ.

ದೇಶದಲ್ಲಿ ಜಿಎಸ್‌ಟಿ ಆದಾಯ ಸಂಗ್ರಹ ವರ್ಷದಿಂದ ವರ್ಷಕ್ಕೆ ಏರಿಕೆಯಾಗಿದ್ದು, 2023ರ ಅಕ್ಟೋಬರ್ 2023ರಲ್ಲಿ 1.72 ಲಕ್ಷ ಕೋಟಿ ರೂ. ಖಜಾನೆಗೆ ಜಮೆಯಾಗಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಸಂಗ್ರಹಿಸಲಾದ ಆದಾಯಕ್ಕೆ ಹೋಲಿಸಿದರೆ ಶೇ.13 ಹೆಚ್ಚಾಗಿದೆ. ಪ್ರತಿ ತಿಂಗಳು 1.6 ಲಕ್ಷ ಕೋಟಿ ರೂ.ಗಿಂತ ಅಧಿಕ ಆದಾಯ ಜಿಎಸ್‌ಟಿ ರೂಪದಲ್ಲಿ ಹರಿದು ಬರುತ್ತಿದೆ. ಆದರೆ ಕಳೆದ ಅಕ್ಟೋಬರ್ ನಲ್ಲಿ ಸಂಗ್ರಹವಾದ 1,72,003 ಕೋಟಿ ರೂ. ಆದಾಯವು 2ನೇ ಅತ್ಯಧಿಕ ತೆರಿಗೆ ಸಂಗ್ರಹವಾಗಿ ದಾಖಲೆ ಬರೆದಿದೆ. ಇದೇ ವರ್ಷ ಏಪ್ರಿಲ್‌ನಲ್ಲಿ 1.87 ಲಕ್ಷ ಕೋಟಿ ರೂ. ಅತ್ಯಧಿಕ ಆದಾಯ ಸಂಗ್ರಹವಾಗಿತ್ತು.

ಅಕ್ಟೋಬರ್‌ನಲ್ಲಿ 30,062 ಕೋಟಿ ರೂ.ಕೇಂದ್ರ ಸರಕು ಮತ್ತು ಸೇವಾ ತೆರಿಗೆ, 38,171 ಕೋಟಿ ರೂ.ರಾಜ್ಯ ಸರಕು ಮತ್ತು ಸೇವಾ ತೆರಿಗೆ (SGST), 91,315 ಕೋಟಿ ರೂ (ಸರಕುಗಳ ಆಮದಿನ ಮೇಲೆ ಸಂಗ್ರಹಿಸಿದ 42,127 ಕೋಟಿ ರೂ ಒಳಗೊಂಡಿದೆ) ಸಮಗ್ರ ಸರಕು ಮತ್ತು ಸೇವೆಗಳು ತೆರಿಗೆ ಮತ್ತು 12,456 ಕೋಟಿ (ಸರಕುಗಳ ಆಮದಿನ ಮೇಲೆ ಸಂಗ್ರಹಿಸಲಾದ 1,294 ಕೋಟಿ ಸೇರಿದಂತೆ) ಸೆಸ್ ಒಳಗೊಂಡಿದೆ.

ಅಕ್ಟೋಬರ್ 2023 ರಲ್ಲಿ ಕೇಂದ್ರ ಮತ್ತು ರಾಜ್ಯಗಳ ಒಟ್ಟು ಆದಾಯವು CGST ಗಾಗಿ 72,934 ಕೋಟಿ ಮತ್ತು SGST ಗಾಗಿ 74,785 ಕೋಟಿಗಳಷ್ಟಿದೆ. ವಿಶ್ವದಾದ್ಯಂತ ಅಧಿಕ ಹಣದುಬ್ಬರ, ಯುದ್ಧ, ಅನಿಶ್ಚಿತತೆ ಕಾರಣದಿಂದ ತೆರಿಗೆ ಸಂಗ್ರಹ ಕಡಿಮೆಯಾಗಿದ್ದರೂ, ಭಾರತದಲ್ಲಿ ಆರ್ಥಿಕತೆ ಬಲಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಇದು ಭಾರತ ಸೇರಿ ವಿಶ್ವಕ್ಕೆ ಒಳ್ಳೆಯ ಸಂದೇಶವೇ ಆಗಿದೆ. ಆದರೆ ಜಿಎಸ್‌ಟಿ ತೆರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಜನಸಾಮಾನ್ಯರ ಮೇಲಾಗುತ್ತಿದೆ. ಹೀಗಾಗಿ ಹೆಚ್ಚು ತೆರಿಗೆ ಸಂಗ್ರಹ ಜನಸಾಮಾನ್ಯರು ಅದರಲ್ಲೂ ಬಡವರಿಂದ ಹರಿದು ಬರುತ್ತಿದೆ ಎಂದು ಈ ಕುರಿತು ಅಧ್ಯಯನ ನಡೆಸಿರುವ ಆಕ್ಸ್‌ಫಾಮ್ ಸಂಸ್ಥೆ ತಿಳಿಸಿದೆ.

ಹಣಕಾಸು ವಿಷಯ ಓದಿದವರು ಆಯ್ಕೆ ಮಾಡಿಕೊಳ್ಳಬಹುದಾದ ಸೂಕ್ತ ವ್ಯವಹಾರಗಳು

ಹಣಕಾಸು ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಓದುವುದರಿಂದ ಹಣಕಾಸು ನಿರ್ವಹಣೆ, ವಿಶ್ಲೇಷಣೆ, ತೀರ್ಮಾನ ಮಾಡುವಿಕೆ, ಅಲ್ಲದೇ ವಿವಿಧ ಬಗೆಯ ಬ್ಯುಸಿನೆಸ್‌ಗಳನ್ನು ಆರಂಭಿಸಿ ಮುನ್ನೆಡೆಸುವ ಉತ್ತಮ ಜ್ಞಾನವನ್ನು ತಿಳಿಯಬಹುದು. ಆದರೆ ಬ್ಯುಸಿನೆಸ್ ಆಯ್ಕೆ ಎಂಬುದು ಅವರವರ ಆಸಕ್ತಿಗೆ, ಕೌಶಲಗಳಿಗೆ, ನಿರ್ದಿಷ್ಟ ಉದ್ದೇಶಕ್ಕೆ ಬಿಟ್ಟಿದ್ದು. ಪಿಯುಸಿ ನಂತರ ಹಲವು ರೀತಿಯ ಹಣಕಾಸು ವಿಷಯಗಳ ಡಿಗ್ರಿ, ಸರ್ಟಿಫಿಕೇಶನ್ ಕೋರ್ಸ್‌ಗಳು ಲಭ್ಯ ಇವೆ. ಮುಂದೆ ನನ್ನ ಕರಿಯರ್ ಬ್ಯುಸಿನೆಸ್ ಆಗಿರಬೇಕು ಎಂದು ಗುರಿ ಇಟ್ಟುಕೊಂಡವರು ಇಂತಹ ಕೋರ್ಸ್‌ಗಳನ್ನು ಪಡೆಯುವುದು ಸೂಕ್ತವೆ ಆಗಿದೆ. ಹೀಗೆ ಹಣಕಾಸು ವಿಷಯವನ್ನು ಓದಿದವರು, ಮುಂದೆ ಯಾವೆಲ್ಲ ಬೆಸ್ಟ್ ಬ್ಯುಸಿನೆಸ್ ಮಾಡಬಹುದು ಎಂದು ಸಲಹೆಗಳನ್ನು ನೀಡಲಾಗಿದೆ. ಇವುಗಳನ್ನು ನಿಮ್ಮ ಮುಂದಿನ ಕರಿಯರ್‌ಗೆ ಪರಿಗಣಿಸಬಹುದಾಗಿದೆ.

ಹಣಕಾಸು ಸಲಹಾ ಸಂಸ್ಥೆ : ಹಣಕಾಸು ಯೋಜನೆಗಳನ್ನು ತಿಳಿಸುವ ಮತ್ತು ಬಂಡವಾಳ ಹೂಡಿಕೆ ಸಲಹೆಗಳನ್ನು ಕುಟುಂಬಗಳಿಗೆ ಹಾಗೂ ಅಗತ್ಯವಿರುವ ಜನರಿಗೆ ತಿಳಿಸುವ ಒಂದು ಸಂಸ್ಥೆಯನ್ನು ಆರಂಭಿಸಬಹುದು. ಹಣಕಾಸು ವಿಷಯ ಓದಿದವರು ಪ್ರಮಾಣಿಕೃತ ಫೈನಾನ್ಷಿಯಲ್ ಅಡ್ವೈಸರ್ (ಸಿಎಫ್‌ಪಿ) ಆಗಬಹುದು. ಇದರ ಮೂಲಕ ನಿಮ್ಮ ಗ್ರಾಹಕರಿಗೆ ಅವರ ಹಣಕಾಸು ಗುರಿಗಳನ್ನು ತಲುಪಲು, ನಿವೃತ್ತಿ ಯೋಜನೆಗಳ ಸಲಹೆಗಳನ್ನು ಸಹಾಯ ಮಾಡಬಹುದು. ಇದರ ಮೂಲಕ ಉತ್ತಮ ಸಂಪಾದನೆಯನ್ನು ಸಹ ಮಾಡಬಹುದು.

ಅಕೌಂಟಿಂಗ್ ಮತ್ತು ಬುಕ್‌ಕೀಪಿಂಗ್ ಸೇವೆಗಳು : ಸಣ್ಣ ವ್ಯವಹಾರಗಳ ಕಂಪನಿಗಳು, ಸ್ಟಾರ್ಟ್‌ಅಪ್‌ಗಳಿಗೆ ಅಕೌಂಟಿಂಗ್ ಸೇವೆ ಹಾಗೂ ಇದರ ಸಂಬಂಧಿತ ದಾಖಲೆಗಳನ್ನು ಸುರಕ್ಷಿತವಾಗಿ ಹಾಗೂ ನಿಯಮಗಳ ಪ್ರಕಾರ ಹಿಡಿದಿಟ್ಟುಕೊಳ್ಳುವ ಸೇವೆಯನ್ನು ಮಾಡುವ ಬ್ಯುಸಿನೆಸ್ ಅನ್ನು ಸಹ ಮಾಡಬಹುದು. ಹಲವು ಉದ್ಯಮಿಗಳು ಹಾಗೂ ಸ್ಮಾಲ್ ಬ್ಯುಸಿನೆಸ್ ಮಾಲೀಕರು ಈ ರೀತಿಯ ಸಹಾಯವನ್ನು ಹಣಕಾಸು ದಾಖಲೆ ಮತ್ತು ತೆರಿಗೆ ತಯಾರಿ ಕುರಿತು ಸಹಾಯ ಕೇಳುತ್ತಾರೆ. ಈ ಬ್ಯುಸಿನೆಸ್‌ಸಹ ಒಂದು ಉತ್ತಮ ಆಯ್ಕೆಯಾಗಿದೆ.

ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ : ಹಣಕಾಸು ವಿಷಯದಲ್ಲಿ ಪದವಿ, ಸ್ನಾತಕೋತ್ತರ ಪದವಿ ಓದಿರುವವರು ತಮ್ಮ ಬುದ್ಧಿವಂತಿಕೆ ಜತೆಗೆ, ಸ್ವಲ್ಪ ಹಣಕಾಸು ಇಟ್ಟುಕೊಂಡಿದ್ದಲ್ಲಿ ವಸತಿ ಗೃಹಗಳು ಮತ್ತು ವಾಣಿಜ್ಯ ರಿಯಲ್ ಎಸ್ಟೇಟ್ ಪ್ರಾಪರ್ಟಿಗಳಲ್ಲಿ ಹೂಡಿಕೆ ಮಾಡಬಹುದು. ಇದರ ಮೂಲಕ ಉತ್ತಮ ಲಾಭಾಂಶಗಳಿಸಬಹುದು. ಬಾಡಿಗೆಯ ಹಣ ಅಥವಾ ಆಸ್ತಿಯ ಮೌಲ್ಯ ಹೆಚ್ಚಳದಿಂದ ಉತ್ತಮ ರೆವಿನ್ಯೂ ಗಿಟ್ಟಿಸಬಹುದು. ಒಂದು ವೇಳೆ ನಿಮ್ಮಲ್ಲಿ ಹಣ ಇಲ್ಲದಿದ್ದಲ್ಲಿ, ನಿಮ್ಮ ಜ್ಞಾನವನ್ನು ಬಂಡವಾಳ ಮಾಡಿಕೊಂಡು, ಹಣ ಇರುವವರಿಗೆ ಸಲಹೆ ನೀಡುವ ಸಂಸ್ಥೆ ಸ್ಥಾಪಿಸಿ ಬ್ಯುಸಿನೆಸ್ ಆರಂಭಿಸಬಹುದು.

ಕ್ರೌಡ್‌ಫಂಡಿಂಗ್ ವೇದಿಕೆಗಳು : ಸಾಮಾನ್ಯವಾಗಿ ಹಣಕಾಸು ವಿಷಯಗಳಲ್ಲಿ ಯುಜಿ, ಪಿಜಿ ಓದಿರುವವರಿಗೆ ಕ್ರೌಡ್‌ಫಂಡಿಂಗ್ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ಆದ್ದರಿಂದ ನೀವು ಸುಲಭವಾಗಿ ಈ ಕ್ರೌಡ್‌ಫಂಡಿಂಗ್ ವೇದಿಕೆಗಳನ್ನು ಆರಂಭಿಸಬಹುದು. ಈ ವೇದಿಕೆ ಬಂಡವಾಳ ಹೂಡಿಕೆದಾರರು ಮತ್ತು ಉದ್ಯಮಿಗಳು / ಸ್ಟಾರ್ಟ್‌ಅಪ್‌ಗಳನ್ನು ಸಂಪರ್ಕಿಸಿ, ಇವರಿಗೆ ಬೇಕಾದ ಬಂಡವಾಳವನ್ನು ಇವರ ವ್ಯಾಪಾರ ವ್ಯವಹಾರಗಳಿಗೆ ಒದಗಿಸುತ್ತವೆ. ಇವುಗಳ ನಡುವೆ ಮಧ್ಯಸ್ಥಿಕೆ ಕೆಲಸ ಮಾಡುವ, ವೇದಿಕೆ ಸೃಷ್ಟಿಸುವ ನಿಮಗೆ ಉತ್ತಮ ಲಾಂಭಾಂಶ ಖಂಡಿತ ಸಿಗಲಿದೆ.

ಸಾಲ ಒದಗಿಸುವ ಸಂಸ್ಥೆ : ಸಾಲ ಒದಗಿಸುವ ಒಂದು ಸಂಸ್ಥೆಯನ್ನು ಸ್ಥಾಪಿಸಬಹುದು. ಪೀರ್ ಟು ಪೀರ್ ಲೆಂಡಿಂಗ್ ವೇದಿಕೆಗಳು ವೈಯಕ್ತಿಕ ಸಾಲದಾತರೊಂದಿಗೆ ಸಾಲಗಾರರನ್ನು ಸಂಪರ್ಕಿಸುತ್ತದೆ. ವೈಯಕ್ತಿಕ ಅಥವಾ ಸಣ್ಣ ವ್ಯಾಪಾರಗಳಿಗೆ ಸಾಲಗಳನ್ನು ಒದಗಿಸುವ ಕೆಲಸವನ್ನು ಈ ವೇದಿಕೆ ಮಾಡಲಿದೆ. ಇದು ಒಂದು ಉತ್ತಮ ಬ್ಯುಸಿನೆಸ್ ಐಡಿಯಾವಾಗಿದೆ.



ಫೈನಾನ್ಷಿಯಲ್ ಟೆಕ್ನಾಲಜಿ ಸ್ಟಾರ್ಟ್‌ಅಪ್ (FinTech) : ವಿನೂತನ ಹಣಕಾಸು ಪ್ರಾಡಕ್ಟ್‌ಗಳು ಅಥವಾ ಸೇವೆಗಳನ್ನು ನೀಡುವ ಫೈನಾನ್ಷಿಯಲ್ ಟೆಕ್ನಾಲಜಿ ಕಂಪನಿಗಳನ್ನು ಡೆವಲಪ್ ಮಾಡಬಹುದು. ಉದಾಹರಣೆಗೆ ಮೊಬೈಲ್ ಪೇಮೆಂಟ್ ಸಲ್ಯೂಷನ್ಸ್, ಇನ್‌ವೆಸ್ಟ್‌ಮೆಂಟ್ ಅಪ್ಲಿಕೇಶನ್‌ಗಳು, ರೊಬೊ ಅಡ್ವೈಸರಿ ಸೇವೆಗಳನ್ನು ನೀಡುವ ಕಂಪನಿಗಳನ್ನು ಸ್ಥಾಪಿಸಿ, ಬ್ಯುಸಿನೆಸ್‌ಮಾಡಬಹುದು.

ಸರಕುಪಟ್ಟಿ ಫ್ಯಾಕ್ಟರಿಂಗ್ ಕಂಪನಿ : ಸಣ್ಣ ಉದ್ಯಮದಾರರಿಗೆ ಅವರ ಔಟ್‌ಸ್ಟ್ಯಾಂಡಿಂಗ್ ಇನ್‌ವಾಯ್ಸ್‌ಗಳನ್ನು ರಿಯಾಯ್ತಿಯೊಂದಿಗೆ ಖರೀದಿಸುವ ಮೂಲಕ ಕಾರ್ಯನಿರತ ಬಂಡವಾಳ ಶಾಹಿಗಳಿಗೆ ಪರಿಹಾರ ಸೇವೆಗಳನ್ನು ನೀಡುವ ಕಂಪನಿ ಸ್ಥಾಪಿಸಬಹುದು.

ರಿಸ್ಕ್ ಮ್ಯಾನೇಜ್ಮೆಂಟ್ ಕನ್ಸಲ್ ಟೆನ್ಸಿ : ಹಣಕಾಸು ವ್ಯವಹಾರಗಳ ಮಾರುಕಟ್ಟೆ, ಕ್ರೆಡಿಟ್ ಮತ್ತು ಕಾರ್ಯಾಚರಣೆಯ ಅಪಾಯಗಳು ಸೇರಿದಂತೆ ವಿವಿಧ ಹಣಕಾಸಿನ ಅಪಾಯಗಳನ್ನು ತಪ್ಪಿಸಲು ಬಯಸುವ ವ್ಯವಹಾರಗಳಿಗೆ ಅಪಾಯದ ಮೌಲ್ಯಮಾಪನ ಮತ್ತು ನಿರ್ವಹಣೆ ಸಲಹಾ ಸೇವೆಗಳನ್ನು ನೀಡುವ ಕನ್ಸಲ್‌ಟೆನ್ಸಿಗಳನ್ನು ಸ್ಥಾಪಿಸುವ ಮೂಲಕ ಸ್ವಂತ ಬ್ಯುಸಿನೆಸ್ ಮಾಡಬಹುದು.

ತೆರಿಗೆ ತಯಾರಿ ಮತ್ತು ಸಮಾಲೋಚನೆ ಕಂಪನಿ : ಹಣಕಾಸು ವಿಷಯ ಓದಿ ತೆರಿಗೆ ಲೆಕ್ಕಚಾರದಲ್ಲಿ ನೈಪುಣ್ಯತೆ ಹೊಂದಿರುವವರು, ತೆರಿಗೆ ಪ್ಲಾನಿಂಗ್ ಮತ್ತು ತೆರಿಗೆ ಸಮಾಲೋಚನೆ ಸೇವೆಗಳನ್ನು ಸಣ್ಣ ಉದ್ಯಮಿಗಳಿಗೆ ಮತ್ತು ವೈಯಕ್ತಿಕವಾಗಿ ಜನರಿಗೆ ನೀಡುವ ಒಂದು ಸಂಸ್ಥೆ ಕಟ್ಟಬಹುದು. ಇದನ್ನು ಒಂದು ಸ್ವಂತ ವ್ಯವಹಾರವಾಗಿ ಸ್ಥಾಪಿಸಿ ಹಣ ಸಂಪಾದನೆ ಮಾಡಬಹುದು.

ಈ ರೀತಿ ಮೇಲಿನ ಹಲವು ಬಗೆಯ ಕಂಪನಿಗಳನ್ನು ಸ್ಥಾಪಿಸಿ, ನಿಮ್ಮ ಸೇವೆಗಳಿಗೆ ಶುಲ್ಕ ಪಡೆಯುವ ಮೂಲಕ ಉತ್ತಮ ಬ್ಯುಸಿನೆಸ್‌ಮಾಡಬಹುದಾಗಿದೆ.

- ಹಣಕಾಸು ಸಂಬಂಧಿತ ಕೋರ್ಸ್‌ಗಳ ಲಿಸ್ಟ್
- ಬಿಬಿಎ ಫೈನಾನ್ಸ್
- ಬಿಎಸ್ಸಿ ಫೈನಾನ್ಸ್
- ಬಿಕಾಂ ಫೈನಾನ್ಸ್
- ಬಿಕಾಂ ಇನ್ ಬ್ಯಾಂಕಿಂಗ್ ಅಂಡ್ ಫೈನಾನ್ಸ್
- ಎಂಕಾಂ ಫೈನಾನ್ಸ್
- ಎಂಬಿಎ ಫೈನಾನ್ಸ್
- ಚಾರ್ಟರ್ಡ್ ಅಕೌಂಟಂಟ್
- ಚಾರ್ಟರ್ಡ್ ಫೈನಾನ್ಷಿಯಲ್ ಅನಾಲಿಸ್ಟ್

ಇವುಗಳು ರೆಗ್ಯುಲರ್ ಡಿಗ್ರಿ ಹಾಗೂ ಮಾಸ್ಟರ್‌ಡಿಗ್ರಿ ಕೋರ್ಸ್‌ಗಳು. ಇವುಗಳಲ್ಲದೇ ಹಲವು ರೀತಿಯ ಸರ್ಟಿಫಿಕೇಶನ್ ಕೋರ್ಸ್‌ಗಳು ಸಹ ಲಭ್ಯವಿವೆ.

ಅನವಶ್ಯಕವಾಗಿ ಹಣ ಪೋಲಾಗುವುದನ್ನು ತಪ್ಪಿಸುವ 10 ಸೂತ್ರಗಳು

▸▸ ರಂಗಸ್ವಾಮಿ ಮೂಕನಹಳ್ಳಿ

ಹಣದ ಪ್ರಾಮುಖ್ಯತೆಯನ್ನು ನಾವು ಒಂದಷ್ಟು ಅರಿತುಕೊಂಡಿದ್ದೇವೆ. ಇನ್ನೊಂದು ಪ್ರಮುಖ ಕಲಿಕೆಯನ್ನು ಕೂಡ ನಾವು ಮಾಡಬೇಕಿದೆ. ಅದೇ ಅರ್ಥ ಶಿಸ್ತು ಅಥವಾ ಹಣಕಾಸು ಶಿಸ್ತು, ಫೈನಾನ್ಷಿಯಲ್ ಡಿಸಿಪ್ಲಿನ್. ಎಲ್ಲಾ ಶಿಸ್ತು ಇದ್ದು, ಆರ್ಥಿಕ ಶಿಸ್ತು ಇಲ್ಲದಿದ್ದರೆ, ಅಗಾಧವಾಗಿ ಕಟ್ಟಿ ನಿಲ್ಲಿಸಿದ ಸೌಧವೂ ಕೂಡ ಅರೆಗಳಿಗೆಯಲ್ಲಿ ನೆಲಸಮವಾಗುತ್ತದೆ. ವರ್ಷಗಳ ಕಠಿಣ ಪ್ರಯತ್ನ, ಯಶಸ್ಸು ಎಲ್ಲವೂ ನೀರಿನಲ್ಲಿ ಹೋಮ ಮಾಡಿದಂತೆ, ಪ್ರಯೋಜನಕ್ಕೆ ಬಾರದೆ ಹೋಗುತ್ತದೆ. ಇದರ ಬಗ್ಗೆ ಸಂಸ್ಕೃತ ಶ್ಲೋಕವೊಂದರಲ್ಲಿ

ಸರ್ವೇಷಾಣಾಂ ಹಿ ಶೌಚಾನಾಂ ಅರ್ಥಶೌಚಂ ಪರಂಸ್ಮೃತಂ ।

ಯೋ ಅರ್ಥೇ ಶುಚಿಃ ಮೃತ್ವಾರಿ ಶುಚಿಃರ್ನಶುಚಿಃ ।

ಎಲ್ಲಾ ರೀತಿಯ ಶೌಚಗಳಲ್ಲಿ ಹಣದ ವಿಚಾರದ ಶುಚಿತ್ವವು ಅತ್ಯುತ್ತಮವಾದದ್ದು. ಕೇವಲ ಮಣ್ಣು ಮತ್ತು ನೀರಿನಿಂದ ಆಗುವ ಶುಚಿಯ ಶುಚಿತ್ವವಲ್ಲ. ಅಂದರೆ ಬೇರೆಲ್ಲಾ ಶುಚಿತ್ವಕ್ಕಿಂತ ಹಣಕಾಸು ಶಿಸ್ತು, ಶುಚಿತ್ವ ಅತ್ಯಂತ ಪ್ರಮುಖವಾದದ್ದು ಎಂದು ಹೇಳಲಾಗಿದೆ. ಉತ್ತಮ ಬದುಕಿಗೆ ಶಿಸ್ತು ಬಹಳ ಮುಖ್ಯ. ಶಿಸ್ತುಗಳಲ್ಲಿ ಅನೇಕ ವಿಧಗಳಿವೆ. ಅವೆಲ್ಲಕ್ಕೂ ಕಳಶಪ್ರಾಯವಾಗಿ ಹಣಕಾಸಿನ ಶಿಸ್ತು ಪ್ರಾಮುಖ್ಯತೆಯನ್ನು ಪಡೆದಿದೆ. ಈ ರೀತಿಯ ಆರ್ಥಿಕ ಶಿಸ್ತು ಅದೇಕೆ ಮುಖ್ಯವಾಗುತ್ತದೆ ಎನ್ನುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಕೆಲವನ್ನು ಪಟ್ಟಿ ಮಾಡೋಣ. ನೆನಪಿರಲಿ ಇದು ವ್ಯಕ್ತಿ ಮತ್ತು ಸಂಸ್ಥೆ ಎರಡಕ್ಕೂ ಅನ್ವಯವಾಗುತ್ತದೆ.

1. ಹೆಸರಿಸಲು, ಲೆಕ್ಕಕಿಡಲು ಬಾರದ ಖರ್ಚುಗಳು ಇಲ್ಲವಾಗುತ್ತವೆ : ನಮ್ಮ ಮಾಸಿಕ ಆದಾಯ, ಅಥವಾ ಸಂಸ್ಥೆಯ ಆದಾಯ ಮತ್ತು ವ್ಯಯವನ್ನು ಬರೆದಿಡುವ ಅಭ್ಯಾಸ ಮಾಡಿಕೊಳ್ಳಬೇಕು. ಇಂತಹ ಆಯವ್ಯಯ ಪಟ್ಟಿಯನ್ನು ತಯಾರಿಸುವ ಕಾರಣ ನಮ್ಮ ಖರ್ಚುಗಳು ಯಾವುವು ಎನ್ನುವುದು ನಮಗೆ ತಿಳಿಯುತ್ತದೆ. ಜೊತೆಗೆ ಯಾವುದಕ್ಕೆ ಎಷ್ಟು ಖರ್ಚು ಮಾಡುತ್ತಿದ್ದೇವೆ. ಅದನ್ನು ಉಳಿಸಲು ಸಾಧ್ಯವೇ ಇತ್ಯಾದಿ ನಿಯಂತ್ರಣಗಳನ್ನು ನಾವು ಮಾಡಿಕೊಳ್ಳಲು ಸುಲಭವಾಗುತ್ತದೆ. ಶಿಸ್ತುಬದ್ಧವಾದ ಲೆಕ್ಕ ಪತ್ರವನ್ನು ಇಡದೆ ಹೋದರೆ ಆಗ ನಮಗೆ ಗೊತ್ತಿಲ್ಲದೇ ಎಷ್ಟೋ ಖರ್ಚು ಆಗಿರುತ್ತದೆ. ಹಲವು ಬಾರಿ ಅವು ಅವಶ್ಯಕವಾದ ಖರ್ಚು ಕೂಡ ಆಗಿರುವುದಿಲ್ಲ. ನಿಯಂತ್ರಣವಿರದ ಕಾರಣ ಗೊತ್ತಿಲ್ಲದೇ ಅನವಶ್ಯಕವಾಗಿ ಖರ್ಚಾಗಿರುತ್ತದೆ. ಹಣವನ್ನು ಬಿಸಾಡಿದರೂ ಲೆಕ್ಕಹಾಕಿ ಬಿಸಾಡು ಎನ್ನುವ ಮಾತಿದೆ. ಹೀಗೆ ಪ್ರತಿಯೊಂದನ್ನೂ ಶಿಸ್ತಿನಿಂದ ಲೆಕ್ಕ ಬರೆದರೆ ಗೊತ್ತಿಲ್ಲದ ಖರ್ಚುಗಳು ನಮ್ಮ ಬಳಿಯೂ ಸುಳಿಯುವುದಿಲ್ಲ, ಹಣವೂ ಉಳಿತಾಯವಾಗುತ್ತದೆ.

2. ಬೇಡದ ಖರೀದಿ ತಪ್ಪುತ್ತದೆ, ಇರುವ ವಸ್ತುಗಳ ಸರಿಯಾದ ಬಳಕೆಯಾಗುತ್ತದೆ : ಹಣವು ಎಲ್ಲಿ ವ್ಯಯವಾಗಿದೆ, ಏಕೆ ವ್ಯಯವಾಗಿದೆ ಎನ್ನುವದನ್ನು ದಾಖಲಿಡುವ ಕಾರಣ ನಮ್ಮ ಬಳಿ ಏನಿದೆ ಎನ್ನುವ ಅರಿವು ಹೆಚ್ಚಾಗುತ್ತದೆ. ಹೊಸದಾಗಿ ಖರೀದಿಸುವುದು ತಪ್ಪುತ್ತದೆ. ಮತ್ತು ಎಲ್ಲೂ ಮನೆಯ /ಸಂಸ್ಥೆಯ ಮೂಲೆಯಲ್ಲಿದ್ದ ವಸ್ತುವಿನ ಉಪಯೋಗ ಕೂಡ ಆಗುತ್ತದೆ. ಉದಾಹರಣೆಗೆ ಕಳೆದ ತಿಂಗಳು ಮಕ್ಕಳಿಗೆ ಕೊಂಡ ಆಟದ ಸಾಮಾನು ಮರೆತು ಅಲ್ಲೆಲ್ಲೂ ಮನೆಯ ಮೂಲೆಯಲ್ಲಿ ಹುದುಗಿರಬಹುದು. ಮಕ್ಕಳು ಆಟದ ಸಾಮಾನು ಬೇಕು ಎಂದು ಕೇಳಿದಾಗ ಯಾವಾಗ ಕೊಂಡಿದ್ದೆವು, ಎಷ್ಟು, ಉಪಯೋಗವೇನು ಎಲ್ಲವೂ ನೆನಪಿಗೆ ಬರುತ್ತದೆ. ಹೊಸ ಖರೀದಿ ತಪ್ಪುತ್ತದೆ, ಕೊಂಡ ವಸ್ತುವಿನ ಬಳಕೆಯೂ ಆಗುತ್ತದೆ.

ಸಮಯ ಎಂತಹುದ್ದು? ಗೆಳೆಯರು ಯಾರು? ಇರುವ ಸ್ಥಾನ ಎಂತದ್ದು? ಆಯ-ವ್ಯಯಗಳು ಎಷ್ಟು? ನಾನು ಯಾರು? ನನ್ನ ಶಕ್ತಿಯೆಷ್ಟು? ಇವುಗಳನ್ನ ಪದೇಪದೇ ಆಲೋಚಿಸುತ್ತಿರಬೇಕು ಎನ್ನುತ್ತದೆ. ಗಮನಿಸಿ ನೋಡಿ, ಇವೆಲ್ಲವೂ ಒಮ್ಮೆ ಸಾಧಿಸಿದ ನಂತರ ಆಲಸ್ಯದಿಂದ ಕೂರುವಂತಿಲ್ಲ. ಇವುಗಳ ಬಗ್ಗೆ ಮತ್ತೆ ಮತ್ತೆ ಯೋಚಿಸುತ್ತಿರಬೇಕು. ಹಣದ ವಿಷಯದಲ್ಲಿ, ಆರ್ಥಿಕ ಶಿಸ್ತಿನ ವಿಷಯದಲ್ಲಿ ಕೂಡ ಇದು ಸತ್ಯ. ಸದಾ ಕಾಲವೂ ಅದೇ ಶಿಸ್ತನ್ನ ಕಾಯ್ದುಕೊಳ್ಳಬೇಕು. ಮಾಡಿದ ಕೆಲಸ ನೋಡದೆ ಹೋಯ್ತು ಎನ್ನುವ ಒಂದು ಆಡು ಮಾತಿದೆ. ನಾವು ಯಾವುದೇ ಶಿಸ್ತನ್ನ ಬಿಟ್ಟರೆ ಮತ್ತದೇ ಹಳೆಯ ಹಾದಿಗೆ ಮರಳುತ್ತೇವೆ. ಹೀಗಾಗಿ ಸದಾ ಸನ್ನದ್ಧ ಸ್ಥಿತಿಯಲ್ಲಿರಬೇಕು. ಆರ್ಥಿಕ ಶಿಸ್ತು ಎನ್ನುವುದು ಜೀವನ ಶೈಲಿಯಾಗಬೇಕು. ಅದು ಎರಡು ದಿನ ಪಾಲಿಸಿ ಆಮೇಲೆ ಕೈಕೊಡವಿಕೊಳ್ಳುವ ಕ್ರಾ ್ಯಶ್ ಕೋರ್ಸ್ ಅಲ್ಲವೇ ಅಲ್ಲ.

ಇದು ಮನೆಗಳಲ್ಲಿ ಅಷ್ಟಾಗಿ ಆಗುವುದಿಲ್ಲ ಎಂದುಕೊಂಡರೂ ಈ ನಿಯಮ ಪಾಲನೆಯಿಂದ ಸಂಸ್ಥೆಯಲ್ಲಿ, ಅದರಲ್ಲೂ ಸ್ಟಾಕ್ ಮ್ಯಾನೇಜ್‌ಮೆಂಟ್‌ನಲ್ಲಿ ಬಹಳ ಸಹಕಾರಿಯಾಗುತ್ತದೆ.

3. ಹಣಕಾಸಿನ ಹರಿವು ಸುಗಮವಾಗಿರುತ್ತದೆ : ಎಲ್ಲಕ್ಕೂ ಬಜೆಟ್ ಮಾಡುವುದರಿಂದ ನಿಗದಿತ ಆದಾಯ ಮತ್ತು ನಿಗದಿತ ಖರ್ಚು ಗೊತ್ತಿರುತ್ತದೆ. ಹೀಗಾಗಿ ಅಂದಾಜಿಸಿದ ಕ್ಯಾಶ್ ಫ್ಲೋ ಸುಗಮವಾಗಿರುತ್ತದೆ. ಇದು ಒಂದು ಸಂಸ್ಥೆ ಅಥವಾ ಮನೆ ಸರಾಗವಾಗಿ ನಡೆಯಲು ಬಹಳ ಮುಖ್ಯ. ಹಣದ ಹರಿವು ಹೆಚ್ಚು ಕಡಿಮೆಯಾದರೆ, ಮಾಡಿದ ಎಲ್ಲಾ ಯೋಜನೆಗಳೂ ಕೂಡ ಬೇರೆ ದಾರಿಯನ್ನು ಹಿಡಿಯುತ್ತವೆ. ಹಣಕಾಸಿನ ಹರಿವು ಸರಾಗವಾಗಿದ್ದಷ್ಟೂ ಸಂಸ್ಥೆಯ ಬೆಳವಣಿಗೆ ಕೂಡ ಸರಾಗವಾಗುತ್ತದೆ. ಹಾಗೊಮ್ಮೆ ಅನಿರೀಕ್ಷಿತ ಖರ್ಚು ಬಂದರೂ ಅದನ್ನು ಕೂಡ ಅಂದಾಜಿಸಿರುವ ಕಾರಣ ಅಷ್ಟೇನೂ ಕಷ್ಟವಾಗಲಾರದು. ಬಜೆಟ್ ಮೀರಿದ ಅನಿರೀಕ್ಷಿತ ಖರ್ಚನ್ನು ಕೂಡ ಹಣಕಾಸಿನ ಹರಿವು ಚನ್ನಾಗಿದ್ದರೆ ತಡೆದುಕೊಳ್ಳುವ ಕ್ಷಮತೆ ಹೆಚ್ಚಿರುತ್ತದೆ.

4. ಹಾಕಿಕೊಂಡ ಗುರಿ ಮುಟ್ಟಲು ಸಹಕಾರಿ : ವೈಯಕ್ತಿಕ ಗುರಿ ಅಥವಾ ಸಂಸ್ಥೆಯ ಅಭಿವೃದ್ಧಿಯ ಗುರಿ ಯಾವುದೇ ಇರಲಿ, ಹಣಕಾಸು ಶಿಸ್ತು ಅದನ್ನು ನೆರವೇರಿಸಲು ಸಹಕಾರಿಯಾಗುತ್ತದೆ. ಟಾರ್ಗೆಟ್, ಎಸ್ಟಿಮೇಶನ್ ಮತ್ತು ಅದಕ್ಕೆ ಬೇಕಾದ ಹಣದ ಅಲೋಕೇಷನ್ ಸರಿಯಾಗಿದ್ದರೆ, ಹಾಕಿಕೊಂಡ ಗುರಿಯನ್ನ ಮುಟ್ಟಲು ಸಾಧ್ಯವಾಗುತ್ತದೆ. ನಾವು ಅಂದುಕೊಂಡ ಗುರಿಯನ್ನು ಮುಟ್ಟಲು ಸಾಧ್ಯವಾಗದಿದ್ದರೆ, ಅಥವಾ ಗುರಿಯಿಂದ ಅತ್ತಿತ್ತ ಹೋಗುತ್ತಿದ್ದರೆ ಎಲ್ಲಿ, ಏಕೆ ತಪ್ಪು ಹೋಗುತ್ತಿದ್ದೇವೆ ಎನ್ನುವುದನ್ನು ಕಂಡುಕೊಳ್ಳಲು ಕೂಡ ಇದು ಸಹಕಾರಿ, ಜೊತೆಗೆ ಮತ್ತೆ ಸರಿದಾರಿಯಲ್ಲಿ ನಡೆಯಲು ಕೂಡ ಇದು ಸಹಾಯ ಮಾಡುತ್ತದೆ.

5. ವ್ಯಕ್ತಿಗೆ ಅಥವಾ ಸಂಸ್ಥೆಗೆ ವಿಷನ್ ಬಹಳ ಮುಖ್ಯ : ಮುಂದಿನ ಹತ್ತಾರು ವರ್ಷದಲ್ಲಿ ಸಂಸ್ಥೆ ಯಾವ ಮಟ್ಟಕ್ಕೆ ಬೆಳೆದಿರಬೇಕು, ವೈಯಕ್ತಿಕವಾಗಿ ಯಾವ

ಮಟ್ಟವನ್ನು ಮುಟ್ಟಿರಬೇಕು ಎನ್ನುವ ದೊಡ್ಡ ಗುರಿ, ಕನಸು ಸಾಕಾರವಾಗುವುದು ಹಣಕಾಸು ಶಿಸ್ತಿದ್ದಾಗ ಮಾತ್ರ ಸಾಧ್ಯ. ಗೆಲುವು ಎನ್ನುವುದು ಸಣ್ಣ ಸಣ್ಣಮಟ್ಟದಲ್ಲಿ ನಿತ್ಯವೂ ಸಿಗುತ್ತಾ ಹೋದರೆ ಆಗ ಅದು ಮುಂದೊಂದು ದಿನ ದೊಡ್ಡ ಮಟ್ಟದ ಯಶಸ್ಸು ಎನ್ನಿಸಿಕೊಳ್ಳುತ್ತದೆ. ಹೀಗೆ ನಿತ್ಯದ ಗುರಿಗಳನ್ನು ನಿಯಂತ್ರಣದಲ್ಲಿಟ್ಟು ಕೊಂಡು ಅಂದಿನ ಜಯಗಳಿಸಲು ಈ ಆರ್ಥಿಕ ಶಿಸ್ತು ಸಹಕಾರಿ ಅದು ದೊಡ್ಡ ಕನಸುಗಳನ್ನು, ವಿಷನ್‌ಗಳನ್ನು ಪೂರ್ಣಗೊಳಿಸಲು ಕೂಡ ದೇಣಿಗೆ ನೀಡುತ್ತದೆ.

6. ಆರ್ಥಿಕ ಶಿಸ್ತು ವ್ಯಕ್ತಿಯ ಅಥವಾ ಸಂಸ್ಥೆಯ ವರ್ಚಸ್ಸು ಹೆಚ್ಚಿಸುತ್ತದೆ : ಕೊಟ್ಟ ಮಾತಿನಂತೆ ನಡೆಯುವುದು, ಹೇಳಿದ ಸಮಯಕ್ಕೆ ತಕ್ಕಂತೆ ಹಣಕಾಸು ವ್ಯವಹಾರ ಇಟ್ಟು ಕೊಳ್ಳುವುದು ವ್ಯಕ್ತಿಯ ಅಥವಾ ಸಂಸ್ಥೆಯ ವರ್ಚಸ್ಸು ಹೆಚ್ಚಿಸುತ್ತದೆ. ಅದು ವ್ಯಾಪಾರವಿರಲಿ ಅಥವಾ ವೈಯಕ್ತಿಕ ಮಟ್ಟದಲ್ಲಿನ ಹಣದ

ವ್ಯವಹಾರ ನಿಗದಿ ಪಡಿಸಿದ ಸಮಯಕ್ಕೆ ಹೇಳಿದಂತೆ ನಡೆದುಕೊಂಡರೆ ಮತ್ತು ಅದು ಪುನರಾವರ್ತನೆಯಾದರೆ ಆಗ ಅದು ವರ್ಚಸ್ಸನ್ನು ಹೆಚ್ಚಿಸುತ್ತದೆ. ಮಾರುಕಟ್ಟೆಯಲ್ಲಿ ಉತ್ತಮ ಹೆಸರನ್ನು ತಂದುಕೊಡುತ್ತದೆ.

7. ವ್ಯಕ್ತಿಯ ಕ್ಷಮತೆಯನ್ನ ಹೆಚ್ಚಿಸುತ್ತದೆ : ಉತ್ತಮ ನಡವಳಿಕೆ, ಸಮಾಜದಲ್ಲಿ ಸಿಗುವ ವರ್ಚಸ್ಸು ವ್ಯಕ್ತಿಯಲ್ಲಿನ ಕಾರ್ಯಕ್ಷಮತೆಯನ್ನ ಹೆಚ್ಚಿಸುತ್ತದೆ. ಗೊತ್ತಿಲ್ಲದೇ ಆತನ ಪ್ರಭಾವಳಿ, ಮಾನಸಿಕ ಕ್ಷಮತೆ ಹೆಚ್ಚುತ್ತದೆ.

8. ಹೆಚ್ಚಿನ ಚೌಕಾಸಿ ಮಾಡುವ ಶಕ್ತಿಯನ್ನ ನೀಡುತ್ತದೆ : ಹಣಕಾಸು ಶಿಸ್ತು ಇದ್ದಾಗ ವಸ್ತುವಿನ ಮೌಲ್ಯದ ಬಗ್ಗೆ bargain ಮಾಡುವ ಶಕ್ತಿ ತಾನಾಗೇ ಬರುತ್ತದೆ. ಮಾರುವವರು ಕೂಡ ವ್ಯಕ್ತಿಯ ಮಾರುಕಟ್ಟೆಯಲ್ಲಿನ ವರ್ಚಸ್ಸು ನೋಡಿ, ಐದು ರೂಪಾಯಿ ಕಡಿಮೆಯಾದರೂ ಹಣ ಹೇಳಿದ ಸಮಯಕ್ಕೆ ಸಿಗುತ್ತದೆ ಎನ್ನುವ ಕಾರಣಕ್ಕೆ ಮಾರಲು ಸಿದ್ಧರಿರುತ್ತಾರೆ. ಆರ್ಥಿಕ ಶಿಸ್ತು ಇನ್ನಷ್ಟು ಮತ್ತಷ್ಟು ಹಣವನ್ನು ಉಳಿಸಲು ಸಹಕಾರಿಯಾಗುತ್ತದೆ.

9. ಸಾಲ ಮಾಡುವುದು ತಪ್ಪುತ್ತದೆ : ಆರ್ಥಿಕ ಶಿಸ್ತಿರುವ ವ್ಯಕ್ತಿ ಅಥವಾ ಸಂಸ್ಥೆ ಅತಿ ಅವಶ್ಯಕವಲ್ಲದಿದ್ದರೆ ಸಾಲವನ್ನ ಎಂದಿಗೂ ಮಾಡುವುದಿಲ್ಲ. ಕಂಡದೆಲ್ಲಾ ನನ್ನದಾಗಿಸಿಕೊಳ್ಳಬೇಕು, ಎಲ್ಲವನ್ನೂ ಸಾಧಿಸಬೇಕು ಎನ್ನುವ ಹುಚ್ಚು ಶಿಸ್ತಿನಲ್ಲಿರದ ಕಾರಣ ಅಕಾರಣ ಸಾಲಗಳು ತನ್ಮೂಲಕ ಹಣ ಪೋಲಾಗುವುದನ್ನ ತಡೆಯುತ್ತದೆ.

10. ಆರ್ಥಿಕ ಭದ್ರತೆಗೆ ರಹದಾರಿ : ನೀವು ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ನೋಡಿ, ಎಲ್ಲದರಲ್ಲೂ ಶಿಸ್ತಿನ ಕಾರಣ ಹಣದ ಉಳಿತಾಯವಾಗಿದೆ, ಕೆಲವು ಕಡೆ ಹಣ ಪೋಲಾಗುವುದು ತಪ್ಪಿದೆ. ಇದು ವ್ಯಕ್ತಿಯ ಅಥವಾ ಸಂಸ್ಥೆಯ ಆರ್ಥಿಕ ಭದ್ರತೆಗೆ ಅಡಿಪಾಯ ಹಾಕಿಕೊಡುತ್ತದೆ. ನೀವು ಆರ್ಥಿಕ ಶಿಸ್ತಿಲ್ಲದ ಕಾರಣ ಆರ್ಥಿಕ ಅಭದ್ರತೆಗೆ ಒಳಗಾದವರನ್ನು ಕಾಣಬಹುದು. ಆದರೆ ಶಿಸ್ತಿನಿಂದ ಆರ್ಥಿಕವಾಗಿ ತೊಂದರೆಗೆ ಒಳಗಾಳದವರ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ.

ಚಾಣಕ್ಯನ ನೀತಿ ಶ್ಲೋಕದಲ್ಲಿ ಒಂದು ಹೀಗಿದೆ:

ಕಃ ಕಾಲಃ ಕಾನಿ ಮಿತ್ರಾಣಿ ಕೋ ದೇಶಃ ಕೌ ವ್ಯಾಯಾಗಮ್ !

ಕಸ್ಯಾಹಂ ಕಾ ಚ ಮೇ ಶಕ್ತಿರಿತಿ ಚಿಂತ್ಯಂ ಮುಹುಮುರ್ಹಃ !!

ಸಮಯ ಎಂತಹುದ್ದು? ಗೆಳೆಯರು ಯಾರು? ಇರುವ ಸ್ಥಾನ ಎಂತದ್ದು? ಆಯ–ವ್ಯಯಗಳು ಎಷ್ಟು? ನಾನು ಯಾರು? ನನ್ನ ಶಕ್ತಿಯೆಷ್ಟು? ಇವುಗಳನ್ನ ಪದೇ ಪದೇ ಆಲೋಚಿಸುತ್ತಿರಬೇಕು ಎನ್ನುತ್ತದೆ. ಗಮನಿಸಿ ನೋಡಿ, ಇವೆಲ್ಲವೂ ಒಮ್ಮೆ ಸಾಧಿಸಿದ ನಂತರ ಆಲಸ್ಯದಿಂದ ಕೂರುವಂತಿಲ್ಲ. ಇವುಗಳ ಬಗ್ಗೆ ಮತ್ತೆ ಮತ್ತೆ ಯೋಚಿಸುತ್ತಿರಬೇಕು. ಹಣದ ವಿಷಯದಲ್ಲಿ, ಆರ್ಥಿಕ ಶಿಸ್ತಿನ ವಿಷಯದಲ್ಲಿ ಕೂಡ ಇದು ಸತ್ಯ. ಸದಾ ಕಾಲವೂ ಅದೇ ಶಿಸ್ತನ್ನು ಕಾಯ್ದುಕೊಳ್ಳಬೇಕು. ಮಾಡಿದ ಕೆಲಸ ನೋಡದೆ ಹೋಯ್ತು ಎನ್ನುವ ಒಂದು ಆಡು ಮಾತಿದೆ. ನಾವು ಯಾವುದೇ ಶಿಸ್ತನ್ನು ಬಿಟ್ಟರೆ ಮತ್ತದೇ ಹಳೆಯ ಹಾದಿಗೆ ಮರಳುತ್ತೇವೆ. ಹೀಗಾಗಿ ಸದಾ ಸನ್ನದ್ಧ ಸ್ಥಿತಿಯಲ್ಲಿರಬೇಕು. ಆರ್ಥಿಕ ಶಿಸ್ತು ಎನ್ನುವುದು ಜೀವನ ಶೈಲಿಯಾಗಬೇಕು. ಅದು ಎರಡು ದಿನ ಪಾಲಿಸಿ ಆಮೇಲೆ ಕೈಕೊಡವಿಕೊಳ್ಳುವ ಕ್ರ್ಯಾಶ್ ಕೋರ್ಸ್ ಅಲ್ಲವೇ ಅಲ್ಲ.

ನೆನಪಿರಲಿ : ಎಲ್ಲಾ ಶಿಸ್ತುಗಳಲ್ಲಿ ಆರ್ಥಿಕ ಶಿಸ್ತಿಗೆ ಅಗ್ರ ಸ್ಥಾನವನ್ನ ನೀಡಲಾಗಿದೆ. ಏಕೆಂದರೆ ಬಹುತೇಕ ಎಲ್ಲವೂ ಇಂದು ಮನುಷ್ಯನ ಆರ್ಥಿಕತೆಯ ಮೇಲೆ ಅವಲಂಬಿತವಾಗಿದೆ. ಹೀಗಾಗಿ ಆರ್ಥಿಕ ಶಿಸ್ತು ಎನ್ನುವುದು ಸದಾ ಕಾಪಾಡಿಕೊಂಡು ಬರಬೇಕಾಗಿರುವ ವಿಷಯವಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮ 1960ರ ಮುಖ್ಯಾಂಶಗಳ ಟಿಪ್ಪಣಿ

ಹೆಚ್.ಎಸ್. ನಾಗರಾಜಯ್ಯ, ಕೆ.ಸಿ.ಎಸ್. ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಬೆಂಗಳೂರು

ಒಂದು ಸಹಕಾರ ಸಂಸ್ಥೆಯನ್ನು ನೋಂದಾಯಿಸಲು ಗಮನಿಸಬೇಕಾದ ಎರಡು ಪ್ರಮುಖ ಅಂಶಗಳೆಂದರೆ, ಸಹಕಾರಿ ತತ್ವಗಳು ಮತ್ತು ಸಹಕಾರಿ ಆಂಧೋಲನಕ್ಕೆ ಪೂರಕವಾಗಿದೆ ಎಂದು ಮತ್ತು ಆರ್ಥಿಕವಾಗಿ ಸಬಲವಾಗಿ ಕೆಲವು ವರ್ಷಗಳು ನಡೆಯುವ ಸಂಬಂಧವಿದೆ ಎಂದು ನಂಬಿಕೆ ಬಂದ ನಂತರ ನೋಂದಾವಣಿ ಮಾಡಲು ನಿಬಂಧಕರು ಜವಾಬ್ದಾರಿಯಾಗತಕ್ಕದ್ದು.

01. ನೋಂದಾವಣಿ: ಒಂದು ಸಹಕಾರ ಸಂಘವನ್ನು ನೋಂದಾವಣಿ ಮಾಡಬೇಕಾದಾಗ 20 ವ್ಯಕ್ತಿಗಳು ಅಥವಾ 13ಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳು ಕೂಡಿ ನೋಂದಾವಣಿ ಪ್ರಸ್ತಾವನೆ ಸಲ್ಲಿಸುವುದು. ನಿಬಂಧಕರು ಒಂದು ಸಹಕಾರ ಸಂಸ್ಥೆಯನ್ನು ನೋಂದಾಯಿಸಲು ಗಮನಿಸಬೇಕಾದ ಎರಡು ಪ್ರಮುಖ ಅಂಶಗಳೆಂದರೆ: (1) ಸಹಕಾರಿ ತತ್ವಗಳು ಮತ್ತು ಸಹಕಾರಿ ಆಂಧೋಲನಕ್ಕೆ ಪೂರಕವಾಗಿದೆ ಎಂದು ಮತ್ತು (2) ಆರ್ಥಿಕವಾಗಿ ಸಬಲವಾಗಿ ಕೆಲವು ವರ್ಷಗಳು ನಡೆಯುವ ಸಂಬಂಧವಿದೆ ಎಂದು ನಂಬಿಕೆ ಬಂದ ನಂತರ ನೋಂದಾವಣಿ ಮಾಡಲು ನಿಬಂಧಕರು ಜವಾಬ್ದಾರಿಯಾಗತಕ್ಕದ್ದು. ನೋಂದಾವಣಿ ಪ್ರಸ್ತಾವನೆಯೊಂದಿಗೆ ಕರಡು ಉಪನಿಯಮಗಳ ಐದು ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು. ಪ್ರಸ್ತಾವನೆ ಸ್ವೀಕರಿಸಿದ ಮೂರು ತಿಂಗಳೊಳಗಾಗಿ ನೋಂದಾಯಿಸತಕ್ಕದ್ದು. ಇಲ್ಲವಾದರೆ ಅದನ್ನು ನೋಂದಾವಣಿಯಾಗಿದೆ ಎಂದು ಭಾವಿಸತಕ್ಕದ್ದು. (ಕಲಂ 4,6,7& 8 ಹಾಗೂ ನಿಯಮ 3, 3ಎ & 3ಬಿ).

02. ಉಪನಿಯಮಗಳ ತಿದ್ದುಪಡಿ: ಉಪನಿಯಮಗಳ ನೋಂದಾವಣಿಯಾದ ನಂತರ, ಆ ನಿಯಮಗಳಲ್ಲಿ ತಿದ್ದುಪಡಿ ತರಬೇಕಾದರೆ ಸಂಘದ ಸಾಮಾನ್ಯ ಸಭೆಯ 2/3 ಬಹುತರದಿಂದ ಮತದಾನದ ಹಕ್ಕುಳ್ಳ ಸದಸ್ಯರ ಒಪ್ಪಿಗೆ ಪಡೆದು, ನಿಬಂಧಕರಿಗೆ 60 ದಿವಸಗಳೊಳಗಾಗಿ ಸಲ್ಲಿಸತಕ್ಕದ್ದು. ತಿದ್ದುಪಡಿ ಪ್ರಸ್ತಾವನೆ ಸ್ವೀಕರಿಸಿದ 3 ತಿಂಗಳೊಳಾಗಿ ನೋಂದಾವಣಿ ಮಾಡದಿದ್ದರೆ ಅಥವಾ ತಿರಸ್ಕರಿಸದಿದ್ದರೆ, ಆ ಪ್ರಸ್ತಾವನೆ ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕದ್ದು ಹಾಗೂ ಸಹಿ ಮತ್ತು ಮುದ್ರೆಯೊಂದಿಗೆ ನೀಡತಕ್ಕದ್ದು.

ಒಂದು ಸಹಕಾರ ಸಂಘದ ಉಪನಿಯಮಗಳ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ ಎಂದು ನಿಬಂಧಕರಿಗೆ ಮನದಟ್ಟಾದರೆ, ಕರಡು ತಿದ್ದುಪಡಿಯನ್ನು ಸಂಬಂಧಪಟ್ಟ ಸಹಕಾರ ಸಂಸ್ಥೆಗೆ ರವಾನಿಸಿ ನಿರ್ದಿಷ್ಟ ದಿನಾಂಕದೊಳಗೆ ಸಾಮಾನ್ಯ ಸಭೆ ಕರೆದು ಅನುಮೋದನೆ ಪಡೆದ ನಂತರ ತಿದ್ದುಪಡಿ ಪ್ರಸ್ತಾವನೆ ಸಲ್ಲಿಸಲು ಸೂಚಿಸತಕ್ಕದ್ದು ಆ ನಿರ್ದಿಷ್ಟ ಅವಧಿಯಲ್ಲಿ ಸಹಕಾರ ಸಂಸ್ಥೆ ತಿದ್ದುಪಡಿ ಮಾಡದೆ ಇದ್ದರೆ, ನಿಬಂಧಕರು ಮತ್ತೊಂದು ನೋಟೀಸ್ ನೀಡಿ, ಹೇಳಿಕೆ ನೀಡಲು ಅವಕಾಶಕೊಟ್ಟು ತಿದ್ದುಪಡಿಯನ್ನು ನೋಂದಾಯಿಸಿ, ಆ ಸಂಸ್ಥೆಗೆ ರವಾನಿಸಲು ನಿಬಂಧಕರಿಗೆ ಅಧಿಕಾರವಿರುತ್ತದೆ. (ಕಲಂ 12 ಮತ್ತು ನಿಯಮ 6)



03. ಸದಸ್ಯತ್ವ: ಕರಾರು ಕಾಯ್ದೆಯಡಿ ಅರ್ಹವಿರುವ ಒಬ್ಬ ವ್ಯಕ್ತಿ ಅಥವಾ ಸಂಸ್ಥಾ ರೂಪದ ನೋಂದಾಯಿತ ಸಂಸ್ಥೆಗಳು ಸದಸ್ಯರಾಗುವ ಅರ್ಹತೆ ಗಳಿಸುತ್ತಾರೆ. ಸದಸ್ಯತ್ವ ಅರ್ಜಿ ಸಲ್ಲಿಸಿದ ಎರಡು ತಿಂಗಳೊಳಗಾಗಿ ಸದಸ್ಯತ್ವದ ಬಗ್ಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ ಅಥವಾ ತಿರಸ್ಕರಿಸದಿದ್ದರೆ, ಅಂತಹ ವ್ಯಕ್ತಿ / ಅರ್ಜಿ ಅಂಗೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು.

04. ಸದಸ್ಯತ್ವಕ್ಕೆ ಅನರ್ಹತೆ: ದಿವಾಳಿತನದಿಂದ ಅಥವಾ ನೈತಿಕ ಅಧಃಪತನದ ಅಪವಾದಕ್ಕೆ ಶಿಕ್ಷೆ ವಿಧಿಸಿದ್ದು 5 ವರ್ಷ ಗತಿಸದಿದ್ದರೆ ಅಥವಾ ಸಂಘವು ನಡೆಸುವ ವ್ಯವಹಾರವನ್ನೇ ನಡೆಸಿದ್ದರೆ, ಅದೇ ರೀತಿಯ ಮತ್ತೊಂದು ಸಹಕಾರ ಸಂಘದ ಸದಸ್ಯನಾಗಿದ್ದರೇ, ಸಂಘವು ಸಾಲ ಪಡೆಯುವ / ಸಂಯೋಜಿತ ಒಕ್ಕೂಟ / ಅದೇ ಸಂಘದ ಸದಸ್ಯನಾಗಿದ್ದರೆ, ಸದಸ್ಯತ್ವಕ್ಕೆ ಅನರ್ಹತೆ ಗಳಿಸುತ್ತಾನೆ. ಸಹಸದಸ್ಯರು ಮತ್ತು ನಾಮಮಾತ್ರ ಸದಸ್ಯರನ್ನು ಸೇರಿಸಿಕೊಳ್ಳಲು ಅವಕಾಶವಿದ್ದು, ಸಹ ಸದಸ್ಯರ ಸಂಖ್ಯೆ ಸಾಮಾನ್ಯ ಸದಸ್ಯರ ಒಟ್ಟು ಸದಸ್ಯರ ಶೇ.15% ಮೀರತಕ್ಕದ್ದಲ್ಲ. (ನೌಕರರ ಸಹಕಾರ

ಪ್ರತಿಯೊಂದು ಸಹಕಾರ ಸಂಘವು ಪ್ರತಿ ವರ್ಷ ಸೆಪ್ಟೆಂಬರ್ 25ರೊಳಗೆ ವಾರ್ಷಿಕ ಮಹಾಸಭೆ ನಡೆಸುವುದು ಕಡ್ಡಾಯವಾಗಿದೆ. ಕಲಂ 27 ರೀತ್ಯ ಕಾರ್ಯಸೂಚಿ ಮಂಡಿಸುವುದು ಕಡ್ಡಾಯವಾಗಿದೆ. ಮಹಾಸಭೆಗೆ ಕೋರಂ ಒಟ್ಟು ಅರ್ಹ ಸದಸ್ಯರ ಶೇ.10 ಅಥವಾ 1000 ಇದರಲ್ಲಿ ಯಾವುದು ಕಡಿಮೆಯೋ ಅದು ಕೋರಂ ಆಗಿರುತ್ತದೆ. ಸಭೆ ಮುಕ್ತಾಯವಾಗುವ ತನಕ ಕೋರಂ ಇರತಕ್ಕದ್ದು.

ಸಂಘವನ್ನು ಹೊರತುಪಡಿಸಿ) ಸಹ ಸದಸ್ಯರು ಸಾಲು ಬಂಡವಾಳ ಹೂಡಬಹುದು ಹಾಗೂ ಲಾಭಾಂಶ ಪಡೆಯಲು ಅರ್ಹರಿರುತ್ತಾರೆ. ಆದರೆ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ಸಾಮಾನ್ಯ ಸಭೆಗೆ ಹಾಜರಾಗಲು, ಮತ ನೀಡಲು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಿರುವುದಿಲ್ಲ. ಸಾಮಾನ್ಯ ಸದಸ್ಯರಿಗೆ ಈ ಎಲ್ಲ ಹಕ್ಕುಗಳಿರುತ್ತವೆ. ಸಾಮಾನ್ಯ ಸದಸ್ಯರು ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಯಾವುದಾದರು ಎರಡು ಸಾಮಾನ್ಯ ಸಭೆಗೆ ಗೈರು ಹಾಜರಾದಲ್ಲಿ ಮತ್ತು 5 ಕಳೆದ ಸಹಕಾರ ವರ್ಷಗಳಲ್ಲಿ ಬೈಲಾ ರೀತ್ಯ ಕನಿಷ್ಠ ಸೇವೆ ಬಳಸಿಕೊಳ್ಳಲು ವಿಫಲರಾದಲ್ಲಿ ಒಂದು ವರ್ಷದ ಮಟ್ಟಿಗೆ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. (ಕಲಂ 17, 18, 18ಎ, 20 & 27ಎ).

05. ವಾರ್ಷಿಕ ಮಹಾಸಭೆ ಮತ್ತು ವಿಶೇಷ ಮಹಾಸಭೆ: ಪ್ರತಿಯೊಂದು ಸಹಕಾರ ಸಂಘವು ಪ್ರತಿ ವರ್ಷ ಸೆಪ್ಟೆಂಬರ್ 25ರೊಳಗೆ ವಾರ್ಷಿಕ ಮಹಾಸಭೆ ನಡೆಸುವುದು ಕಡ್ಡಾಯವಾಗಿದೆ. ಕಲಂ 27 ರೀತ್ಯ ಕಾರ್ಯಸೂಚಿ ಮಂಡಿಸುವುದು ಕಡ್ಡಾಯವಾಗಿದೆ. ಮಹಾಸಭೆಗೆ ಕೋರಂ ಒಟ್ಟು ಅರ್ಹ ಸದಸ್ಯರ ಶೇ.10 ಅಥವಾ 1000 ಇದರಲ್ಲಿ ಯಾವುದು ಕಡಿಮೆಯೋ ಅದು ಕೋರಂ ಆಗಿರುತ್ತದೆ. ಸಭೆ ಮುಕ್ತಾಯವಾಗುವ ತನಕ ಕೋರಂ ಇರತಕ್ಕದ್ದು. ಕೋರಂ ಇಲ್ಲದೆ ಸಭೆ ಮುಂದುವರಿಸತಕ್ಕದ್ದಲ್ಲ. ಮಹಾಸಭೆಗೆ 15 ದಿವಸ ಮುಂಚಿತವಾಗಿ ನೋಟೀಸ್ ನೀಡತಕ್ಕದ್ದು ಹಾಗೂ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಣೆ ನೀಡತಕ್ಕದ್ದು. (ಕಲಂ 27, 124 ಮತ್ತು ನಿಯಮ 14ಎಜೆ) ವಿಶೇಷ ಸಾಮಾನ್ಯ ಸಭೆಯನ್ನು ಆಡಳಿತ ಮಂಡಲಿಯ ನಿರ್ಣಯದಂತೆ ಅಥವಾ ನಿಬಂಧಕರ ಮನವಿಯಂತೆ ಅಥವಾ ಒಟ್ಟು ಸದಸ್ಯರ 1/5 ಭಾಗದಷ್ಟು ಸದಸ್ಯರು ಲಿಖಿತ ಕೋರಿಕೆ ಸಲ್ಲಿಸಿದ ಒಂದು ತಿಂಗಳೊಳಗಾಗಿ ಕರೆಯತಕ್ಕದ್ದು. ಸಭೆ ಕರೆಯಲು ವಿಫಲರಾದಲ್ಲಿ ನಿಬಂಧಕರಿಂದ ನಿಯೋಜಿತ ಅಧಿಕಾರಿಯಿಂದ ಸಭೆ ಕರೆಯಲು ಅವಕಾಶವಿರುತ್ತದೆ. ಸದಸ್ಯರ ಮನವಿ ಮೇರೆಗೆ ಕರೆದ ವಿಶೇಷ ಸಭೆಯಾದರೇ ಕೋರಂ ಆಗದೆ ಇದ್ದ ಪ್ರಸಂಗದಲ್ಲಿ ಸಭೆಯನ್ನು ರದ್ದುಪಡಿಸತಕ್ಕದ್ದು. (ಕಲಂ 28 ಮತ್ತು 124) ವಿಶೇಷ ಮಹಾಸಭೆಗೆ ಹತ್ತು ದಿವಸಗಳ ನೋಟೀಸ್ ಸಾಕಾಗುತ್ತದೆ.

06. ಸಹಕಾರ ಸಂಘಗಳ ವ್ಯವಸ್ಥಾಪನಾ ಮಂಡಲಿ: ಒಂದು ಸಹಕಾರ ಸಂಘದ ಆಡಳಿತ ನಿರ್ವಹಣೆ ಮಾಡಲು ಸಾಮಾನ್ಯ ಸಭೆಯ ಮತದಾನ ಹಕ್ಕುಳ್ಳ ಸದಸ್ಯರು ಒಂದು ಮಂಡಲಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಮುಖಾಂತರ ರಚನೆ ಮಾಡತಕ್ಕದ್ದು. ಮಂಡಲಿಯಲ್ಲಿ ನಿರ್ದೇಶಕರ ಸಂಖ್ಯೆ ಸಂಘದ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕನಿಷ್ಠ 13 ರಿಂದ ಗರಿಷ್ಠ 21 ಮೀರದಂತೆ ನಿಗದಿಪಡಿಸಲಾಗಿದೆ. (ಸಂಘದ ಮುಖ್ಯಕಾರ್ಯನಿರ್ವಾಹಕ ಹಾಗೂ ವೃತ್ತಿಪರ ನಿರ್ದೇಶಕರನ್ನು ಹೊರತುಪಡಿಸಿ) ವ್ಯಕ್ತಿ ಸದಸ್ಯರೇ ಇರುವ ಸಂಘದ ಆಡಳಿತ ಮಂಡಲಿಯಲ್ಲಿ ಎರಡು ಸ್ಥಾನ ಮಹಿಳೆಯರಿಗೆ, ಎರಡು ಸ್ಥಾನ ಇತರ ಹಿಂದುಳಿದ ವರ್ಗಕ್ಕೆ, ಒಂದು ಸ್ಥಾನ ಪರಿಶಿಷ್ಟ ಜಾತಿ ಮತ್ತು ಒಂದು ಸ್ಥಾನ ಪರಿಶಿಷ್ಟ ಪಂಗಡಕ್ಕೆ ಮೀಸಲಿರತಕ್ಕದ್ದು. ಚುನಾವಣೆಯನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಮೇಲ್ವಿಚಾರಣೆ, ನಿರ್ದೇಶನ ಹಾಗೂ ಮಾರ್ಗದರ್ಶನ ರೀತ್ಯ ನಡೆಸತಕ್ಕದ್ದು. ಮತದಾರರ ಪಟ್ಟಿ ತಯಾರಿಕೆ ಹಾಗೂ ಚುನಾವಣೆ ನಡೆಸುವುದುಸಹಕಾರ ಚುನಾವಣಾ ಪ್ರಾಧಿಕಾರದ ಜವಾಬ್ದಾರಿಯಾಗಿದೆ. ಆಡಳಿತ ಮಂಡಲಿಯ ಅವಧಿ ಹಾಗೂ ಪದಾಧಿಕಾರಿಗಳ ಅಧಿಕಾರವಧಿ 5 ವರ್ಷಗಳು. ಆಕಸ್ಮಿಕವಾಗಿ ಖಾಲಿ ಬಿದ್ದ ನಿರ್ದೇಶಕರ ಸ್ಥಾನಗಳ ಉಳಿದ ಅವಧಿ 2 1/2 ವರ್ಷಗಳಿಗಿಂತ ಕಡಿಮೆ ಇದ್ದರೆ, ಆಡಳಿತ ಮಂಡಲಿ ಸಹಮತದಿಂದ ಭರ್ತಿ ಮಾಡಬಹುದು. ಉಳಿದ ಅವಧಿ 2 1/2 ವರ್ಷಗಳಿಗಿಂತ ಹೆಚ್ಚಿದ್ದಲ್ಲಿ, ಚುನಾವಣೆ ಮೂಲಕ ಭರ್ತಿ ಮಾಡಬಹುದು. ಸಹಕಾರ ಸಂಘದಲ್ಲಿ ಸರ್ಕಾರದ ಷೇರು, ಸಾಲ, ಸಹಾಯಧನ ಮತ್ತು ಬ್ಯಾಂಕ್ ಗ್ಯಾರಂಟಿ ಇದ್ದಲ್ಲಿ ಒಬ್ಬರನ್ನು ಮಾತ್ರ ಸರ್ಕಾರ ನಾಮನಿರ್ದೇಶನ ಮಾಡಲು ಅವಕಾಶವಿದೆ. (ಪ್ಯಾಕ್ಸ್ ಹೊರತುಪಡಿಸಿ) ಕಲಂ 28ಎ, 28ಬಿ, 29ಇ, 29ಎಫ್, 39ಎ, 39ಎ.ಎ ನಿಯಮ 13ಡಿ ರಿಂದ 14ಝಡ್, 14ಎಎಫ್, 14ಎಎಲ್ ಮತ್ತು 14ಎಎಲ್ಎ).

07. ನಿರ್ದೇಶಕರ ಹಕ್ಕು, ಕರ್ತವ್ಯ–ಜವಾಬ್ದಾರಿಗಳು ಮತ್ತು ಅನರ್ಹತೆ: ಆಡಳಿತ ಮಂಡಲಿ ಸಭೆಯಲ್ಲಿ ಬೈಲಾ ರೀತ್ಯ ನಡೆಸುವುದು. ಸದಸ್ಯರ ಸೇರ್ಪಡೆ ಮತ್ತು ವಾಪಸ್ಸಾತಿ, ಸಕಾಲದಲ್ಲಿ ವಾರ್ಷಿಕ ಮಹಾಸಭೆ ನಡೆಸುವುದು, ಚುನಾವಣೆ ಏರ್ಪಾಡು ಮಾಡುವುದು. ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಮಹಾಸಭೆಗೆ ಮಂಡಿಸುವುದು. ಸಕಾಲದಲ್ಲಿ ಇಲಾಖೆಗೆ ಆರ್ಥಿಕ ತಃಖ್ತೆಗಳನ್ನು ಸಲ್ಲಿಸುವುದು. ಸಾಲ ಸಂಸ್ಥೆಗಳಲ್ಲಿ ಸಾಲ ಮಂಜೂರಾತಿ, ಸಿಬ್ಬಂದಿ ನೇಮಕಾತಿ, ಕೆಲಸ ನಿರ್ವಹಣೆ, ಶಿಸ್ತು ನಿಯಮಗಳನ್ನು ರೂಪಿಸುವುದು. ಸಾಲ ವಸೂಲಾತಿಗೆ ಕ್ರಮ ಜರುಗಿಸುವುದು. ನಿರ್ದೇಶಕರು ಆಡಳಿತ ಮಂಡಲಿ ಸಭೆಗೆ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ, ಸುಸ್ತಿಯಾದಲ್ಲಿ, ಮಹಾಸಭೆ ನಡೆಸಲು ವಿಫಲರಾದಲ್ಲಿ, ಚುನಾವಣೆಗೆ ಏರ್ಪಾಡು ಮಾಡದಿದ್ದಲ್ಲಿ, ಆಡಿಟ್ ಮಾಡಿಸಲು

ಹಾಗೂ ಆಡಿಟ್ ವರದಿ ಮತ್ತು ಅನುಪಾಲನಾ ವರದಿಯನ್ನೇ ವಾರ್ಷಿಕ ಮಹಾಸಭೆಗೆ ಮಂಡಿಸಲು ವಿಫಲರಾದಲ್ಲಿ, ಕಲಂ 27ಬಿ ರೀತ್ಯ ವರದಿ ಸಲ್ಲಿಸಲು ವಿಫಲರಾದಲ್ಲಿ ಅನರ್ಹತೆಗೆ ಒಳಗಾಗುತ್ತಾರೆ. (ಕಲಂ 28ಸಿ, 29ಎ, 29ಸಿ ಮತ್ತು 27ಬಿ)

08. ಆಡಳಿತ ಮಂಡಲಿ ರದ್ದತಿ ಮತ್ತು ಅಮಾನತ್ತು: ಒಂದು ಸಹಕಾರ ಸಂಘದ ಆಡಳಿತ ಮಂಡಳಿಯು ಸತತವಾಗಿ ತಪ್ಪೆಸಗುತ್ತಿದ್ದರೇ, ಸದಸ್ಯರ ಹಿತಾಸಕ್ತಿಗೆ ಭಾದಕ ಎಸಗುತ್ತಿದ್ದರೇ, ಕಾಯ್ದೆ, ನಿಯಮ ಮತ್ತು ಬೈಲಾ ಉಲ್ಲಂಘಿಸುತ್ತಿದ್ದರೇ, ಕಾರ್ಯನಿರ್ವಹಣೆಯಲ್ಲಿ ಇಕ್ಕಟ್ಟಿನ ಸ್ಥಿತಿ ನಿರ್ಮಾಣವಾದರೇ, ಸಂಘದಲ್ಲಿ ಹಣಕಾಸಿನ ಅವ್ಯವಹಾರ, ಮೋಸ ನಡೆದಿದ್ದರೆ, ಸಂಘದ ಆಡಳಿತ ಮಂಡಲಿಯನ್ನೇ ರದ್ದುಪಡಿಸಬಹುದು ಅಥವಾ ಅಮಾನತ್ತಿನಲ್ಲಿಡಬಹುದು. ಪಟ್ಟಣ ಸಹಕಾರ ಬ್ಯಾಂಕುಗಳಾದರೇ, ಬಿ.ಆರ್. ಕಾಯ್ದೆ ರೀತ್ಯ ಆರ್‌ಬಿಐ ರದ್ದುಪಡಿಸಲು ಅವಕಾಶವಿದೆ. ಸಹಕಾರ ಸಂಸ್ಥೆಯ ಆಡಳಿತ ಮಂಡಲಿಯಲ್ಲಿ ಕೋರಂ ಕೊರತೆಯಿಂದ ಶೂನ್ಯವಸ್ಥೆ ಇದ್ದಲ್ಲಿ, ವಿಶೇಷ ಅಧಿಕಾರಿಯನ್ನೇ ನೇಮಿಸಲು ಅವಕಾಶವಿದೆ. ಗರಿಷ್ಠ ಒಂದು ವರ್ಷದವರೆಗೆ ವಿಸ್ತರಿಸಲು ಅವಕಾಶವಿದೆ. (ಕಲಂ 30 ಮತ್ತು 31).

09. ಪದಾಧಿಕಾರಿಗಳ ಮೇಲೆ ಅವಿಶ್ವಾಸ ಮಂಡನೆ: ಆಡಳಿತ ಮಂಡಲಿಯ 1/3 ಅಂಶದ ಚುನಾಯಿತ ಸದಸ್ಯರು ಸಂಘದ ಪದಾಧಿಕಾರಿಗಳ ಮೇಲೆ ಅವಿಶ್ವಾಸ ಪ್ರಸ್ತಾವನೆಯನ್ನೇ ಸಂಘದ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸುವುದು. ಅದರ ಒಂದು ಪ್ರತಿಯನ್ನು ಸಕ್ಷಮ ನಿಬಂಧಕರಿಗೆ ಸಲ್ಲಿಸುವುದು. ಪ್ರಸ್ತಾವನೆ ಸಲ್ಲಿಸಿದ ಏಳು ದಿವಸಗಳೊಳಗಾಗಿ ಮುಖ್ಯಕಾರ್ಯನಿರ್ವಾಹಕನು ಸಕ್ಷಮ ರಿಜಿಸ್ಟ್ರಾರನಿಗೆ ವರದಿ ಸಲ್ಲಿಸುವುದು. ಅವಿಶ್ವಾಸ ಮಂಡಿಸಲು ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಕನಿಷ್ಠ ಎರಡು ವರ್ಷ ಆಗಿರಬೇಕು. ಸಕ್ಷಮ ನಿಬಂಧಕರು ಅಧಿಕೃತ ಅಧಿಕಾರಿ ನೇಮಿಸಿ, ಆತನ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ಅಧಿಕಾರ ನೀಡಿ, ಚುನಾಯಿತ ನಿರ್ದೇಶಕರಿಗೆ ಮಾತ್ರ ಸಭಾ ನೋಟೀಸನ್ನು 15 ದಿವಸಗಳ ಮುಂಚಿತವಾಗಿ ಅಂಚೆ ನೋಂದಾಯಿತ ಸ್ವೀಕೃತಿ ಅಥವಾ ಮುದ್ದಾಂ ನೋಟೀಸ್ ಜಾರಿ ಮಾಡುವುದು. ಸದರಿ ಸಭೆ ನಡೆಸಲು ಕೋರಂ ಅಗತ್ಯವಿದೆ. ನಂತರ ಅವಿಶ್ವಾಸ ವಿಷಯ ಹೊರತುಪಡಿಸಿ ಬಾಕಿ ಕಾರ್ಯಸೂಚಿ ಇರಬಾರದು. ಅವಿಶ್ವಾಸ ನಿರ್ಣಯದ ಮೇಲೆ ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ. ಅವಿಶ್ವಾಸದ ಪರವಾಗಿ ಒಟ್ಟು ಆಡಳಿತ ಮಂಡಲಿ ಸದಸ್ಯರ ಸಂಖ್ಯೆಗೆ 2/3 ಬಹುಮತದಿಂದ ಒಪ್ಪಿಗೆ ಆದಲ್ಲಿ, ಪದಾಧಿಕಾರಿ ಆ ದಿನವೇ ಸ್ಥಾನ ಬಿಟ್ಟು ಕೊಡತಕ್ಕದ್ದು. ಅವಿಶ್ವಾಸ ನಿರ್ಣಯ ಗುಪ್ತ ಮತದಾನದ ಮೂಲಕ ನಡೆಯತಕ್ಕದ್ದು. ಅವಿಶ್ವಾಸಕ್ಕೆ ಒಪ್ಪಿಗೆ ಸಿಗದಿದ್ದರೇ ಮುಂದಿನ ಒಂದು ವರ್ಷದವರೆಗೆ ಮತ್ತೆ ಅವಿಶ್ವಾಸ ನಿರ್ಣಯ ಮಂಡಿಸತಕ್ಕದ್ದಲ್ಲ. (ಕಲಂ 29ಹೆಚ್ ಮತ್ತು ನಿಯಮ 14ಎಕೆಕೆ)

10. ಆಡಿಟ್ (ಲೆಕ್ಕಪರಿಶೋಧನೆ): ಪ್ರತಿಯೊಂದು ಸಹಕಾರ ಸಂಘವು ವರ್ಷದಲ್ಲಿ ಒಂದು ಸಾರಿ ಶಾಸನಬದ್ಧವಾದ ಲೆಕ್ಕಪರಿಶೋಧನೆ ಮಾಡಿಸುವುದು ಕಡ್ಡಾಯವಾಗಿದೆ. ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿವಸಗಳೊಳಗಾಗಿ ಆಡಿಟ್‌ರ್‌ರವರಿಗೆ ಆರ್ಥಿಕ ತಃಖ್ತೆಗಳನ್ನು ಒದಗಿಸುವುದು ಕಡ್ಡಾಯವಾಗಿದೆ. ಲೆಕ್ಕಪರಿಶೋಧಕರನ್ನು ಆರ್‌ಬಿಐ ಪ್ಯಾನಲ್‌ನಿಂದ ಜೂನ್ 30ರೊಳಗೆ ನೇಮಕ ಮಾಡುವುದು. ಆಡಿಟ್ ವರದಿಯನ್ನು ಪಡೆಯತಕ್ಕದ್ದು. ಆಡಿಟ್ ವರದಿಯನ್ನು ಅಂಗೀಕರಿಸುವ ಅಧಿಕಾರ ಮಹಾಸಭೆಗೆ ದತ್ತವಾಗಿದೆ. ಆಡಿಟ್ ವರದಿ ಮೇಲ್ನೋಟಕ್ಕೆ ದಾಖಲಾತಿಗಳಿಂದ ಸರಿಯಿಲ್ಲ ಎಂದಾದಲ್ಲಿ ಮಹಾಸಭೆ ತಿರಸ್ಕರಿಸಿ, ಮರು ಆಡಿಟ್‌ಗೆ ಠರಾವು ಮಾಡಿ ಸರ್ಕಾರವನ್ನು ಕೋರಬಹುದು. ಮರು ಆಡಿಟ್ ಫೀ ಯನ್ನೇ ಆಯಾ ಸಂಘವೇ ಭರಿಸಬೇಕಾಗುತ್ತದೆ. (ಕಲಂ 63 ಮತ್ತು ನಿಯಮ 29 ರಿಂದ 30ಎ).

11. ಶಾಸನಬದ್ಧ ವಿಚಾರಣೆ ಮತ್ತು ಪರಿವೀಕ್ಷಣೆ: ನಿಬಂಧಕರು ಸ್ವ–ಇಚ್ಛೆಯಿಂದ ಒಂದು ಸಹಕಾರ ಸಂಘದ ರಚನೆ, ಆಡಳಿತ ಮತ್ತು ಹಣಕಾಸಿಗೆ ಸಂಬಂಧಪಟ್ಟಂತೆ ವಿಚಾರಣೆ ಮಾಡಲು ಲಿಖಿತವಾಗಿ ಆದೇಶಿಸಬಹುದು ಹಾಗೂ ಒಂದು ಸಹಕಾರ ಸಂಘದ ಹಣಕಾಸು ಪೂರೈಸುವ ಸಂಸ್ಥೆ, ಸಂಘದ ಬಹುಸಂಖ್ಯೆ ಆಡಳಿತ ಮಂಡಲಿ ಸದಸ್ಯರು ಅಥವಾ ಸಂಘದ ಒಟ್ಟು ಸದಸ್ಯರ 1/3 ಅಂಶಕ್ಕೆ ಕಡಿಮೆ ಇಲ್ಲದ ಸದಸ್ಯರ ಅರ್ಜಿಯ ಮೇಲೆ ವಿಚಾರಣೆ ಮಾಡಲು ನಿಬಂಧಕರು ಆದೇಶಿಸತಕ್ಕದ್ದು. ವಿಚಾರಣೆಯ ಒಂದು ವರದಿಯನ್ನು ಲೆಕ್ಕತಪಾಸಣೆ ಅಧಿಕಾರಿಗೆ ಕಳಿಸತಕ್ಕದ್ದು. ವಿಚಾರಣಾ ವರದಿಯನ್ನು 12 ತಿಂಗಳೊಳಗೆ ಸಲ್ಲಿಸತಕ್ಕದ್ದು ಮತ್ತು ಕಾರಣಗಳನ್ನು ಲಿಖಿತವಾಗಿ ದಾಖಲಿಸಿ 6 ತಿಂಗಳು ವಿಸ್ತರಿಸಬಹುದು. 18 ತಿಂಗಳ ನಂತರ ವಿಸ್ತರಿಸುವ ಅಧಿಕಾರ ಸರ್ಕಾರಕ್ಕೆ ನೀಡಲಾಗಿದೆ. (ಕಲಂ 64). ನಿಬಂಧಕರು ಸ್ವಯಂ ಪ್ರೇರಣೆಯಿಂದ ಅಥವಾ ಸಂಘದ ಸಾಲಗಾರರಿಂದ ಒಂದು ಅರ್ಜಿ ಆಧಾರದ ಮೇಲೆ ಒಂದು ಸಂಘದ ಲೆಕ್ಕ ಪತ್ರಗಳನ್ನು ಪರಿಶೀಲಿಸಬಹುದು. ಸಾಲ ನೀಡಿದ ಸಂಸ್ಥೆಗೆ ಸಂಬಂಧಪಟ್ಟಂತೆ, ಭದ್ರತೆ ಪಡೆದ ಬಗ್ಗೆ ದಾಖಲಾತಿಗಳನ್ನೇ ಪರಿಶೀಲಿಸತಕ್ಕದ್ದು. ಇದಕ್ಕೆ ಪೂರಕವಾಗಿ ಸಾಲ ನೀಡಿದ ಸಂಸ್ಥೆಯು ತನ್ನ ಸದಸ್ಯ ಸಂಸ್ಥೆಯ ಲೆಕ್ಕಪತ್ರಗಳನ್ನು ಅದು ಸಾಲಕ್ಕೆ ನೀಡಿದ ಸಂಬಂಧಪಟ್ಟಂತೆ ಪರಿವೀಕ್ಷಣೆ ಮಾಡಲು ಅಧಿಕಾರ ಹೊಂದಿರತಕ್ಕದ್ದು. (ಕಲಂ 65).

12. ಲಾಭ ವಿಂಗಡಣೆ: ಪ್ರತಿಯೊಂದು ಸಹಕಾರ ಸಂಘವು ತಾನು ಗಳಿಸಿದ ನಿವ್ವಳ ಲಾಭವನ್ನು ವಿಂಗಡಿಸುವ ಬಗ್ಗೆ ಅವಕಾಶ ಕಲ್ಪಿಸಿದೆ. ಪ್ರಥಮ ಆದ್ಯತೆಯಲ್ಲಿ ಮೀಸಲು ನಿಧಿ ಕನಿಷ್ಠ ಶೇ.25% ಕಡಿಮೆ ಇಲ್ಲದಂತೆ, ಮತ್ತು ಸಹಕಾರ ಶಿಕ್ಷಣ ನಿಧಿಯಾಗಿ ಶೇ.2% ರಂತೆ ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳು ಹೆಚ್ಚವರಿಯಾಗಿ ಶೇ.1% ರಷ್ಟನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ಪಾವತಿಸತಕ್ಕದ್ದು. ಶಿಕ್ಷಣ ನಿಧಿ ಪಾವತಿಸದೆ, ಸದಸ್ಯರಿಗೆ ಲಾಭಾಂಶ ಪಾವತಿಸತಕ್ಕದಲ್ಲ. ನಂತರ ಬೈಲಾ ರೀತ್ಯಾ ಲಾಭವನ್ನು ವಿಂಗಡಿಸಬಹುದಾಗಿದೆ.(ಕಲಂ 57 ಮತ್ತು ನಿಯಮ 20, 20ಎ).

13. ಅಧಿಭಾರ ಅರ್ಜಿ (Surcharge proceedings): ಲೆಕ್ಕ ತಪಾಸಣೆ, ವಿಚಾರಣೆ, ಪರಿವೀಕ್ಷಣೆ ಮತ್ತು ಸಮಾಪನಾಧಿಕಾರಿಯ ಪರಿಶೋಧನೆಯ ನಂತರ ಪದಾಧಿಕಾರಿಗಳ ಮತ್ತು ನೌಕರರ ಮೇಲೆ ವಸೂಲಾತಿಗೆ ಕ್ರಮ ಜರುಗಿಸಬೇಕಾದರೆ

ಅಧಿಬಾರ ಅರ್ಜಿಯನ್ನು ದಾಖಲಿಸಬಹುದು. ನಿಬಂಧಕರು ಸ್ವಯಂ ಪ್ರೇರಣೆಯಿಂದ ಅರ್ಜಿಯನ್ನು ದಾಖಲಿಸಬಹುದಾಗಿದೆ. ಸಕ್ಷಮ ನಿಬಂಧಕರು ಕಾರಣ ಕೇಳುವ ನೋಟಿಸನ್ನು ಆರೋಪ ಪಟ್ಟಿಯೊಂದಿಗೆ ಜಾರಿ ಮಾಡಿ, ಲಿಖಿತವಾಗಿ/ಮೌಖಿಕವಾಗಿ ಹೇಳಿಕೆ ಪಡೆದು, ದಾಖಲೆಗಳನ್ನು ಪರಿಶೀಲಿಸಿ ವಸೂಲಾತಿ ಆದೇಶ ಅಧಿಕಾರ ಹೊಂದಿರುತ್ತಾರೆ. ಅಧಿಬಾರ ಅರ್ಜಿಯ ಜೊತೆ ಆದೇಶ ಪೂರ್ವ ಜಪ್ತಿ ಮಾಡುವ ಅರ್ಜಿ ಸಲ್ಲಿಸಿದ್ದರೆ ಕ್ರಮವಿಡತಕ್ಕದ್ದು. ಅಧಿಬಾರ ಅರ್ಜಿಗೆ ವಿಳಂಬ ವಿನಾಯಿತಿ ಅನ್ವಯಿಸುವುದಿಲ್ಲ. ಅಧಿಬಾರ ಅರ್ಜಿಯನ್ನು ದಾಖಲಿಸಿದ 12 ತಿಂಗಳಲ್ಲಿ ತೀರ್ಮಾನಿಸುವುದು. ಸಕಾರಣದೊಂದಿಗೆ 6 ತಿಂಗಳು ವಿಸ್ತರಿಸಲು ನಿಬಂಧಕರಿಗೆ ಅಧಿಕಾರವಿದ್ದು, ನಂತರ 18 ತಿಂಗಳ ನಂತರ ವಿಸ್ತರಿಸುವ ಅಧಿಕಾರ ಸರ್ಕಾರಕ್ಕಿದೆ (ಕಲಂ 69 ಮತ್ತು 103).

14. ದಾವಾ ಪ್ರಕರಣ: ಒಂದು ಸಹಕಾರ ಸಂಘದ ರಚನೆ, ಆಡಳಿತ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟಂತೆ ದಾವಾ ಪ್ರಕರಣ ದಾಖಲಿಸಬಹುದು. ವಿವಾದಗಳು ಸದಸ್ಯರು ಮತ್ತು ಸಂಘ, ಸದಸ್ಯ ಮತ್ತು ಸದಸ್ಯ, ಸದಸ್ಯ ಮತ್ತು ನೌಕರರು, ನೌಕರರು ಮತ್ತು ಸಂಘ, ಸದಸ್ಯರು ಮತ್ತು ನಿರ್ದೇಶಕರು, ಸಂಘ ಮತ್ತು ಮತ್ತೊಂದು ಸಂಘದ ಮೇಲೆ ದಾವಾ ಪ್ರಕರಣ ದಾಖಲಿಸಬಹುದು. ದಾವಾ ಪ್ರಕರಣವನ್ನು ಹಣಕಾಸು, ಚುನಾವಣೆ, ಹಣದುರುಪಯೋಗ, ಸೇವಾ ನಿಯಮಗಳ ಉಲ್ಲಂಘನೆ, ಉಪನಿಯಮಗಳ ಉಲ್ಲಂಘನೆ ಮತ್ತು ಮತ್ತಿತರ ವಿಷಯಗಳ ಬಗ್ಗೆ ದಾಖಲಿಸಬಹುದು. ಇಂತಹ ಪ್ರಕರಣಗಳನ್ನು ಕಾರ್ಯವ್ಯಾಪ್ತಿಗನುಗುಣವಾಗಿ ಸಂಬಂಧಪಟ್ಟ ನಿಬಂಧಕರ ಮುಂದೆ ದಾಖಲಿಸತಕ್ಕದ್ದು ಹಾಗೂ ಪ್ರತ್ಯೇಕ KCSR ನಿಯಮ 441 ರಡಿಯಲ್ಲಿ ಸ್ಥಾಪಿತವಾಗಿರುವ ನ್ಯಾಯಾಲಯದಲ್ಲಿ ಸಹ ದಾಖಲಿಸಬಹದು. ಇಂತಹ ಪ್ರಕರಣಗಳನ್ನು 12 ತಿಂಗಳ ಕಾಲಮಿತಿಯೊಳಗೆ ತೀರ್ಮಾನಿಸುವುದು. ಸಕಾರಣದೊಂದಿಗೆ 6 ತಿಂಗಳು ವಿಸ್ತರಿಸಬಹುದು. 18 ತಿಂಗಳ ನಂತರ ಅವಧಿ ವಿಸ್ತರಿಸಲು ಸರ್ಕಾರ ಅಧಿಕಾರ ಹೊಂದಿರುತ್ತದೆ. ವಿಳಂಬ ಮನ್ನಾ ಮಾಡಲು ನಿಬಂಧಕರಿಗೆ ಅಧಿಕಾರವಿರುತ್ತದೆ. ಹಣಕಾಸು ವ್ಯವಹಾರದ ಪ್ರಕರಣಗಳನ್ನು 6 ವರ್ಷದೊಳಗಾಗಿ ದಾಖಲಿಸಬಹುದು. ಚುನಾವಣಾ ತಕರಾರು ಅರ್ಜಿಗಳನ್ನು ಫಲಿತಾಂಶ ಪ್ರಕಟಿಸಿದ 30 ದಿವಸಗಳೊಳಗಾಗಿ ದಾಖಲಿಸುವುದು. ಸೇವಾ ನಿಯಮಗಳಿಗೆ ಸಂಬಂಧಿಸಿದಂತೆ ಒಂದು ವರ್ಷದೊಳಗೆ ದಾವಾ ದಾಖಲಿಸುವುದು. ಹಣಕಾಸು ವ್ಯವಹಾರ ದಾವಾ ಪ್ರಕರಣಗಳಲ್ಲಿ ಆದೇಶ ಪೂರ್ವ ಜಪ್ತಿ ಅರ್ಜಿಸಲ್ಲಿಸಬಹುದು.(ಕಲಂ 70, 70ಎ ಮತ್ತು 103).

ದಾವಾ ಪ್ರಕರಣಗಳ ತೀರ್ಮಾನವನ್ನು ಸ್ವತಃ ನಿಬಂಧಕರೇ ತೀರ್ಮಾನಿಸಬಹುದು ಅಥವಾ ಮತ್ತೊಬ್ಬ ಇಲಾಖಾಧಿಕಾರಿಗೆ ವರ್ಗಾಯಿಸಬಹುದು ಅಥವಾ ಗೌರವಮಧ್ಯಸ್ಥಗಾರನಿಗೆ ತೀರ್ಮಾನಿಸಲು ವರ್ಗಾಯಿಸಲು ಕಾಯ್ದೆಯಲ್ಲಿ ಅವಕಾಶವಿದೆ.(ಕಲಂ 71 ಮತ್ತು ನಿಯಮ 31,32).

ಮೇಲ್ಮನವಿ ಅರ್ಜಿಸಲ್ಲಿಸಲು ಕಾಯ್ದೆಯ ಕಲಂ 10ರಡಿಯಲ್ಲಿ ಮೇಲಾಧಿಕಾರಿಗಳಿಗೆ, ಕಲಂ 105ರಡಿಯಲ್ಲಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರ ಹಾಗೂ ಕಲಂ 108ರಡಿಯಲ್ಲಿ ಸರ್ಕಾರಕ್ಕೆ ಅಧಿಕಾರವಿರುತ್ತದೆ.

15. ಸಮಾಪನೆ: ಲೆಕ್ಕತಪಾಸಣೆ, ವಿಚಾರಣೆ ಮತ್ತು ಪರಿವೀಕ್ಷಣೆ ವರದಿಗಳ ಆಧಾರದ ಮೇಲೆ ಅಥವಾ ಒಂದು ಸಂಘದ 3/4 ಅಂಶದ ಸದಸ್ಯರ ಮನವಿ ಮೇರೆಗೆ ಸಂಘವನ್ನು ಸಮಾಪನೆಗೊಳಿಸಲು ನಿಬಂಧಕರಿಗೆ ಅಧಿಕಾರವಿರುತ್ತದೆ. ನೋಂದಣಿ ಸಂಖ್ಯೆಗಿಂತ ಸದಸ್ಯರ ಸಂಖ್ಯೆ ಕಡಿಮೆಯಾದಾಗ, ನೊಂದಣಿಯಾದ 6 ತಿಂಗಳೊಳಗಾಗಿ ಕೆಲಸ ಪ್ರಾರಂಭಿಸದಿದ್ದರೆ, ಸಂಘದ ಕಾರ್ಯಸ್ಥಗಿತವಾಗಿ 6 ತಿಂಗಳು ಆಗಿದ್ದರೆ ನಿಬಂಧಕರು ಸ್ವಯಂ ಸಮಾಪನೆಗೊಳಿಸಬಹುದು. ಸಮಾಪನಾಧಿಕಾರಿ, ಸಮಾಪನಾ ನಡವಳಿಯನ್ನು ಗರಿಷ್ಠ 3 ವರ್ಷದೊಳಗಾಗಿ ಪೂರ್ಣಗೊಳಿಸಿ, ನೊಂದಣಿ ರದ್ದತಿಗೆ ಪ್ರಸ್ತಾವಣೆ ಸಲ್ಲಿಸಬಹುದು. ಸಕಾರಣದೊಂದಿಗೆ ನಿಬಂಧಕರು 1 ವರ್ಷ ವಿಸ್ತರಿಸಬಹುದು. ನಂತರ ಅವಧಿ ವಿಸ್ತರಿಸಲು ಸರ್ಕಾರಕ್ಕೆ ಅಧಿಕಾರವಿರುತ್ತದೆ. (ಕಲಂ 72, 73, 74, 75 ಮತ್ತು ನಿಯಮ 24, 24ಎ)

16. ಅವಾರ್ಡುಗಳು, ಡಿಕ್ರಿಗಳು, ಆದೇಶಗಳು ಮತ್ತು ತೀರ್ಮಾನಗಳ ಜಾರಿ: ಕಲಂ 69, 99, 71, 74, 105, 106, 107 ಮತ್ತು 108ನೇ ಪ್ರಕರಣಗಳ ಮೇರೆಗೆ ಮಾಡಿದ ಆದೇಶವನ್ನು ಜಾರಿಗೊಳಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ. ಜಾರಿಗೊಳಿಸುವ ವಿಧಿ-ವಿಧಾನಗಳನ್ನು ನಿಯಮ 34 ರಿಂದ 38 ವರೆಗೆ ಸ್ಪಷ್ಟಪಡಿಸಿದೆ.

17. ಅಪರಾಧಗಳು ಮತ್ತು ದಂಡನೆಗಳು: ಸಹಕಾರ ಕಾಯ್ದೆ, ನಿಯಮ ಮತ್ತು ಉಪನಿಯಮಗಳನ್ನು ವಿವಿಧ ಪ್ರಕರಣಗಳಲ್ಲಿ ಉಲ್ಲಂಘಿಸಿದಲ್ಲಿ, ಮುಖ್ಯವಾಗಿ, ಸಕಾಲದಲ್ಲಿ ಆದೇಶ ಮಾಡಿಸಲು ವಿಫಲವಾದಲ್ಲಿ ಮತ್ತು ಆಡಿಟ್ ವರದಿಯನ್ನ ಮಹಾಸಭೆಗೆ ಮಂಡಿಸಲು ತಪ್ಪಿದಲ್ಲಿ, ಚುನಾವಣೆಗೆ ಸಕಾಲದಲ್ಲಿ ಪೂರ್ವ ಏರ್ಪಾಡು ಮಾಡಲು ತಪ್ಪಿದಲ್ಲಿ, ಚುನಾವಣಾ ಪ್ರಾಧಿಕಾರಕ್ಕೆ ದಾಖಲಾತಿ, ಮಾಹಿತಿ ಮತ್ತು ಸಹಕಾರ ನೀಡದಿದ್ದಲ್ಲಿ, ಕಲಂ 27ಬಿ ರಡಿಯಲ್ಲಿ ವರದಿಗಳನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸದಿದ್ದಲ್ಲಿ, ಚುನಾವಣೆ ಪೂರ್ವದಲ್ಲಿ ಅಥವಾ ಚುನಾವಣೆ ತರುವಾಯದಲ್ಲಿ ಭ್ರಷ್ಟಾಚಾರ, ಅಪರಾಧ ಎಸಗಿದಲ್ಲಿ ಜೈಲು ಶಿಕ್ಷೆ ಮತ್ತು ದಂಡಕ್ಕೆ ಅವಕಾಶ ಕಲ್ಪಿಸಿದೆ.(ಕಲಂ 109)

18. ಇತರೆ: ಸರ್ಕಾರವು ಯಾವುದೇ ಒಂದು ಸಹಕಾರ ಸಂಘಕ್ಕೆ ಅಥವಾ ಒಂದು ವರ್ಗದ ಸಹಕಾರ ಸಂಘಗಳಿಗೆ ಕಾಯಿದೆಯ ಕಲಂ ಗಳಿಂದ ವಿನಾಯಿತಿ ನೀಡಲು(ಕಲಂ 121)ರಲ್ಲಿ ಅವಕಾಶ ಕಲ್ಪಿಸಿದೆ. ಇದರ ಜೊತೆಗೆ ಕಾಯಿದೆಯನ್ನು ಜಾರಿ ಮಾಡುವಾಗ ನಿಯಮಗಳನ್ನು ರೂಪಿಸಲು ರಾಜ್ಯ ಸರ್ಕಾರಕ್ಕೆ ಕಲಂ 129ರಡಿಯಲ್ಲಿ ಅಧಿಕಾರ ಹೊಂದಿರುತ್ತದೆ. ಸಹಕಾರ ಸಂಘದ ಪದಾಧಿಕಾರಿಗಳು ಮತ್ತು ನೌಕರರು ಸಂಘದ ಕೆಲಸ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಅವರನ್ನ ಸಾರ್ವಜನಿಕ ಸೇವಕರೆಂದು ಕಲಂ 127ಎ ನಲ್ಲಿ ಪರಿಗಣಿಸಿದೆ. ಸಹಕಾರ ಸಂಘಗಳಿಗೆ ಮಾದರಿ ಉಪನಿಯಮಗಳನ್ನು ರಚಿಸಿ ಜಾರಿ ಮಾಡಲು ಕಲಂ 129ಎ ನಲ್ಲಿ ನಿಬಂಧಕರಿಗೆ ಅಧಿಕಾರ ನೀಡಲಾಗಿದೆ.

▸▸ ರಂಗಸ್ವಾಮಿ ಮೂಕನಹಳ್ಳಿ

ಭಾರತದ ಆರ್ಥಿಕತೆ ವೇಗವಾಗಿ ಮುಂದುವರಿಯುತ್ತಿದೆ. ಜಗತ್ತಿನ ಇತರ ಎಲ್ಲಾ ದೇಶಗಳಿಗಿಂತ ನಮ್ಮ ಜಿಡಿಪಿ ಹೆಚ್ಚಾಗುತ್ತಿದೆ. ಗ್ರೋಥ್ ರೇಟ್ ಏರುಗತಿಯಲ್ಲಿದೆ, ಎನ್ನುವ ಮಾತುಗಳನ್ನು ನಾವು ಕೇಳುತ್ತಲೆ ಇದ್ದೇವೆ. ಇದರ ನಡುವೆ ಅಮೆರಿಕನ್ ಡಾಲರ್ ಎದುರು ಭಾರತದ ರೂಪಾಯಿ ಕುಸಿತ ಕಾಣುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ರೂಪಾಯಿ ಈ ಪ್ರಮಾಣದ ಅಪಮೌಲ್ಯವಾಗಿರುವುದು ಇದೆ ಮೊದಲು ಎನ್ನುವ ಮಾತುಗಳು ಕೂಡ ಕೇಳಿಬರುತ್ತಿದೆ. ಈ ಲೇಖನ ಬರೆಯುವಾಗ ಒಂದು ಡಾಲರ್ 83 ರೂಪಾಯಿಗೂ ಮೀರಿದೆ. ಭಾರತದ ಆರ್ಥಿಕತೆ, ಆಂತರಿಕ ಖರೀದಿ ಶಕ್ತಿ ತಕ್ಷಣದ ಮಟ್ಟಿಗೆ ಕುಸಿತ ಕಾಣದಿದ್ದರೂ ಡಾಲರ್ ಎದುರು ರೂಪಾಯಿ ಈ ರೀತಿ ಮೌಲ್ಯವೇಕೆ ಕಳೆದುಕೊಳ್ಳುತ್ತದೆ ಎನ್ನುವುದು ಎಲ್ಲರಿಗೂ ಇರುವ ಸಹಜ ಕುತೂಹಲ. ಇಂದಿನ ಲೇಖನದಲ್ಲಿ ಅದಕ್ಕೆ ಒಂದಷ್ಟು ಕಾರಣ, ಉತ್ತರ ಹುಡಕುವ ಪ್ರಯತ್ನವನ್ನು ಮಾಡೋಣ.

ಪ್ರಮುಖ ಕಾರಣಗಳು :

1. ಅಮೆರಿಕನ್ ಡಾಲರ್ ಜಾಗತಿಕ ಹಣವಾಗಿದೆ : ನಾವು ಡಾಲರ್ ಅನ್ನು ವರ್ಲ್ಡ್ ಕರೆನ್ಸಿ, ಜಾಗತಿಕ ಹಣ ಎಂದು ಒಪ್ಪಿಕೊಂಡಿದ್ದೇವೆ. ಜಗತ್ತಿನಲ್ಲಿ ನಡೆಯುವ ವ್ಯಾಪಾರ, ವಹಿವಾಟಿನ 70 ಪ್ರತಿಶತಕ್ಕೂ ಹೆಚ್ಚು ಸೆಟಲ್ಮೆಂಟ್ ಆಗುವುದು ಡಾಲರ್‌ನಲ್ಲಿ. ಅಂದರೆ ಅಮೇರಿಕಾ ದೇಶದ ಜೊತೆಗೆ ನೇರವಾಗಿ ವ್ಯಾಪಾರ ಮಾಡದೆ ಇದ್ದ ದೇಶಗಳು ಕೂಡ ತಮ್ಮ ನಡುವಿನ ಟ್ರೇಡ್ ಸೆಟ್ಟಲ್ ಮಾಡಿಕೊಳ್ಳುವುದು ಡಾಲರ್‌ನಲ್ಲಿ. ಹೀಗಾಗಿ ಜಗತ್ತಿನ ಎಲ್ಲಾ ದೇಶಗಳೂ ಡಾಲರ್ ಅನ್ನು ರಿಸರ್ವ ಕರೆನ್ಸಿಯನ್ನಾಗಿ ಇಟ್ಟು ಕೊಳ್ಳುತ್ತೇವೆ. ಇಟ್ಟು ಕೊಳ್ಳಬೇಕು ಅದು ಅಲಿಖಿತ ನಿಯಮ. ಅದೆಷ್ಟೇ ದೊಡ್ಡ ಪಶುವಾಗಿದ್ದರೂ ಮೂಗುದಾರ ಹಿಡಿದು ಎಳೆದರೆ ಅದು ನಿಯಂತ್ರಣಕ್ಕೆ ಬಂದೆ ಬರುತ್ತದೆ. ಡಾಲರ್ ಜಾಗತಿಕ ಮಟ್ಟದಲ್ಲಿ ಮೂಗುದಾರದಂತೆ ಕೆಲಸ ಮಾಡುತ್ತದೆ. ತಮ್ಮ ಹಣವನ್ನು ಏರಿಕೆ ಅಥವಾ ಇಳಿಕೆ ಮಾಡುವ ಮೂಲಕ ಜಗತ್ತಿನ ಇತರ ದೇಶಗಳ ಆರ್ಥಿಕತೆಯನ್ನು ನಿಯಂತ್ರಿಸುವ ಮಟ್ಟದಲ್ಲಿದೆ.

2. ಹೆಚ್ಚಾಗುವ ಡಾಲರ್ ಮೇಲಿನ ಡಿಮ್ಯಾಂಡ್ : ಜಾಗತಿಕವಾಗಿ ಕಚ್ಚಾ ತೈಲ, ಮತ್ತು ಚಿನ್ನ ಅತ್ಯಂತ ಹೆಚ್ಚು ಬೇರೆ ದೇಶಗಳು ತರಿಸಿಕೊಳ್ಳುವ ವಸ್ತುಗಳು. ಇವುಗಳ ಬೆಲೆ ಡಾಲರ್ರ್‌ನಲ್ಲಿ ನಿಗದಿಯಾಗಿರುತ್ತದೆ. ಹೀಗಾಗಿ ಇವುಗಳಲ್ಲಿ ಆಗುವ ಬೆಲೆಯೇರಿಕೆ, ವಿನಿಮಯ ದರ ವ್ಯತ್ಯಾಸ ಹೆಚ್ಚು ಡಾಲರ್ ನೀಡುವಂತೆ ಮಾಡುತ್ತದೆ. ಉದಾಹರಣೆಗೆ ನಾವು 100 ಡಾಲರ್ ಕಚ್ಚಾ ತೈಲವನ್ನು ತರಿಸಿಕೊಂಡಿರುತ್ತೇವೆ ಎಂದುಕೊಳ್ಳಿ. ತರಿಸಿಕೊಳ್ಳುವ ಸಮಯದಲ್ಲಿ ಡಾಲರ್ ಬೆಲೆ 70 ರೂಪಾಯಿ ಇದ್ದು,

ಅವರಿಗೆ ಹಣ ನೀಡುವ ಸಮಯದಲ್ಲಿ ಡಾಲರ್ ಬೆಲೆ 83 ಆಗಿದ್ದರೆ ಆಗ ನಾವು ಪ್ರತಿ ಡಾಲರ್‌ಗೆ 13 ರೂಪಾಯಿ ಹೆಚ್ಚು ನೀಡಬೇಕಾಗುತ್ತದೆ. ಕೊಡಬೇಕಾಗಿರುವ ಡಾಲರ್ 100 ಅದರಲ್ಲಿ ಬದಲಾವಣೆ ಇಲ್ಲ. ಆದರೆ ಗಮನಿಸಿ ಕೊಂಡಾಗ 100x70= 7000 ರೂಪಾಯಿ ಮೊತ್ತದ ತೈಲವನ್ನು ತರಿಸಿಕೊಂಡೆವು. ಅವರಿಗೆ ಈ ಹಣವನ್ನು ನೀಡುವಾಗ ಡಾಲರ್ ಬೆಲೆ 83, ಅಂದರೆ 100x83=8300. ಪ್ರತಿ ನೂರು ಡಾಲರ್‌ಗೆ 1300 ರೂಪಾಯಿ ಹೆಚ್ಚಿಗೆ ನೀಡಿದಂತಾಯ್ತು. ಗಮನಿಸಿ ನೋಡಿ, ಇಲ್ಲಿ ಅಮೇರಿಕಾದ ಆರ್ಥಿಕತೆ ಚೆನ್ನಾಗಿದೆಯೋ, ಇಲ್ಲವೋ ಅದರ ಪ್ರಶ್ನೆ ಬರುವುದಿಲ್ಲ. ಹೆಚ್ಚಾದ ತೈಲ ಬೆಲೆ, ಬದಲಾದ ವಿದೇಶಿ ವಿನಿಮಯ ಮಾತ್ರ ಲೆಕ್ಕಕ್ಕೆ ಬರುತ್ತದೆ.

3. ಹೆಚ್ಚುತ್ತಿರುವ ಫೆಡರಲ್ ಇಂಟರೆಸ್ಟ್ ರೇಟ್ : ಅಮೇರಿಕಾ ದೇಶದಲ್ಲಿ ಹೆಚ್ಚಿರುವ ಹಣದುಬ್ಬರದ ಸಲುವಾಗಿ ಬಡ್ಡಿ ದರವನ್ನು ಒಂದೇ ಸಮನೆ ಏರಿಸಿಕೊಂಡು ಬರುತ್ತಿದ್ದಾರೆ. 2023ರ ಸೆಪ್ಟೆಂಬರ್ 20, 21ರಲ್ಲಿ ನಡೆಯಲಿರುವ ಸಭೆಯಲ್ಲಿ ಬಡ್ಡಿದರವನ್ನು 5.25 ಅಥವಾ 5.5 ರ ಆಸುಪಾಸಿನಲ್ಲಿ ಇಟ್ಟುಕೊಳ್ಳುವ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ. ಕಳೆದ 22 ವರ್ಷದಲ್ಲಿ ಇಷ್ಟು ದೊಡ್ಡ ಮಟ್ಟದ ಬಡ್ಡಿಯನ್ನು ಅಮೇರಿಕನ್ನರು ಕಂಡಿರಲಿಲ್ಲ. ಹಣದುಬ್ಬರ ನಿಯಂತ್ರಿಸಲು ಬಡ್ಡಿ ದರ ಏರಿಕೆ ಅಲ್ಲಿ ಅನಿವಾರ್ಯ. ಹೀಗೆ ಅಲ್ಲಿ ಬಡ್ಡಿ ದರ ಏರಿಸಿದರೆ, ಭಾರತದಲ್ಲಿ ಹೂಡಿಕೆ ಮಾಡಿದ್ದವರು ಹಣವನ್ನು ತೆಗೆದು ಡಾಲರ್‌ನಲ್ಲಿ ಹೂಡಿಕೆ ಮಾಡುತ್ತಾರೆ. ಏಕೆಂದರೆ ರೂಪಾಯಿಯಲ್ಲಿ ಗಳಿಸಿದ ಲಾಭ ಅಪಮೌಲ್ಯದಲ್ಲಿ ಕರಗಿ ಹೋಗುವ ಸಾಧ್ಯತೆಯಿರುತ್ತದೆ. ಹೀಗಾಗಿ ಅಮೇರಿಕಾದಲ್ಲಿ ಹೆಚ್ಚಿನ ಬಡ್ಡಿ ಸಿಕ್ಕರೆ ಹೂಡಿಕೆದಾರರ ಮೊದಲ ಆದ್ಯತೆ ಡಾಲರ್. ಹೀಗಾಗಿ ಭಾರತದಲ್ಲಿನ ಹೂಡಿಕೆದಾರರ ಗಮನ ಡಾಲರ್ ಕಡೆಗೆ ಹೊರಳಿದೆ.

4. ಕ್ಯಾಪಿಟಲ್ ಔಟ್ ಫ್ಲೋ : ಫಾರಿನ್ ಇನ್ಸ್ಟಿಟ್ಯೂಷನಲ್ ಇನ್ವೆಸ್ಟರ್ಸ್ ಸಂಸ್ಥೆಗಳು ಲಾಭವನ್ನು ಬುಕ್ ಮಾಡಿ ಹಣವನ್ನು ಡಾಲರ್ ಮೂಲಕ ವರ್ಗಾವಣೆ ಮಾಡಲು ಹೊರಟಾಗ ಕೂಡ ರೂಪಾಯಿ ಅಪಮೌಲ್ಯವಾಗುತ್ತದೆ. ಗಮನಿಸಿ ಭಾರತದ ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡಿರುವ ವಿದೇಶಿ ಸಂಸ್ಥೆಗಳು ಹೆಚ್ಚಿನ ಲಾಭವನ್ನು ನೋಡಿದಾಗ ತಮ್ಮ ಷೇರನ್ನು ಮಾರುವುದರ ಮೂಲಕ ಹಣವನ್ನು ಪಡೆದುಕೊಂಡು ಮರಳಿ ತಮ್ಮ ಮೂಲ ದೇಶಕ್ಕೆ ಕಳಿಸಲು ಯತ್ನಿಸುತ್ತಾರೆ. ಇದು ಸಹಜ. ಇದು ಭಾರತದ ಮಟ್ಟಿಗೆ ಬಂಡವಾಳ ಹಿಂತೆಗೆತ ಎನ್ನುವಂತಾಗುತ್ತದೆ. ಹೀಗೆ ಭಾರತದಿಂದ ಹೊರಕ್ಕೆ ಹೋಗುವ ಹಣವನ್ನು ಕ್ಯಾಪಿಟಲ್ ಔಟ್ ಫ್ಲೋ ಎನ್ನಲಾಗುತ್ತದೆ. ಸಹಜವಾಗೇ ಇದು ಸಾಮಾನ್ಯ ಸಮಯಕ್ಕಿಂತ ಹೆಚ್ಚಿನ ಡಾಲರ್ ಮೇಲಿನ ಡಿಮ್ಯಾಂಡ್ ಸೃಷ್ಟಿಸುತ್ತದೆ. ಇದು ರೂಪಾಯಿ ಕುಸಿತಕ್ಕೆ ನಾಂದಿ ಹಾಡುತ್ತದೆ.

5. ಕುಸಿತ ಕಾಣುವ ಫಾರಿನ್ ಎಕ್ಸ್ಚೇಂಜ್ ರಿಸರ್ವ್ : ಭಾರತದ ವಿದೇಶಿ ವಿನಿಮಯ ಸಂಗ್ರಹ 2022ಕ್ಕೆ ಹೋಲಿಸಿದರೆ 45 ಬಿಲಿಯನ್ ಅಮೇರಿಕನ್ ಡಾಲರ್ ಕುಸಿತ ಕಂಡಿದೆ. 2022 ರಲ್ಲಿ 607 ಬಿಲಿಯನ್ ಡಾಲರ್ ಇದ್ದದ್ದು 2023ರ ಸೆಪ್ಟೆಂಬರ್‌ನಲ್ಲಿ 562 ಬಿಲಿಯನ್ ಡಾಲರ್ ಆಗಿದೆ. ವಿದೇಶಿ ವಿನಿಮಯ ಸಂಗ್ರಹ ಹೆಚ್ಚಿದಷ್ಟು ನಾವು ಜಾಗತಿಕ ಮಟ್ಟದಲ್ಲಿ ಚೌಕಾಸಿ ಮಾಡುವ ಕ್ಷಮತೆಯನ್ನು ಗಳಿಸಿಕೊಳ್ಳುತ್ತೇವೆ. ಎಕಾನಾಮಿಯಲ್ಲಿ ಡಾಲರ್ ಬೇಡಿಕೆ ಹೆಚ್ಚಾದಾಗ, ರೂಪಾಯಿ ಮೌಲ್ಯ ಕುಸಿಯುತ್ತದೆ. ಹೆಚ್ಚಿನ ಕುಸಿತವನ್ನು ತಪ್ಪಿಸಲು ಆರ್‌ಬಿಐ ತನ್ನ ವಿದೇಶಿ ಹಣದ ಸಂಗ್ರಹದಲ್ಲಿನ ಹಣವನ್ನು ತೆಗೆದು ಡಿಮ್ಯಾಂಡ್ ಪೂರೈಸುತ್ತದೆ, ತನ್ಮೂಲಕ ಹೆಚ್ಚಿನ ಕುಸಿತವನ್ನು ತಡೆಯುತ್ತದೆ.

6. ಕುಸಿಯುತ್ತಿರುವ ಚೀನಾದ ಯುಆನ್ : ಚೀನಾ ದೇಶದ ಹಣ ಅಮೇರಿಕನ್ ಡಾಲರ್ ಎದುರು ಕುಸಿತವನ್ನು ಕಂಡಿದೆ. ಈ ರೀತಿಯ ಕುಸಿತವಾದಾಗ ಚೀನಾದ ಪದಾರ್ಥಗಳು ಜಾಗತಿಕ ಮಾರುಕಟ್ಟೆಯಲ್ಲಿ ಇನ್ನಷ್ಟು ಚೀಪ್ ಆಗುತ್ತದೆ. ಇನ್ನಷ್ಟು ಕಡಿಮೆ ಬೆಲೆಗೆ ಸಿಗುತ್ತದೆ ಎನ್ನುವ ಕಾರಣಕ್ಕೆ ಆ ಪದಾರ್ಥಗಳ ಬೇಡಿಕೆ ಹೆಚ್ಚುತ್ತದೆ. ಆಗ ಭಾರತವೂ ಸೇರಿ ಇತರ ದೇಶಗಳ ಪದಾರ್ಥಗಳು ಹೆಚ್ಚಿನ ಬೆಲೆಯುಳ್ಳವು ಎನ್ನಿಸುತ್ತದೆ. ಹೀಗಾಗಿ ಇವುಗಳ ಮೇಲಿನ ಬೇಡಿಕೆ ಕುಸಿಯುತ್ತದೆ. ಇಂತಹ ಅಪಾಯದಿಂದ ತಪ್ಪಿಸಿಕೊಳ್ಳಲು ಕೂಡ ಕೆಲವೊಮ್ಮೆ ಭಾರತ ತನ್ನ ರೂಪಾಯಿಯನ್ನು ಅಪಮೌಲ್ಯ ಮಾಡಿಕೊಳ್ಳುತ್ತದೆ. ಇದನ್ನು ಕರೆಕ್ಷನ್ ಎನ್ನಲಾಗುತ್ತದೆ.

7. ಸೌದಿ, ರಷ್ಯಾ ಸೇರಿದಂತೆ ಒಪೆಕ್ ರಾಷ್ಟ್ರಗಳು ಕಡಿಮೆ ತೈಲವನ್ನು ಉತ್ಪಾದಿಸಲು ನಿರ್ಧರಿಸಿವೆ : ಜಾಗತಿಕ ಮಟ್ಟದಲ್ಲಿ ತೈಲ ಬೆಲೆಯನ್ನು ಬೀಳದಂತೆ ತಡೆಯಲು ಒಪೆಕ್ ರಾಷ್ಟಗಳು ತಮ್ಮ ಉತ್ಪತ್ತಿಯನ್ನು ಕಡಿಮೆ ಅಥವಾ ಜಾಸ್ತಿ ಮಾಡುವ ಮೂಲಕ ನಿಯಂತ್ರಿಸುತ್ತವೆ. ಸದ್ಯದ ಪರಿಸ್ಥಿತಿಯಲ್ಲಿ ಸಾಮಾನ್ಯಕ್ಕಿಂತ ಕಡಿಮೆ ತೈಲವನ್ನು ಉತ್ಪಾದಿಸಲು ಈ ದೇಶಗಳು ನಿರ್ಧರಿಸಿವೆ. ಸಹಜವಾಗೇ ಡಿಮ್ಯಾಂಡ್ ಹೆಚ್ಚಾಗಿದ್ದು, ಪೂರೈಕೆ ಕಡಿಮೆ ಯಾಗುತ್ತದೆ. ಇದು ತೈಲ ಬೆಲೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ತೈಲ ಬೆಲೆ ಹೆಚ್ಚಾದರೆ ಇತರ ಎಲ್ಲಾ ವಸ್ತುಗಳ ಬೆಲೆ ಹೆಚ್ಚಾಗುತ್ತದೆ. ಇದು ಹಣದುಬ್ಬರಕ್ಕೆ ದಾರಿಯಾಗುತ್ತದೆ. ವಸ್ತುವಿನ ಬೆಲೆ ಹೆಚ್ಚಾದಷ್ಟೂ ಹಣದ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಇದು ರೂಪಾಯಿ ಅಪಮೌಲ್ಯಕ್ಕೆ ಕಾರಣವಾಗುತ್ತದೆ.

ಕೊನೆಮಾತು : ಆಗಸ್ಟ್ ತಿಂಗಳಲ್ಲಿ ಎಫ್‌ಐಐಗಳು ಹತ್ತಿರತ್ತಿರ 11 ಸಾವಿರ ಕೋಟಿಗೂ ಮೀರಿದ ಷೇರುಗಳನ್ನು ನಗದು ಮಾರುಕಟ್ಟೆಯಲ್ಲಿ ಮಾರಿದ್ದಾರೆ. ಇದು ಕ್ಯಾಶ್ ಔಟ್ ಫ್ಲೋ, ಕ್ಯಾಪಿಟಲ್ ಔಟ್ ಫ್ಲೋ ಗೆ ದಾರಿ ಮಾಡಿಕೊಟ್ಟಿದೆ. ಇದರ ಜೊತೆಗೆ ಹೆಚ್ಚುತ್ತಿರುವ ತೈಲಬೆಲೆ, ಕುಸಿಯುತ್ತಿರುವ ಚೀನಾದ ಕರೆನ್ಸಿ ಮೌಲ್ಯ, ಭಾರತದಲ್ಲಿ ಹೆಚ್ಚುತ್ತಿರುವ ಹಣದುಬ್ಬರ ಎಲ್ಲವು ಸೇರಿಕೊಂಡು ಡಾಲರ್ ಎದುರು ರೂಪಾಯಿ ಕುಸಿತಕ್ಕೆ ಕಾರಣವಾಗಿವೆ. ರೂಪಾಯಿ ಕುಸಿತವಾದ ತಕ್ಷಣ ಅಮೇರಿಕಾ ಆರ್ಥಿಕತೆ ಬಲಿಷ್ಟವಾಗಿದೆ ಎಂದಲ್ಲ, ಭಾರತದ ಆರ್ಥಿಕತೆ ಶಕ್ತಿ ಕಳೆದುಕೊಂಡಿದೆ ಎಂದಲ್ಲ. ಇವೆಲ್ಲವೂ ಜಾಗತಿಕ ಮಟ್ಟದಲ್ಲಿ ಬದಲಾಗುತ್ತಿರುವ ಅಂಶಗಳು. ದೀರ್ಘಕಾಲದಲ್ಲಿ ಕುಸಿತ ಮುಂದುವರಿದರೆ ಮಾತ್ರ ಅದು ಅಪಾಯ. ಉಳಿದಂತೆ ಇತ್ತೀಚೆಗೆ ಕಾಣುತ್ತಿರುವ ಏರಿಳಿತಗಳು ಜಾಗತಿಕ ವಿತ್ತ ಜಗತ್ತಿನಲ್ಲಿ ಸಾಮಾನ್ಯ. ಅದನ್ನು ಏಕಮುಖವಾಗಿ ವಿಶ್ಲೇಷಿಸುವುದು ತಪ್ಪಾಗುತ್ತದೆ.

ರಜತ ಮಹೋತ್ಸವ ಸಂಭ್ರಮ ಆಚರಿಸಿಕೊಳ್ಳುತ್ತಿರುವ ಎಸ್.ಪಿ.ಎಸ್. ಬ್ಯಾಂಕು

1998 ರಲ್ಲಿ ಕೇವಲ 1100 ಸದಸ್ಯರ ರೂ. 10 ಲಕ್ಷಗಳ ಶೇರು ಬಂಡವಾಳ ಬಲದೊಂದಿಗೆ ತನ್ನ ವ್ಯವಹಾರವನ್ನು ಆರಂಭಿಸಿದ ಈ ಬ್ಯಾಂಕು ತನ್ನ ಸುಸ್ಥಿರ ಅಭಿವೃದ್ಧಿಯ ಜೊತೆಗೆ ನಾಡಿನ ಸಹಕಾರಿಯಲ್ಲಿ ತನ್ನದೇ ಆದ ಅಳಿಲು ಸೇವೆ ಸಲ್ಲಿಸುತ್ತ ದುರ್ಬಲ ವರ್ಗದವರಿಗೆ, ವರ್ತಕರಿಗೆ ಹಾಗೂ ಸಾಮನ್ಯ ಜನತೆಗೆ ಆರ್ಥಿಕವಾಗಿ ಸ್ವಾವಲಂಬಿ ಬದುಕು ಸಾಗಿಸಲು ನೆರವಾಗುತ್ತಲಿದೆ. ಬ್ಯಾಂಕಿನ ದಿನನಿತ್ಯದ ಗ್ರಾಹಕರ ಸೇವೆಯ ಜೊತೆಗೆ ಸಂಡೂರಿನಲ್ಲಿ ಹೆಸರಾಂತ ಕಲಾವಿದರಿಂದ ಸಂಗೀತ ಸಂಜೆ ಹಾಗೂ ನಗೆಸಂಜೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳ ಜೂತೆಗೆ ವೈದ್ಯಕೀಯ ತಪಾಸಣ ಶಿಬಿರಗಳನ್ನು ಸಂಡೂರಿನ ವೆಸ್ಕೂ ಕಂಪನಿಯ ಸಂಯೋಗದೊಂದಿಗೆ ನಡೆಸುತ್ತಲಿದೆ. ಸಂಡೂರಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರಗಳನ್ನು ನೀಡವುದರ ಜೊತೆಗೆ ಸರ್ಕಾರಿ ಕಾಲೇಜುಗಳ ಗ್ರಂಥಾಲಯಗಳಿಗೆ ಸಲಕರಣೆಗಳನ್ನು ನೀಡಿದ್ದಾರೆ.

ಕಾರ್ತಿಕೇಯ ತಪೋಭೂಮಿ ಸಂಡೂರು ಹಲವು ಸಂಗತಿಗಳಿಂದ ಇತಿಹಾಸ ಪ್ರಸಿದ್ದ ಸ್ಥಳ. ಪ್ರಾಚೀನ ಕೃತಿಯಾದ ವಡ್ಡಾರಾಧನೆಯಿಂದ ಆಧುನಿಕ ಲೇಖಕರ ಕಾವ್ಯವಸ್ತುವಾಗಿರುವ ಈ ಸ್ಥಳ ಸಂಸ್ಥಾನಿಕರ ಆಡಳಿತದಿಂದ, ಗಾಂಧೀಜಿಯವರ ಆಗಮನದಿಂದ ಹಾಗೂ ಸಂಡೂರು ಭೂ ಹೋರಾಟದಿಂದ ತನ್ನ ವಿಶಿಷ್ಟತೆಯನ್ನು ಮೆರೆದಿದೆ. ಇಂತಹ ವಿಶಿಷ್ಟತೆಯ ಭಾಗವೆಂಬಂತೆ ಸಂಡೂರಿನಲ್ಲಿ ಹಲವು ಸಂಸ್ಥೆಗಳು ತಮ್ಮ ಪಾಲಿನ ಕರ್ತವ್ಯಗಳನ್ನು ಪೂರೈಸಿವೆ. ಇವುಗಳಲ್ಲಿ 08–12–1998ರಲ್ಲಿ ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕು ಶ್ರೀ ಕೆ.ಎಸ್. ನಾಗರಾಜರವರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡ ಬ್ಯಾಂಕು ದಿನಾಂಕ 08 ಮತ್ತು 09ನೇ ಡಿಸೆಂಬರ್, 2023 ರಂದು ರಜತ ಮಹೋತ್ಸವದ ಸಮಾರಂಭರವನ್ನು ಆಚರಿಸಿಕೊಳ್ಳುತ್ತಲಿದೆ. ಈ ಸಮಾರಂಭವನ್ನು ಶ್ರೀ ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮಿಗಳು ಉದ್ಘಾಟಿಸಲಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಸ್ಮಯೋರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಯುತ ಬಹಿರ್ಜಿ ಅಜಯ್ ಘೋರ್ಪಡೆಯವರು ಬ್ಯಾಂಕಿನ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಿದ್ದಾರೆ.

ಸ್ಥಳೀಯರಿಂದ ಸ್ಥಳೀಯರಿಗಾಗಿ ಸ್ಥಾಪಿಸಲ್ಪಟ್ಟು, ಜನಸಾಮಾನ್ಯರಿಗೆ ಸುಲಭವಾಗಿ ಅವರ ಅವಶ್ಯಕತೆಗಳಿಗನುಗುಣವಾಗಿ ಹಣಕಾಸು ಸೇವೆಯನ್ನು ನೀಡುವ ಹಾಗೂ ಕೇವಲ ಲಾಭದ ಉದ್ದೇಶವನ್ನಿಟ್ಟುಕೊಳ್ಳದೆ ಗ್ರಾಹಕರಿಗೆ ತೃಪ್ತಿದಾಯಕವಾಗಿ ಕಡಿಮೆ ವೆಚ್ಚದ ಸೇವೆ ನೀಡುವ ಉದ್ದೇಶದಿಂದ ಹಾಗೂ ಸಂಡೂರಿನ ಜನರ ಆರ್ಥಿಕ ಮತ್ತು ಹಣಕಾಸಿನ ಕಾರ್ಯಚಟುವಟಿಕೆಗಳನ್ನು ಕಲ್ಪಿಸುವ ಘನ ಉದ್ದೇಶದಿಂದ ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕನ್ನು ಸ್ಥಾಪಿಸಲಾಯಿತು. ಈ ನಿಟ್ಟಿನಲ್ಲಿ ಸಮಾಜಿಕ ಬದ್ದತೆಯಿಂದ ಕಾರ್ಯನಿರ್ವಹಿಸುತ್ತಾ 25 ವರುಷಗಳನ್ನು ಪೊರೈಸಿದೆ.

1998 ರಲ್ಲಿ ಕೇವಲ 1100 ಸದಸ್ಯರ ರೂ. 10 ಲಕ್ಷಗಳ ಶೇರು ಬಂಡವಾಳ ಬಲದೊಂದಿಗೆ ತನ್ನ ವ್ಯವಹಾರವನ್ನು ಆರಂಭಿಸಿದ ಈ ಬ್ಯಾಂಕು ತನ್ನ ಸುಸ್ಥಿರ ಅಭಿವೃದ್ಧಿಯ ಜೊತೆಗೆ ನಾಡಿನ ಸಹಕಾರಿಯಲ್ಲಿ ತನ್ನದೇ ಆದ ಅಳಿಲು ಸೇವೆ ಸಲ್ಲಿಸುತ್ತ ದುರ್ಬಲ ವರ್ಗದವರಿಗೆ, ವರ್ತಕರಿಗೆ ಹಾಗೂ ಸಾಮನ್ಯ ಜನತೆಗೆ ಆರ್ಥಿಕವಾಗಿ ಸ್ವಾವಲಂಬಿ ಬದುಕು ಸಾಗಿಸಲು ನೆರವಾಗುತ್ತಲಿದೆ. ಬ್ಯಾಂಕಿನ ದಿನನಿತ್ಯದ ಗ್ರಾಹಕರ ಸೇವೆಯ ಜೊತೆಗೆ ಸಂಡೂರಿನಲ್ಲಿ ಹೆಸರಾಂತ ಕಲಾವಿದರಿಂದ ಸಂಗೀತ ಸಂಜೆ ಹಾಗೂ ನಗೆಸಂಜೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳ ಜೂತೆಗೆ ವೈದ್ಯಕೀಯ ತಪಾಸಣ ಶಿಬಿರಗಳನ್ನು ಸಂಡೂರಿನ ವೆಸ್ಕೂ ಕಂಪನಿಯ ಸಂಯೋಗದೊಂದಿಗೆ ನಡೆಸುತ್ತಲಿದೆ. ಸಂಡೂರಿನ ಪ್ರತಿಭಾನ್ವಿತ

ಶ್ರೀ ಕೆ.ಎಸ್. ನಾಗರಾಜ
ಸಂಸ್ಥಾಪಕ ಅಧ್ಯಕ್ಷರು

ವಿದ್ಯಾರ್ಥಿಗಳಿಗೆ ಪುರಸ್ಕಾರಗಳನ್ನು ನೀಡವುದರ ಜೊತೆಗೆ ಸರ್ಕಾರಿ ಕಾಲೇಜುಗಳ ಗ್ರಂಥಾಲಯಗಳಿಗೆ ಸಲಕರಣೆಗಳನ್ನು ನೀಡಿದ್ದಾರೆ. ಕೋವಿಡ್ ಸಮಯದಲ್ಲಿ 2500 ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ಸಂಡೂರಿನಲ್ಲಿ ವಿತರಿಸಿರುತ್ತಾರೆ.

ಬ್ಯಾಂಕಿನ ಈ ಕಾರ್ಯವಿಧಾನವು ತುಂಬಾ ಅನುಕರಣೀಯ ಹಾಗೂ ಪ್ರಶಂಸನೀಯವಾದುದು. ಸಹಕಾರಿ ಭಾವನೆಯ ಸದಸ್ಯರ ಉಳಿತಾಯ ಸಂಗ್ರಹಿಸುವುದು, ಅದೇ ಹಣದಿಂದ ಆರ್ಥಿಕ ಮುಗ್ಗಟ್ಟು ಹೊಂದಿರುವ ಜನರ ಉನ್ನತಿಗಾಗಿ ಸರಿಯಾದ ರೀತಿಯಲ್ಲಿ ವಿನಿಯೋಗಿಸುವುದನ್ನು ಅರಿತಿರುವ ಬ್ಯಾಂಕು ಪ್ರಾರಂಭದಿಂದಲೂ ಬದ್ಧತೆ, ದಕ್ಷತೆ, ಪ್ರಾಮಾಣಿಕತೆ, ಶ್ರದ್ಧೆ ಮತ್ತು ನಿಸ್ವಾರ್ಥ ಮನೋಭಾವದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗವನ್ನು ಹೊಂದಿದೆ. ಜನಸಾಮಾನ್ಯರು ಬ್ಯಾಂಕಿನ ಮೇಲೆ ಹೊಂದಿರುವ ಹೆಚ್ಚಿನ ನಂಬಿಕೆ ವಿಶ್ವಾಸಗಳಿಂದಾಗಿ ಠೇವಣಿಯ ಸಂಖ್ಯೆ ಬೆಳೆಯುತ್ತ ಹೋಗಿದೆ. ಬ್ಯಾಂಕಿನಲ್ಲಿ ಎಲ್ಲ ತರಹದ ಠೇವಣಿಗಳಿದ್ದು ಅವುಗಳಿಗೆ ತಕ್ಕ ಆಕರ್ಷಕ ಬಡ್ಡಿಯನ್ನು ಗೊತ್ತುಪಡಿಸಲಾಗಿದೆ. ಬ್ಯಾಂಕಿನ ಸರ್ವಾಂಗೀಣ ಪ್ರಗತಿಗೆ ಕಾರಣರಾದ ಎಲ್ಲಾ ಸದಸ್ಯರಿಗೆ ಮತ್ತು ಬ್ಯಾಂಕಿನ ಮೇಲೆ ವಿಶ್ವಾಸವಿಟ್ಟು ತಮ್ಮ ಠೇವಣಿಗಳನ್ನು ತೊಡಗಿಸಿದ ಎಲ್ಲಾ ಠೇವಣಿದಾರರಿಗೆ ಹಾಗೂ ಗ್ರಾಹಕರಿಗೆ ಹೃದಯ ಪೂರ್ವಕ ಕೃತಜ್ಞತೆಗಳು ಸಲ್ಲಿಸುತ್ತಾ ಬ್ಯಾಂಕು ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಲಿ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಸ್. ನಾಗರಾಜರವರು ಈ ರಜತ ಮಹೋತ್ಸವದ ಸಂಭ್ರಮದ ಸಂದರ್ಭದಲ್ಲಿ ಆಶಿಸಿರುತ್ತಾರೆ.

25 ವರ್ಷಗಳ ಬ್ಯಾಂಕಿನ ಆರ್ಥಿಕ ಪ್ರಗತಿಯ ನೋಟ (ರೂ. ಲಕ್ಷಗಳಲ್ಲಿ)

ಕ್ರ.ಸಂ.	ವಿವರ	1998–99	2002–03	2007–08	2012–13	2017–18	2022–23
1.	ಷೇರು ಬಂಡವಾಳ	10.43	29.66	47.56	72.37	81.00	110.61
2.	ಕಾಯ್ದಿಟ್ಟ ಮತ್ತು ಇತರ ನಿಧಿಗಳು	0	8.67	113.85	320.34	748.32	1377.01
3.	ಠೇವಣಿಗಳು	42.39	460.25	1442.82	3187.87	5731.59	10307.22
4.	ಸಾಲ ಮತ್ತು ಮುಂಗಡಗಳು	13.97	253.29	523.42	1278.56	1725.74	2807.89
5.	ದುಡಿಯುವ ಬಂಡವಾಳ	52.82	498.58	1604.23	3580.00	6558.00	11794.84
6.	ನಿವ್ವಳ ಲಾಭ	–.069	13.24	34.75	65.99	107.01	191.61
7.	ಲಾಭಾಂಶ (ಶೇ.)	0%	15%	15%	15%	15%	20%
8.	ನಿವ್ವಳ ಎನ್.ಪಿ.ಎ. (ಶೇ.)	0%	3.95%	0.00%	0.00%	0.00%	
9.	ಸಿ.ಆರ್.ಎ.ಆರ್.	–	17.70%	14.32%	15.35%	29.43%	39.44%
10.	ಆಡಿಟ್ ವರ್ಗೀಕರಣ	–	“ಅ”	“ಅ”	“ಅ”	“ಅ”	“ಅ”

ಮಹಾಲಿಂಗಪೂರ ಪಟ್ಟಣ ಸಹಕಾರಿ ಬ್ಯಾಂಕು ನಿ, ಮಹಾಲಿಂಗಪೂರ

ಮಹಾಲಿಂಗಪೂರ ಪಟ್ಟಣ ಸಹಕಾರಿ ಬ್ಯಾಂಕು, ಸಂಸ್ಥಾಪಕ ಸದಸ್ಯರಾದ ಶ್ರೀ ಡಾ॥ ಬಿ.ಬಿ.ಹುದ್ದಾರ, ಶ್ರೀ ಸಂಗಪ್ಪಣ್ಣಾ ಶಿರೋಳ, ಶ್ರೀ ಚನಬಸಪ್ಪಾ ಸಕ್ರಿ, ಡಾ॥ ಎಸ್ ಎಂ ಅಂಬಿ, ಶ್ರೀ ಆರ್ ಜಿ ಯಕ್ಸಂಬಿ, ಶ್ರೀ ಆರ್ ಎಂ ಜಿರಗಾಳ, ಶ್ರೀ ಎಸ್ ಆರ್ ಬೆಳಗಾಂವಕರ, ಶ್ರೀ ವ್ಹಿ ಆರ್ ಗುಂಡಾ, ಶ್ರೀ ಆರ್ ಎಂ ಗಣಾಚಾರಿ, ಶ್ರೀ ವ್ಹಿ ಎನ್ ಗುಂಡಾ, ಶ್ರೀ ಎಂ ಆಯ್ ಕೋಳಿಗುಡ್ಡ, ಶ್ರೀ ಸಿ ಬಿ ಪಟ್ಟಣಶೆಟ್ಟಿ, ಶ್ರೀಮತಿ ಕೆ ಸಿ ಮಠದ, ಶ್ರೀಮತಿ ಎಸ್ ಎಂ ಅಂಗಡಿ ಹಾಗೂ ಶ್ರೀಮತಿ ಪಿ ಎಂ ಢಪಳಾಪೂರ ಇವರ ಸತತ ಪ್ರಯತ್ನದ ಫಲವಾಗಿ ಭಾರತೀಯ ರಿಜರ್ವ ಬ್ಯಾಂಕಿನಿಂದ ಅನುಮತಿ ಪಡೆಯುವಲ್ಲಿ ಯಶಸ್ವಿಯಾಗಿ, ನಮ್ಮ ಭಾಗಕ್ಕೆ ನಮ್ಮದೇ ಆದ ಒಂದು ಆರ್ಥಿಕ ಸಂಸ್ಥೆಯನ್ನು ಹೊಂದುವ ಮಹಾದಾಶೆಯಿಂದ ತಾರೀಖು 3–5–1979 ರಂದು ಉದ್ಘಾಟನೆಗೊಂಡು ವ್ಯವಹಾರವನ್ನು ಪ್ರಾರಂಬಿಸಿತು.

ಪ್ರಾರಂಭದಲ್ಲಿ ಬ್ಯಾಂಕು ಸುಮಾರು 500 ಜನ ಸದಸ್ಯರಿಂದ ರೂ. ಒಂದು ಲಕ್ಷ ಶೇರು ಬಂಡವಾಳ ಹೂಡಿಕೆಯೊಂದಿಗೆ ಕಾರ್ಯಾರಂಭಿಸಿತು. ಮೊದಲು ಬ್ಯಾಂಕು ಮಹಾಲಿಂಗಪೂರ ಹಾಗೂ ಸುತ್ತಮುತ್ತಲಿನ ಹಳ್ಳಿಗಳನ್ನು ತನ್ನ ಕಾರ್ಯಕ್ಷೇತ್ರವನ್ನಾಗಿಸಿಕೊಂಡು, ಈ ಭಾಗದ ಸದಸ್ಯರಿಗೆ ಆರ್ಥಿಕ ಸ್ವಾವಲಂಬನೆ ಹಾಗೂ ಅವರಲ್ಲಿ ಉಳಿತಾಯದ ಮನೋಭಾವದಲ್ಲಿ ಹೆಚ್ಚಿನ ಆಸಕ್ತಿಯನ್ನು ಹುಟ್ಟಿಸುವದು. ಅಲ್ಲದೇ ಮಹಾಲಿಂಗಪೂರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಜನತೆಗೆ ವ್ಯಾಪಾರ ಅಭಿವೃದ್ಧಿ, ಒಕ್ಕಲುತನ ಅಭಿವೃದ್ದಿ ಹಾಗೂ ಕೈಗಾರಿಕೋದ್ಯಮ ಅಭಿವೃದ್ದಿ ಹೊಂದಲು ಆರ್ಥಿಕ ಸಹಾಯ ಒದಗಿಸುವದು. ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಆರ್ಥಿಕ ಸ್ವಾವಲಂಬನೆ ಸಾಧಿಸುವ ಗುರಿಯನ್ನು ಇಟ್ಟುಕೊಂಡು ಸ್ಥಾಪನೆಗೊಂಡ ಬ್ಯಾಂಕು ಆ ನಿಟ್ಟಿನಲ್ಲಿ ಪ್ರತಿ ವರ್ಷ ಅತ್ಯಂತ ಪ್ರಗತಿ ಪಥದಲ್ಲಿ ಮುನ್ನಡೆಯುತ್ತ ಬಂದು ಬೃಹದಾಕಾರ ತಾಳಿ, ಸೈದಾಪೂರ–ಸಮೀರವಾಡಿಯಲ್ಲಿ ಒಂದು ಶಾಖೆ ಹಾಗೂ ಮುಖ್ಯ ಕಛೇರಿಗೆ ತನ್ನದೇ ಆದ ಸ್ವಂತ ಕಟ್ಟಡ ಮತ್ತು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಅದು ಬಾಗಲಕೋಟ ಜಿಲ್ಲೆ ಹಾಗೂ ಬೆಳಗಾಂವ ಜಿಲ್ಲೆಯ ಗೋಕಾಕ, ರಾಯಬಾಗ ಮತ್ತು ರಾಮದುರ್ಗ ತಾಲೂಕಿನಲ್ಲಿ ಬರುವ ಗ್ರಾಹಕರಿಗೆ ಬ್ಯಾಂಕಿನ ಸೇವೆಯನ್ನು ಒದಗಿಸುವಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.

ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಇವರು ಬ್ಯಾಂಕಿಗೆ ಬರಬೇಕಾದ ಎಲ್ಲ ಸುಸ್ತಿ ಬಾಕಿ ಸಾಲಗಾರರ ಮನೆ ಮನೆಗೆ ತೆರಳಿ ಸಾಲವನ್ನು ಪಾವತಿಸುವಂತೆ ಅವರಲ್ಲಿ ಮನವರಿಕೆ ಮಾಡಿಕೊಟ್ಟಿದ್ದು ಅಲ್ಲದೆ ಕೆಲವೊಂದು ಅನಿವಾರ್ಯ ಪ್ರಸಂಗಗಳಲ್ಲಿ ಅವರ ಚರಾಸ್ತಿಗಳನ್ನು ಜಪ್ತಿ ಮಾಡಲಾಗಿರುತ್ತದೆ. ಈ ಎಲ್ಲ ಕ್ರಮದಿಂದಲೂ ಸಹ ಸಾಲವು ಮರುಪಾವತಿಯಾಗದೇ ಉಳಿದಿರುವಂತಹ ಸಾಲಗಾರರ ಸ್ಥಿರಾಸ್ತಿಗಳನ್ನು ಬಹಿರಂಗ ಹರಾಜು ಮಾಡುವದರೊಂದಿಗೆ ಸಾಲವಸೂಲಿಯನ್ನು ಅತ್ಯಂತ ಕಟ್ಟುನಿಟ್ಟಿನಿಂದ ಮಾಡಲಾಗಿರುತ್ತದೆ. ಇದೂ ಅಲ್ಲದೆ ಲೀಲಾವಿನಲ್ಲಿ ಬೇಡಿಕೆದಾರರು ಭಾಗವಹಿಸದೇ ಉಳಿದ ಸ್ಥಿರಾಸ್ತಿಗಳನ್ನು ಬ್ಯಾಂಕಿನ ಹೆಸರಿಗೆ ವರ್ಗಾಯಿಸಲಾಗಿರುತ್ತದೆ. ಅಂತಹ ವರ್ಗಾಯಿಸಲ್ಪಟ್ಟ ಆಸ್ತಿಗಳಿಂದಲೂ ಸಹ ಸಹಕಾರ ಕಾಯ್ದೆಯನ್ವಯ ಸಾಲವನ್ನು ವಸೂಲ ಮಾಡಲಾಗಿರುತ್ತದೆ.

ಈ ರೀತಿಯಾಗಿ ಸಾಲವನ್ನು ವಸೂಲ ಮಾಡಿ ಬ್ಯಾಂಕಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಹಾಗೂ ವ್ಯವಸ್ಥಾಪಕರಾದ ಶ್ರೀ ಎಸ್.ಎಂ. ಗುಣದಾಳ ಮತ್ತು ಆಡಳಿತ ಮಂಡಳಿಯು ಯಶಸ್ವಿಯಾಗಿ ಒಟ್ಟು 1084.99 ಲಕ್ಷ ಸಾಲವನ್ನು ಬಡ್ಡಿ ಸಮೇತ ವಸೂಲಿ ಮಾಡಲಾಗಿರುತ್ತದೆ.

ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಹಾಗೂ ವ್ಯವಸ್ಥಾಪಕರಾದ ಶ್ರೀ ಎಸ್.ಎಂ. ಗುಣದಾಳ ಮತ್ತು ಆಡಳಿತ ಮಂಡಳಿಯ ಇಂತಹ ಪರಿಶ್ರಮದಿಂದ ಕೇವಲ 57 ದಿವಸಗಳಲ್ಲಿ ಕೊರತೆಯಲ್ಲಿರುವ ನಗದು ಮೀಸಲನ್ನು ಕಾಯ್ದಿರಿಸಿಕೊಂಡು ಬರಲಾಗಿರುತ್ತದೆ. ಅದರಂತೆ ರೂ. 188.14 ಲಕ್ಷ ಕೊರತೆಯಲ್ಲಿರುವ ಬ್ಯಾಂಕಿನ ದ್ರವ್ಯಾಸ್ತಿಯನ್ನು ಸಹ ಕೇವಲ 8 ತಿಂಗಳುಗಳೊಳಗೆ ಕಾಯ್ದಿರಿಸಿಕೊಂಡು ಬರುವದರಲ್ಲಿ ಯಶಸ್ವಿಯಾಯಿತು.

ನಂತರದ ದಿನಗಳಲ್ಲಿ ಭಾರತೀಯ ರಿಜರ್ವ ಬ್ಯಾಂಕು ವಿಧಿಸಿದ್ದ ಕಲಮು 35ಎ ಯಿಂದ ಭಾಗಶ: ಸಡಿಲಿಕೆ ಪಡೆದುಕೊಂಡಿದ್ದರಿಂದ, ಎರಡು ಲಕ್ಷ ರೂಪಾಯಿ ವರೆಗಿನ ಸಾಲಗಳನ್ನು ವಿತರಿಸುವಂತಾಯಿತು. ಮುಂದಿನ ಒಂದು ವರ್ಷ ಎರಡೇ ತಿಂಗಳಲ್ಲಿ ದಿ. 29–01–2008 ರಿಂದ ಅದು ಐದು ಲಕ್ಷ ರೂಪಾಯಿಗಳ ವರೆಗೆ ಸಾಲ ಕೊಡುವ ಮಂಜೂರಾತಿ ಪಡೆದುಕೊಂಡಿತು. ತದನಂತರ ದಿ. 25–11–2008 ರಿಂದ ಕಲಮು 35ಎ ಯಿಂದ ಸಂಪೂರ್ಣ ವಿನಾಯಿತಿ ಪಡೆದುಕೊಳ್ಳುವಲ್ಲಿ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಬಳಗ ಯಶಸ್ವಿಯಾಯಿತು. ಬ್ಯಾಂಕು ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಇವರ ಕಮೀಟಿಯು ಅಧಿಕಾರ ವಹಿಸಿಕೊಳ್ಳುವ ಪೂರ್ವದಲ್ಲಿ ನಾಲ್ಕನೇ ಶ್ರೇಣಿಯಲ್ಲಿತ್ತು. ಈಗ ಅದು ಎರಡನೇ ಶ್ರೇಣಿಗೆ ಬಂದು ನಿಂತಿದೆ.

ಈ ರೀತಿಯಾಗಿ ಸಾಲವನ್ನು ವಸೂಲ ಮಾಡಿ ಬ್ಯಾಂಕಿನ ಆರ್ಥಿಕ

ಸ್ಥಿತಿಯನ್ನು ಸುಧಾರಿಸುವಲ್ಲಿ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಹಾಗೂ ಶ್ರೀ ಎಸ್. ಎಂ. ಗುಣದಾಳ ಇವರೊಂದಿಗೆ ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು ಯಶಸ್ವಿಯಾಗಿ ದಿನಾಂಕ 31-03-2009 ರ ವೇಳೆಗೆ ಹಾನಿಯನ್ನು ಸಂಪೂರ್ಣವಾಗಿ ತೊಡೆದುಹಾಕಿ ಬ್ಯಾಂಕು ಲಾಭದಲ್ಲಿ ತರಲು ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಇವರ ಬಳಗ ಯಶಸ್ವಿಯಾಗಿ 2009 ರಿಂದ ಶೇರುದಾರರಿಗೆ ಲಾಭಾಂಶ ಹಂಚಿಕೆ ಮಾಡುವಲ್ಲಿ ಯಶಸ್ವಿಯಾಯಿತು.

ಇದೇ ರೀತಿಯಾಗಿ ನಮ್ಮ ಬ್ಯಾಂಕಿನ ಸಾಲ ವಸೂಲಾತಿ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರಿಂದ ನಮ್ಮ ಪ್ರಗತಿಯನ್ನು ಗಮನಿಸಿ ನಮ್ಮ ಬ್ಯಾಂಕಿಗೆ ಸನ್ 2016-17 ರಲ್ಲಿ ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟ ಇವರು ಕೊಡಮಾಡುವ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರಿ ಬ್ಯಾಂಕ್ ಎಂದು ಜಿಲ್ಲೆಗೆ ಪ್ರಥಮ ಸ್ಥಾನ ನೀಡಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಹಾಗೂ ವ್ಯವಸ್ಥಾಪಕರಾದ ಶ್ರೀ ಎಸ್ ಎಂ ಗುಣದಾಳ ಮತ್ತು ಎಲ್ಲ ನಿದೇಶಕರುಗಳನ್ನು ಗೌರವಿಸಿರುತ್ತಾರೆ. ಇದೇ ರೀತಿ ಸನ್ 2017-18 ರಲ್ಲಿಯೂ ಕೂಡಾ 2 ನೇ ಬಾರಿಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರಿ ಬ್ಯಾಂಕ ಎಂದು ಜಿಲ್ಲೆಗೆ ಪ್ರಥಮ ಸ್ಥಾನ ನೀಡಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಹಾಗೂ ವ್ಯವಸ್ಥಾಪಕರಾದ ಶ್ರೀ ಎಸ್ ಎಂ ಗುಣದಾಳ ಮತ್ತು ಎಲ್ಲ ನಿದೇಶಕರುಗಳನ್ನು ಗೌರವಿಸಿರುತ್ತಾರೆ. ನಂತರ ಸನ್ 2018-19 ರಲ್ಲಿಯೂ ಕೂಡಾ 3 ನೇ ಬಾರಿಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರಿ ಬ್ಯಾಂಕ ಎಂದು ಜಿಲ್ಲೆಗೆ ದ್ವಿತೀಯ ಸ್ಥಾನ ನೀಡಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಹಾಗೂ ವ್ಯವಸ್ಥಾಪಕರಾದ ಶ್ರೀ ಎಸ್ ಎಂ ಗುಣದಾಳ ಮತ್ತು ಎಲ್ಲ ನಿದೇಶಕರುಗಳನ್ನು ಗೌರವಿಸಿರುತ್ತಾರೆ.

ಕೋವಿಡ್ ಅವಧಿಯಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಪ್ರತಿಕೂಲ ವಾತಾವರಣವಿತ್ತು. ಅದರ ನಡುವೆಯೂ ನಮ್ಮ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವುದು ಗಮನಾರ್ಹವಾಗಿದೆ. ಇದೂ ಅಲ್ಲದೇ ದಿನಾಂಕ 31-03-2023ಕ್ಕೆ ನಮ್ಮ ಬ್ಯಾಂಕಿನ ಹಣಕಾಸಿನ ಸ್ಥಿತಿ ಈ ಕೆಳಗಿನಂತೆ ಇರುತ್ತದೆ.

ಈ ಆಡಳಿತ ಮಂಡಳಿಯು ಅಧಿಕಾರಕ್ಕೆ ಬರುವ ಅವಧಿಯಲ್ಲಿ ಬ್ಯಾಂಕಿನ ಹಣಕಾಸಿನ ಸ್ಥಿತಿಯು ಈ ಕೆಳಗಿನಂತೆ ಇದ್ದಿತು.	
ಶೇರು ಬಂಡವಾಳ	ರೂ. 55.41 ಲಕ್ಷ
ಕಾಯ್ದಿಟ್ಟ ಹಾಗೂ ಇತರ ನಿಧಿಗಳು	ರೂ. 638.22 ಲಕ್ಷ
ಠೇವುಗಳು	ರೂ. 1270.60 ಲಕ್ಷ
ಸಾಲಗಳು	ರೂ. 967.65 ಲಕ್ಷ
ನಿವ್ವಳ ಹಾನಿ	ರೂ. 40.08 ಲಕ್ಷ

ಸನ್ 2017-2018 ನೇ ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಿಸಿದ್ದಕ್ಕಾಗಿ ಬಾಗಲಕೋಟ ಡಿಸಿಸಿ ಬ್ಯಾಂಕಿನ ಬಹುಮಾನ ಯೋಜನೆಯಡಿ ಸತತ ಎರಡು ಬಾರಿ ಜಿಲ್ಲಾ ಮಟ್ಟಕ್ಕೆ ಪ್ರಥಮ ಸ್ಥಾನ ಪ್ರಶಸ್ತಿಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ. ಕೋಳಿಗುಡ್ಡ ಹಾಗೂ ಮ್ಯಾನೇಜರ್ ಶ್ರೀ ಎಸ್. ಎಂ. ಗುಣದಾಳ ಹಾಗೂ ಬ್ಯಾಂಕಿನ ನಿರ್ದೇಶಕ ಮಂಡಳಿಯವರಿಗೆ ಬಿಡಿಸಿಸಿ ಬ್ಯಾಂಕ ಇವರಿಂದ ಬಹುಮಾನ, ಪ್ರಶಸ್ತಿ ವಿತರಣೆ ಹಾಗೂ ಸನ್ಮಾನ.

ನಂತರ ನಮ್ಮ ಬ್ಯಾಂಕಿನ ಶೇರುದಾರರು, ಗ್ರಾಹಕರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿಯ ಪರಿಶ್ರಮದಿಂದ ನಮ್ಮ ಬ್ಯಾಂಕಿಗೆ ಪುನ: ಬಾಗಲಕೋಟ ಡಿ.ಸಿ.ಸಿ. ಬ್ಯಾಂಕಿನ ಬಹುಮಾನ ಯೋಜನೆಯಡಿ 4ನೇ ಬಾರಿಗೆ ಸನ್ 2022-23 ನೇ ಸಾಲಿನ ಉತ್ತಮ ಕಾರ್ಯನಿರ್ವಹಿಸಿದ್ದಕ್ಕಾಗಿ ದ್ವಿತೀಯ ಸ್ಥಾನ ದೊರೆತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ನಮ್ಮ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಮತ್ತು ವ್ಯವಸ್ಥಾಪಕರಾದ ಶ್ರೀ ಎಸ್ ಎಂ ಗುಣದಾಳ ಇವರನ್ನು ಸರ್ವ ಸದಸ್ಯರ ಸಮ್ಮುಖದಲ್ಲಿ ಜಿಲ್ಲಾ ಬಿ ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಜಯಕುಮಾರ ಸರನಾಯಕ ಮತ್ತು ಎಲ್ಲ ನಿರ್ದೇಶಕರು ಸೇರಿ ಸನ್ಮಾನಿಸಿ, ಪ್ರಶಸ್ತಿ ಫಲಕ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಮಹಾಲಿಂಗಪೂರದ ಗಣ್ಯರಾದ ಶ್ರೀ ಸಂಗಪ್ಪ ಹಲ್ಲಿ, ಶ್ರೀ ದಾನಪ್ಪ ಶೀರೋಳ, ಶ್ರೀ ಬಸವರಾಜ ಸುಣಧೋಳಿ, ಶ್ರೀ ಮಲ್ಲಪ್ಪ ಮುಗಳ ಖೋಡ, ಶ್ರೀ ಸಂತೋಷ ಹುದ್ದಾರ, ಶ್ರೀ ಚನ್ನಪ್ಪ ಕೋಳಿಗುಡ್ಡ, ಶ್ರೀ ನಾರಾಯಣ ಜೋಶಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಬಿ.ಎಂ. ಬಟಕುರ್ಕಿ, ನಿರ್ದೇಶಕರುಗಳಾದ ಶ್ರೀ ಎಂ.ವಿ. ಶಿರೋಳ, ಶ್ರೀ ವಿ.ಆಯ್. ಪಂಚಕಟ್ಟಿಮಠ, ಶ್ರೀ ವಿ.ಎಂ. ಹಲಗತ್ತಿ, ಶ್ರೀ ಎಚ್.ಎನ್. ಬಾಡಗಿ, ಶ್ರೀ ಜಿ.ಎಸ್. ಅಂಬಿ, ಶ್ರೀ ಎಸ್.ಎಂ. ಸೋರಗಾಂವಿ, ಶ್ರೀ ಎನ್.ಟಿ. ಕಲಕೇರಿ. ಶ್ರೀ ಪಿ.ಎಸ್. ಬೆಳಗಲಿ ಶಾಖಾ ವ್ಯವಸ್ಥಾಪಕರಾದ ಎಸ್.ಆರ್. ಹಿಕಡಿ, ಸಿಬ್ಬಂದಿಗಳಾದ ಎಂ.ಎಂ. ಗುಜ್ಜರ ಆಯ್.ಎಸ್. ಮಠದ ಸೇರಿದಂತೆ ಹಲವರು ಇದ್ದರು. ಈ ರೀತಿಯಾಗಿ ಬ್ಯಾಂಕು ಸನ್ 2003 ರಲ್ಲಿ ಇದ್ದಂತಹ ಆಡಳಿತ ಮಂಡಳಿಯ ಕಾರ್ಯ ವೈಫಲ್ಯದಿಂದ ಅದೋಗತಿಗೆ ಇಳಿದಂತಹ ಬ್ಯಾಂಕಿಗೆ ಶ್ರೀ ಮಹಾಲಿಂಗಪ್ಪ ಇ ಕೋಳಿಗುಡ್ಡ ಇವರ ನೇತೃತ್ವದಲ್ಲಿ ಸಂಸ್ಥಾಪಕ ನಿರ್ದೇಶಕರನ್ನೊಳಗೊಂಡ ಆಡಳಿತ ಮಂಡಳಿಯ ಸತತ ಪ್ರಯತ್ನದಿಂದ ಶೇಕಡಾ 100% ಇದ್ದ ಎನ್.ಪಿ.ಎ ಪ್ರಮಾಣವು ಈಗ ಕೇವಲ ಶೇಕಡಾ 3.5% ತಲುಪಿದೆ ಎಂದು ಹೇಳಲು ಹೆಮ್ಮೆ ಅನಿಸುತ್ತಿದೆ.

ಬ್ಯಾಂಕ್ ಲಾಕರ್ ಒಪ್ಪಂದಗಳ ಬಗ್ಗೆ ಪರಿಷ್ಕೃತ ಆರ್‌ಬಿಐನಿಂದ ಮಾರ್ಗಸೂಚಿ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸೇಫ್‌ಡೆ ಪಾಸಿಟ್ ಲಾಕರ್‌ಗಳ ಒಪ್ಪಂದಗಳ ಬಗ್ಗೆ ಪರಿಷ್ಕೃತ ಮಾರ್ಗಸೂಚಿ ಹೊರಡಿಸಿದ್ದು, ಒಪ್ಪಂದಗಳನ್ನು ನವೀಕರಿಸಿಕೊಳ್ಳಲು 2023ರ ಡಿಸೆಂಬರ್31ರ ಗಡುವು ನೀಡಿದೆ. ಹೀಗಾಗಿ ಅದಕ್ಕೂ ಮೊದಲು ಬ್ಯಾಂಕ್ ಲಾಕರ್ ಖಾತೆದಾರರು ಪರಿಷ್ಕೃತ ಒಪ್ಪಂದಕ್ಕೆ ಸಹಿ ಮಾಡಿ ಅದನ್ನು ತಮ್ಮ ಬ್ಯಾಂಕ್ ಶಾಖೆಗಳಿಗೆ ಸಲ್ಲಿಸಬೇಕಾಗುತ್ತದೆ.

ಪರಿಷ್ಕೃತ ಒಪ್ಪಂದಗಳಿಗೆ ಭಾರಿ ಸಂಖ್ಯೆಯಲ್ಲಿ ಗ್ರಾಹಕರು ಇನ್ನೂ ಸಹಿ ಹಾಕದಿರುವುದರಿಂದ ಗಡುವನ್ನು ಆರ್‌ಬಿಐ ಡಿಸೆಂಬರ್ 31ಕ್ಕೆ ಮುಂದೂಡಿದೆ. ನವೀಕರಣ ಪ್ರಕ್ರಿಯೆ ಮತ್ತು ಬ್ಯಾಂಕ್‌ಗಳ ಜವಾಬ್ದಾರಿಗಳ ಬಗ್ಗೆ ವಿವರ

ನವೀಕರಣ ಪ್ರಕ್ರಿಯೆ ಮತ್ತು ಬ್ಯಾಂಕ್‌ಗಳ ಜವಾಬ್ದಾರಿಗಳು:

ನವೀಕರಣ ಪ್ರಕ್ರಿಯೆಗಾಗಿ ಹೊಸ ಅಥವಾ ಪೂರಕವಾದ ಸ್ಟ್ಯಾಂಪ್ ಅಗ್ರಿಮೆಂಟ್ ಕಾರ್ಯಗತಗೊಳಿಸಲು ಅನುಕೂಲವಾಗುವಂತೆ, ಬ್ಯಾಂಕುಗಳು ಸ್ಟಾಂಪ್ ಪೇಪರ್‌ಗಳನ್ನು ಜೋಡಿಸುವುದು, ಅಗ್ರಿಮೆಂಟ್‌ಗಳ ಎಲೆಕ್ಟ್ರಾನಿಕ್ ಎಕ್ಸಿಕ್ಯೂಶನ್, ಫ್ರಾಂಕಿಂಗ್, ಇ–ಸ್ಟಾಂಪಿಂಗ್ ಮುಂತಾದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಬ್ಯಾಂಕುಗಳು ಕಾರ್ಯಗತಗೊಳಿಸಿದ ನಂತರ ಒಪ್ಪಂದದ ಪ್ರತಿಯನ್ನು ಗ್ರಾಹಕರಿಗೆ ಒದಗಿಸಬೇಕಾಗುತ್ತದೆ. ಲಾಕರ್ ಹಂಚಿಕೆಯ ಸಮಯದಲ್ಲಿ, ಬ್ಯಾಂಕುಗಳು ಗ್ರಾಹಕರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಇದಕ್ಕೆ ಬ್ಯಾಂಕ್ ಹಾಗೂ ಗ್ರಾಹಕರೂ ಇಬ್ಬರೂ ಸಹಿ ಮಾಡಬೇಕಾಗುತ್ತದೆ. ಲಾಕರ್ ಬಾಡಿಗೆದಾರರಿಗೆ ನಕಲಿ ಪ್ರತಿಯನ್ನು ಒದಗಿಸುವಾಗ, ಲಾಕರ್ ಇರುವ ಶಾಖೆಯ ಬ್ಯಾಂಕ್‌ನಲ್ಲಿ ಈ ಅಗ್ರಿಮೆಂಟ್‌ನ ಮೂಲ ಒಪ್ಪಂದ ಪ್ರತಿ ಇರಬೇಕು.

ಬ್ಯಾಂಕ್‌ಗೆ ಭದ್ರತೆ ಹೊಣೆಗಾರಿಕೆ

ಆರ್‌ಬಿಐ ಪ್ರಕಾರ, ಲಾಕರ್‌ಗಳ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದು ಬ್ಯಾಂಕುಗಳ ಜವಾಬ್ದಾರಿಯಾಗಿದೆ. ಅಗ್ನಿ ಅವಘಡ, ಕಳ್ಳತನ, ದರೋಡೆ, ಡಕಾಯಿತಿ, ನಿರ್ಲಕ್ಷ್ಯ ಮತ್ತು ಕಟ್ಟಡ ಕುಸಿತದಂತಹ ಘಟನೆಗಳನ್ನು ತಡೆಯಲು ಬ್ಯಾಂಕುಗಳು ತಮ್ಮ ಸ್ವಂತ ನ್ಯೂನತೆಗಳು ಉಂಟಾಗದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಹಾನಿಯ ಹೊಣೆಗಾರಿಕೆ

ಪ್ರವಾಹ, ಸಿಡಿಲು, ಭೂಕಂಪಗಳಂತಹ ನೈಸರ್ಗಿಕ ವಿಪತ್ತುಗಳಿಂದ ಲಾಕರ್‌ನಲ್ಲಿರುವ ಯಾವುದೇ ಹಾನಿ ಅಥವಾ ವಸ್ತುಗಳ ನಷ್ಟಕ್ಕೆ ಬ್ಯಾಂಕುಗಳು ಜವಾಬ್ದಾರರಾಗಿರುವುದಿಲ್ಲ. ಆದರೆ ಬ್ಯಾಂಕುಗಳು ತಮ್ಮ ಲಾಕರ್ ವ್ಯವಸ್ಥೆಯನ್ನು ಇಂತಹ ದುರಂತಗಳಿಂದ ರಕ್ಷಿಸುವಲ್ಲಿ ಸೂಕ್ತ ಕಾಳಜಿಯನ್ನು ವಹಿಸಬೇಕಾಗುತ್ತದೆ. ಗ್ರಾಹಕರ ತಪ್ಪಿನಿಂದ ಅಥವಾ ನಿರ್ಲಕ್ಷ್ಯದಿಂದ ಲಾಕರ್‌ನಲ್ಲಿರುವ ವಸ್ತುಗಳಿಗೆ ಯಾವುದೇ ನಷ್ಟ ಅಥವಾ ಹಾನಿ ಉಂಟಾದರೆ ಅದಕ್ಕೆ ಅವರೇ ಜವಾಬ್ದಾರರಾಗಿರುತ್ತಾರೆ ಎಂದು ಆರ್‌ಬಿಐ ಹೇಳಿದೆ.

ಪರಿಹಾರ ಮತ್ತು ಗ್ರಾಹಕರ ಹಕ್ಕುಗಳು

ಲಾಕರ್‌ನಲ್ಲಿರುವ ವಸ್ತುಗಳು ಕಳೆದುಹೋದರೆ ಅಥವಾ ನಷ್ಟ ಉಂಟಾಗಿ ಇವುಗಳಿಗೆ ಬ್ಯಾಂಕುಗಳು ಜವಾಬ್ದಾರರೆಂದು ಕಂಡುಬಂದರೆ, ಅವರು ಗ್ರಾಹಕರಿಗೆ ಪರಿಹಾರವನ್ನು ಒದಗಿಸಬೇಕಾಗುತ್ತದೆ. ಲಾಕರ್‌ಗಳು ಮತ್ತು ಅವುಗಳಿರುವ ಪ್ರದೇಶದ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದು ಬ್ಯಾಂಕಿನ ಕರ್ತವ್ಯವಾಗಿದೆ. ಸಹಿ ಮಾಡಿರುವ ಲಾಕರ್ ಅಗ್ರಿಮೆಂಟ್‌ನಲ್ಲಿರುವ ಗ್ರಾಹಕ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಗ್ರಾಹಕರಿಗೆ ಬ್ಯಾಂಕ್ ಮಾಹಿತಿ ನೀಡಬೇಕಾಗುತ್ತದೆ.

ಪ್ರಸಕ್ತ ವರ್ಷದಲ್ಲಿ ಮದುವೆಯಿಂದ ರೂ.4.25 ಲಕ್ಷ ಕೋಟಿ ವ್ಯವಹಾರದ ನಿರೀಕ್ಷೆ!

ನವದೆಹಲಿ : ದೇಶದಾದ್ಯಂತ ಈ ವರ್ಷದ ಮದುವೆಯ ಸೀಸನ್‌ನಲ್ಲಿ ಸುಮಾರು 35 ಲಕ್ಷ ವಿವಾಹಗಳು ನಡೆಯುವ ನಿರೀಕ್ಷೆಯಿದೆ. ಮದುವೆಯ ಶಾಪಿಂಗ್‌ನಿಂದ ಹಿಡಿದು ಮದುವೆಗಳಲ್ಲಿ ಅಗತ್ಯ ಸೇವೆಗಳವರೆಗೆ ಈ ಸೀಸನ್‌ನಲ್ಲಿ 4.25 ಲಕ್ಷ ಕೋಟಿ ರೂಪಾಯಿ ವ್ಯವಹಾರ ನಡೆಯಲಿದೆ ಎಂದು ಅಂದಾಜಿಸಲಾಗಿದೆ. ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ (ಸಿಎಟಿ) ಅಂಕಿ ಮತ್ತು ಅಂಶವನ್ನು ಬಿಡುಗಡೆ ಮಾಡಿದೆ.

ಸಿಎಟಿ ಸಂಶೋಧನೆ ಮತ್ತು ವ್ಯಾಪಾರ ಅಭಿವೃದ್ಧಿ ಸೊಸೈಟಿ ಇತ್ತೀಚೆಗೆ ದೇಶದ 20 ಪ್ರಮುಖ ನಗರಗಳ ವ್ಯಾಪಾರಿಗಳು ಮತ್ತು ಸೇವಾ ಪೂರೈಕೆದಾರರ ನಡುವೆ ಸಮೀಕ್ಷೆ ನಡೆಸಿದೆ ಎಂದು ಸಿಎಟಿ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಖಂಡೇಲ್ವಾಲ್ ಹೇಳಿದ್ದಾರೆ.

ಸಮೀಕ್ಷೆ ಪ್ರಕಾರ ರಾಜಧಾನಿ ದೆಹಲಿಯಲ್ಲಿ ಈ ಸೀಸನ್‌ನಲ್ಲಿ 3.5 ಲಕ್ಷಕ್ಕೂ ಹೆಚ್ಚು ಮದುವೆಗಳು ನಡೆಯುವ ನಿರೀಕ್ಷೆ ಇದ್ದು, ಈ ಮೂಲಕ ದೆಹಲಿಯಲ್ಲಿ ಸುಮಾರು 1 ಲಕ್ಷ ಕೋಟಿ ರೂಪಾಯಿ ವ್ಯವಹಾರ ನಡೆಯುವ ಸಾಧ್ಯತೆ ಇದೆ.

ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ

ನಂ.7/29, 3ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು-560019
ದೂರವಾಣಿ : 080-26507976 / 22428985, ಇ-ಮೇಲ್ headoffice@hnrcbank.in,
ವೆಬ್‌ಸೈಟ್ : https://hnrcbank.in

ಠೇವಣಿಗಳಿಗೆ ನೀಡುವ ಬಡ್ಡಿದರ		
ಅವಧಿ	ಪ್ರಸ್ತುತ ಬಡ್ಡಿದರ	ಪರಿಷ್ಕೃತ ಬಡ್ಡಿದರ
30 ದಿನಗಳಿಂದ 90 ದಿನಗಳವರೆಗೆ	5.50%	5.50%
91 ದಿನಗಳಿಂದ 180 ದಿನಗಳವರೆಗೆ	5.75%	5.75%
181 ದಿನಗಳಿಂದ 365 ದಿನಗಳವರೆಗೆ	6.25%	6.75%
1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ	7.00%	7.50%
2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ	7.00%	8.00%
3 ವರ್ಷದ ಮೇಲ್ಪಟ್ಟು 5 ವರ್ಷಗಳವರೆಗೆ	7.25%	8.25%
5 ವರ್ಷದ ಮೇಲ್ಪಟ್ಟು	7.00%	8.50%
ಹಿರಿಯ ನಾಗರೀಕರಿಗೆ 181 ದಿನಗಳ ಮೇಲ್ಪಟ್ಟ ಠೇವಣಿಗಳಿಗೆ 0.5% ಹೆಚ್ಚುವರಿ ಬಡ್ಡಿ ನೀಡಲಾಗುವುದು.		
ಉಳಿತಾಯ ಖಾತೆಗೆ	3.00%	3.00%
ವಿಶೇಷ ಬಡ್ಡಿದರ		
ರೂ.15.00 ಲಕ್ಷ ಮೇಲ್ಪಟ್ಟು ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಒಂದೇ ಹಿಡಿಗಂಟಿನಲ್ಲಿ ಮಾಡುವ ಠೇವಣಿಗಳಿಗೆ	8.00%	8.50%
(ಹಿರಿಯ ನಾಗರೀಕರಿಗೆ 0.5% ಹೆಚ್ಚುವರಿ ಬಡ್ಡಿ ನೀಡಲಾಗುವುದು.)		
ರೂ.15.00 ಲಕ್ಷ ಮೇಲ್ಪಟ್ಟು ಒಂದು ವರ್ಷಕ್ಕೂ ಹೆಚ್ಚಿನ ಅವಧಿಯ ಸಂಘ-ಸಂಸ್ಥೆಗಳ ಠೇವಣಿಗಳಿಗೆ 8.50%		

ಬ್ಯಾಂಕಿನ ಪ್ರಗತಿಯ ಪಕ್ಷಿನೋಟ	
ಷೇರು ಬಂಡವಾಳ	8 ಕೋಟಿ 77 ಲಕ್ಷ
ಆಪದ್ಧನ ಇತರೆ ನಿಧಿಗಳು	36 ಕೋಟಿ 68 ಲಕ್ಷ
ಠೇವಣಿಗಳು	201 ಕೋಟಿ 63 ಲಕ್ಷ
ಮುಂಗಡಗಳು	114 ಕೋಟಿ 27 ಲಕ್ಷ
ಹೂಡಿಕೆಗಳು	121 ಕೋಟಿ 06 ಲಕ್ಷ
ದುಡಿಯುವ ಬಂಡವಾಳ	252 ಕೋಟಿ 91 ಲಕ್ಷ
ಒಟ್ಟು ಲಾಭ	4 ಕೋಟಿ 89 ಲಕ್ಷ
ನಿವ್ವಳ ಎನ್.ಪಿ.ಎ.	5.81%
ನಿವ್ವಳ ಲಾಭ	2 ಕೋಟಿ 30 ಲಕ್ಷ
ಆಡಿಟ್ ವರ್ಗೀಕರಣ	'A' ಗ್ರೇಡ್

ಆಡಳಿತ ಮಂಡಳಿ ಸದಸ್ಯರು
ಶ್ರೀ ರಾಮೇಗೌಡ : ಅಧ್ಯಕ್ಷರು
ಶ್ರೀ ಮಲ್ಲಾರಿ ಗೌಡ : ಉಪಾಧ್ಯಕ್ಷರು
ನಿರ್ದೇಶಕರುಗಳಾದ :
ಶ್ರೀ ನಾರಾಯಣ ಕೆ.ಎಂ., ಶ್ರೀ ಬಾಲಗಂಗಾಧರ ಸಿ.ವಿ., ಶ್ರೀ ಕೃಷ್ಣಪ್ಪ ಸಿ.ವಿ.,
ಶ್ರೀ ಈರಂಕಯ್ಯ ಹೆಚ್.ಎಂ., ಶ್ರೀ ಲಕ್ಷ್ಮೀನಾರಾಯಣ ಎನ್., ಶ್ರೀ ವೆಂಕಟೇಶ್ ಕೆ.ಎಂ.,
ಶ್ರೀ ರವಿಕುಮಾರ್ ಎಂ., ಶ್ರೀ ಲಕ್ಷ್ಮೀನರಸಿಂಹಯ್ಯ ಎಂ., ಶ್ರೀಮತಿ ಶ್ವೇತಾ ಡಿ.,
ಶ್ರೀಮತಿ ಶೋಭಾ ಎಸ್.,
ವೃತ್ತಿಪರ-ನಿರ್ದೇಶಕರು : ಶ್ರೀ ವೇಣುಗೋಪಾಲ್ ಜಿ.
ವೃತ್ತಿಪರ-ನಿರ್ದೇಶಕರು : ಶ್ರೀ ಗಿಡ್ಡೇಗೌಡ ಎಸ್.
ವ್ಯವಸ್ಥಾಪಕರು : ಶ್ರೀ ಕೃಷ್ಣ ಡಿ.



ಮೂವತ್ತಾರು ವರ್ಷದ ಗೃಹಿಣಿ ಪ್ರಮೀಳಾ (ಹೆಸರು ಬದಲಾಯಿಸಲಾಗಿದೆ) ಅವರ ವಾಟ್ಸ್ ಆಯ್ಯಪ್ ಸಂಖ್ಯೆಗೆ ಅಪರಿಚಿತ ನಂಬರ್‌ನಿಂದ ಪಾರ್ಟ್‌ಟೈಂ ಕೆಲಸ ಕೊಡುವ ಸಂದೇಶ ಬಂದಿತ್ತು. ಮನೆಯಲ್ಲಿದ್ದೇ ಹಣ ಸಂಪಾದಿಸಬಹುದು ಎಂದು ಊಹಿಸಿದ ಪ್ರಮೀಳಾ, ಸಂದೇಶದ ಲಿಂಕ್ ಕ್ಲಿಕ್ ಮಾಡಿದ್ದರು. ಇಷ್ಟಕ್ಕೇ ಕಾದು ಕುಳಿತಿದ್ದ ಸೈಬರ್ ವಂಚಕರು ಕೆಲವೇ ನಿಮಿಷಗಳಲ್ಲಿ ಪ್ರಮೀಳಾ ಅವರ ಬ್ಯಾಂಕ್ ಖಾತೆಯಲ್ಲಿದ್ದ ಎರಡು ಲಕ್ಷ ರೂ. ಹಣ ವರ್ಗಾವಣೆ ಮಾಡಿಕೊಂಡಿದ್ದರು. ಬ್ಯಾಂಕ್ ಖಾತೆಯಿಂದ ಹಣ ಕಡಿತಗೊಂಡ ಬಳಿಕವಷ್ಟೇ ತಾನು ಮೋಸ ಹೋಗಿರುವ ಬಗ್ಗೆ ಎಚ್ಚೆತ್ತುಕೊಂಡ ಪ್ರಮೀಳಾ, ದಿಕ್ಕು ತೋಚದೆ ಕಂಗಾಲಾಗಿ ಉತ್ತರ ವಿಭಾಗದ ಸೈಬರ್ ಪೊಲೀಸರಿಗೆ ದೂರು ನೀಡಿದ್ದಾರೆ.

ಇದು ಪ್ರಮೀಳಾ ಒಬ್ಬರ ಕಥೆಯಲ್ಲ. ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ನಗರದಲ್ಲಿ ನಿತ್ಯ ಹತ್ತಾರು ಮಂದಿ ಲಕ್ಷಾಂತರ ರೂ. ಕಳೆದುಕೊಳ್ಳುತ್ತಿದ್ದಾರೆ. ಪರಿಣಾಮ ರಾಜಧಾನಿಯಲ್ಲಿ ಈ ವರ್ಷ ನವೆಂಬರ್ ಅಂತ್ಯಕ್ಕೆ ಬರೋಬ್ಬರಿ 16,300 ಸೈಬರ್ ವಂಚನೆ ಕೇಸ್‌ಗಳು ದಾಖಲಾಗಿವೆ. 2022ರಲ್ಲಿ 9,940 ಕೇಸ್ ಹಾಗೂ 2021ರಲ್ಲಿ 6,423 ಕೇಸ್ ದಾಖಲಾಗಿತ್ತು. ಕಳೆದ ವರ್ಷಗಳಿಗೆ ಹೋಲಿಸಿದಲ್ಲಿ ಪ್ರಕರಣಗಳ ಸಂಖ್ಯೆ ಭಾರಿ ಹೆಚ್ಚಿದೆ.

ಆಸೆ, ಭಯವೇ ವಂಚಕರ ಬಂಡವಾಳ

ಸುಲಭವಾಗಿ ಹಣ ಸಂಪಾದನೆ ಮಾಡಬೇಕು ಎನ್ನುವ ಜನರ ಆಸೆಯನ್ನೇ ವಂಚಕರು ಅಸ್ತ್ರವನ್ನಾಗಿಸಿಕೊಂಡಿದ್ದಾರೆ. ಮನೆಯಲ್ಲಿಯೇ ಕುಳಿತು ರೆಸ್ಟೋರೆಂಟ್, ಹೋಟೆಲ್, ಪ್ರವಾಸಿ ತಾಣಗಳಿಗೆ ರೇಟಿಂಗ್ ನೀಡಿದರೆ ಕಮಿಷನ್ ನೀಡುವ ಭರವಸೆ, ಕ್ರಿಪ್ಟೋ ಕರೆನ್ಸಿಯಲ್ಲಿ ಕೋಟ್ಯಂತರ ರೂ. ಲಾಭ ಸಂಪಾದನೆ ಅವಕಾಶ, ವಿದೇಶದಿಂದ ದುಬಾರಿ ಮೌಲ್ಯದ ಉಡುಗೊರೆ, ಹಣಕಾಸು ನೆರವಿನ ಬಗ್ಗೆ ಆಸೆಗಳನ್ನು ಭಿತ್ತಿ ಜನರ ಅಕೌಂಟ್‌ಗಳಲ್ಲಿರುವ ಹಣವನ್ನು ವಂಚಕರು ದೋಚುತ್ತಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸರ ಹೆಸರಲ್ಲೂ ಲೂಟಿ!

ಕಾಲಕ್ಕೆ ತಕ್ಕಂತೆ ವಂಚನೆ ಸ್ವರೂಪವನ್ನು ಬದಲಿಸಿರುವ ಸೈಬರ್ ಲೂಟಿಕೋರರು, ಈಗ ಮುಂಬಯಿ ಸೈಬರ್ ಪೊಲೀಸರ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಹೊರರಾಜ್ಯ, ವಿದೇಶಗಳಿಗೆ ಕೊರಿಯರ್ ಕಳುಹಿಸುವವರನ್ನು ಟಾರ್ಗೆಟ್ ಮಾಡಿರುವ ವಂಚಕರು, 'ನಿಮ್ಮ ಹೆಸರಿನಲ್ಲಿ ಬುಕ್ ಆಗಿರುವ ಕೊರಿಯರ್‌ನಲ್ಲಿ

ಡ್ರಗ್ಸ್ ಇದೆ. ಜತೆಗೆ, ಹವಾಲ ಹಣವಿದೆ. ಉಗ್ರಗಾಮಿಗಳು ನಿಮ್ಮ ಹೆಸರಿನಲ್ಲಿ ಸಿಮ್ ಖರೀದಿಸಿ ಬಳಕೆ ಮಾಡುತ್ತಿದ್ದಾರೆ' ಎಂದು ಹೆದರಿಸಿ ಕೋಟ್ಯಂತರ ರೂ. ವರ್ಗಾಯಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಉತ್ತರ ವಿಭಾಗದ ಸೈಬರ್ ಪೊಲೀಸರು ಇದೇ ಮಾದರಿಯಲ್ಲಿ ವಂಚಿಸುತ್ತಿದ್ದ ಎಂಟು ಮಂದಿಯನ್ನು ಬಂಧಿಸಿದಾಗ ಅದೇ ಆರೋಪಿಗಳು ಮುಂಬಯಿ ಪೊಲೀಸರ ಹೆಸರನ್ನು ದುರ್ಬಳಕೆ ಮಾಡಿಕೊಂಡಿದ್ದರು ಎಂಬುದು ಬಯಲಾಗಿತ್ತು ಎಂದು ಅಧಿಕಾರಿ ಹೇಳುತ್ತಾರೆ.

ಎಐ ಧ್ವನಿ ಮೂಲಕವೂ ಗಾಳ !

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್(ಎಐ) ತಂತ್ರಜ್ಞಾನವನ್ನು ವಂಚನೆಗೆ ಬಳಕೆ ಮಾಡಲಾಗುತ್ತಿದೆ. ಯಾವುದೇ ವ್ಯಕ್ತಿಯ ಧ್ವನಿಯನ್ನು ಎಐನಿಂದ ಅನುಕರಿಸಿ ಅವರ ಪರಿಚಯಸ್ಥರಿಗೆ ವಾಟ್ಸ್ ಆಯ್ಯಪ್‌ನಲ್ಲಿ ಕರೆ ಮಾಡಿ ವಂಚಕರು ಮಾತನಾಡಿ ತುರ್ತು ಸಂದರ್ಭದ ನೆಪವೊಡ್ಡಿ ಹಣ ಕೇಳುತ್ತಿದ್ದಾರೆ. ನಮ್ಮವರೇ ಮಾತನಾಡುತ್ತಿದ್ದಾರೆ ಎಂದು ಭಾವಿಸಿ ಹಲವರು ಹಣ ವರ್ಗಾವಣೆ ಮಾಡಿ ಮೋಸ ಹೋಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಯಾರೇ ವಾಟ್ಸ್ ಆಯ್ಯಪ್ ಕರೆ ಮೂಲಕ ಹಣ ಕೇಳಿದರೆ ಸುಲಭಕ್ಕೆ ನೀಡಬಾರದು. ಅನುಮಾನ ಬಂದ ತಕ್ಷಣ ಕರೆಯನ್ನು ಸ್ಥಗಿತಗೊಳಿಸಿ ಪುನಃ ಅದೇ ನಂಬರ್‌ಗೆ ಕರೆ ಮಾಡಿದಾಗ ಅದು ಎಐ ತಂತ್ರಜ್ಞಾನದ ಕ್ಲೋನಿಂಗ್ ಎಂಬುದು ಖಚಿತಪಡಲಿದ್ದು, ಹಣ ಕಳೆದುಕೊಳ್ಳುವುದು ತಪ್ಪಲಿದೆ ಎನ್ನುತ್ತಾರೆ ಪೊಲೀಸರು.

ಇತ್ತೀಚಿನ ದಿನಗಳಲ್ಲಿ ಉದ್ಯೋಗದ ಆಮಿಷವೊಡ್ಡಿ ಹಣ ಪಡೆದು ವಂಚಿಸುತ್ತಿರುವ ಕೇಸ್‌ಗಳು ಹೆಚ್ಚಾಗಿವೆ. ಈ ನಿಟ್ಟಿನಲ್ಲಿ ಯಾವುದೇ ಅಪರಿಚಿತ ವ್ಯಕ್ತಿ ಆನ್‌ಲೈನ್ ಮೂಲಕ ಪರಿಚಿತನಾಗಿ ಕೆಲಸ ಕೊಡುವುದಾಗಿ ಹೇಳಿ ಪ್ರೊಸೆಸಿಂಗ್ ಶುಲ್ಕ ಎಂಬುದು ಸೇರಿ ಹಲವು ನೆಪಗಳಲ್ಲಿ ಹಣ ಕೇಳಿದರೆ ಅದು ವಂಚನೆ ಎಂಬುದನ್ನು ಅರಿತು ಎಚ್ಚೆತ್ತುಕೊಳ್ಳಬೇಕು. ಜತೆಗೆ, ಆನ್‌ಲೈನ್ ಮೂಲಕ ಸಂಪರ್ಕಿಸಿದವರಿಗೆ ಬ್ಯಾಂಕ್ ಖಾತೆ, ಡೆಬಿಟ್ ಕಾರ್ಡ್‌ಗಳ ವಿವರ ನೀಡಬಾರದು ಎಂದು ಆನ್‌ಲೈನ್ ಜಾಬ್ ವಂಚನೆ ಕೇಸ್‌ಗಳ ಉಸ್ತುವಾರಿ ಡಿಸಿಪಿ ಶಿವಪ್ರಕಾಶ್ ದೇವರಾಜು ಹೇಳಿದ್ದಾರೆ.

ದೇಶದಲ್ಲೇ ಮೊದಲ ಸ್ಥಾನ

ರಾಷ್ಟ್ರೀಯ ಅಪರಾಧಗಳ ದತ್ತಾಂಶ ಕ್ರೋಢಿಕರಣ ಘಟಕ (ಎನ್‌ಸಿಆರ್‌ಬಿ) ಇತ್ತೀಚೆಗೆ ಅಂಕಿ ಅಂಶ ಬಿಡುಗಡೆ ಮಾಡಿದ್ದು, 2022ರಲ್ಲಿ ಸೈಬರ್ ವಂಚನೆ ಅತಿ ಹೆಚ್ಚು ನಡೆದ ದೇಶದ ಮಹಾ ನಗರಗಳ ಪೈಕಿ ಬೆಂಗಳೂರು ಅಗ್ರಸ್ಥಾನ ಪಡೆದಿದೆ ಎಂದು ವಿವರಿಸಲಾಗಿತ್ತು.

ಹೆಚ್ಚಾಗಿ ವಂಚನೆ ನಡೆಯುವ ಪ್ರಕರಣಗಳು

* ಆನ್‌ಲೈನ್ ಉದ್ಯೋಗದ ಆಮಿಷ
* ಡೆಬಿಟ್/ಕ್ರೆಡಿಟ್ ಕಾರ್ಡ್‌ಒಟಿಪಿ
* ವ್ಯವಹಾರಿಕ ಪಾಲುದಾರಿಕೆ ಭರವಸೆ
* ಬಿಟ್‌ಕಾಯಿನ್ ಹೂಡಿಕೆಯಲ್ಲಿ ದುಪ್ಪಟ್ಟು ಲಾಭ
* ಪೊಲೀಸರ ಹೆಸರಲ್ಲಿ ಕರೆ ಮಾಡಿ ಹಣಕ್ಕೆ ಬೇಡಿಕೆ
* ಕಡಿಮೆ ಬಡ್ಡಿಗೆ ತತ್‌ಕ್ಷಣ ಸಾಲ ಕೊಡುವುದು
* ಆನ್‌ಲೈನ್ ಲಾಟರಿ, ಉಡುಗೊರೆ ನೆಪ

ಯಾವುದೇ ವ್ಯಕ್ತಿಯ ಧ್ವನಿಯನ್ನು ಎಐನಿಂದ ಅನುಕರಿಸಿ ಅವರ ಪರಿಚಯಸ್ಥರಿಗೆ ವಾಟ್ಸ್ ಆಯ್ಯಪ್‌ನಲ್ಲಿ ಕರೆ ಮಾಡಿ ವಂಚಕರು ಮಾತನಾಡಿ ತುರ್ತು ಸಂದರ್ಭದ ನೆಪವೊಡ್ಡಿ ಹಣ ಕೇಳುತ್ತಿದ್ದಾರೆ. ನಮ್ಮವರೇ ಮಾತನಾಡುತ್ತಿದ್ದಾರೆ ಎಂದು ಭಾವಿಸಿ ಹಲವರು ಹಣ ವರ್ಗಾವಣೆ ಮಾಡಿ ಮೋಸ ಹೋಗುತ್ತಿದ್ದಾರೆ

Recent Policy initiatives by the Reserve Bank of India for Urban co-operative banks

Date if issue	Policy initiatives
11.4.2023	**Housing Finance:** The quantum of eligible individual housing loan has been doubled. Tier-1 UCBs are permitted to extend individual housing loans upto a maximum of Rs. 60 lakh per individual borrower and UCBs categorized in Tier-2 to 4 can extend individual housing loans up to a maximum of Rs140.00 lakh per individual borrower subject to extant prudential exposure limits. ii banks may consider fixing the instalments on a graduated basis
24.4.2023	**Provisioning for standard assets– revised norms under four-tiered regulatory framework:** The provisioning norms for standard assets applicable to all categories of UCBs, irrespective of their Tier in the revised framework. Accordingly, the standard asset provisioning norms applicable to Tier I, Tier 2, Tier 3 and Tier 4 UCBs under the revised framework shall be as under: a. Direct advances to agriculture and SME sectors which are standard, shall attract a uniform provisioning requirement of 0.25 percent of the funded outstanding on a portfolio basis. b. Advances to commercial real estate (CRE) sector which are standard shall attract a uniform provisioning requirement of 1.00 percent of the funded outstanding on a portfolio basis. c. For advances to commercial real estate - residential housing (CRE-RH) sector, which are standard, the provisioning requirement shall be 0.75 percent d. For all other advances, banks shall maintain a uniform general standard asset provision of a minimum of 0.40 percent of the funded outstanding on a portfolio basis. The erstwhile Tier I UCBs, which are currently maintaining standard asset provision of 0.25% on 'all other loans and advances except Direct advances to Agriculture and SME sectors' shall increase the same to 0.30% by March 31, 2024, to 0.35% by September 30, 2024 and to 0.40% by March 31, 2025.
28.4.2023	**KYC while opening a small account-** where the individual is a prisoner in a jail, the signature or thumb print shall be affixed in presence of the officer in-charge of the jail and the said officer shall certify the same under his signature and the account shall remain operational on annual submission of certificate of proof of address issued by the officer in-charge of the jail.
8.5.2023	**Income Recognition, Asset Classification, Provisioning:** The borrower accounts shall be flagged as overdue by banks as part of their day-end processes for the due date, irrespective of the time of running such processes. Similarly, classification of borrower accounts as SMA3 as well as NPA shall be done as part of day-end process for the relevant date and the SMA or NPA classification date shall be the calendar date for which the day end process is run. In other words, the date of SMA/NPA shall reflect the asset classification status of an account at the day-end of that calendar date. **Concept of "out of order" changed more than 90 days to "90 days":** An account should be treated as 'out of order" i. if the outstanding balance in the CC/OD account remains continuously in excess of the sanctioned limit/drawing power for 90 days, or ii. the outstanding balance in the CC/OD account is less than the sanctioned limit/drawing power but there are no credits continuously for 90 days, or the outstanding balance in the CC/OD account is less than the sanctioned limit/drawing power but credits are not enough to cover the interest debited during the previous 90 days period. The aforesaid 'previous 90 days period' is inclusive of the day for which the day-end process is being run.

8.6.2023	**New branch authorisation policy** Financially Sound Well Managed (FSWM) UCBs can open new branches up to 10% of their existing branches or one branch every year within their area of operation without obtaining RBI permission. The existing system of oping branches with RBI permission will also continue.
8.6.20023	**Framework for Compromise Settlements and Technical Write-offs:** OTS or one time settlement scheme can be seen as exit opportunities to stuck borrowers not having sufficient means to repay despite having intentions to do so. The bank planning to offer OTS to its borrowers should formulate a policy for OTS and a policy for examination of staff accountability. The staff accountability should be examined before sanctioning OTS to a particular borrower. The Board is fully competent to take decision and there is no need for a resolution in the AGM for OTS/technical write-offs. The RBI prescribes a minimum cooling period of 12 months for sanctioning fresh loan to the borrower who availed OTS. The borrower has to settle the entre OTS amount within three months from the date of agreement/communication of OTS. The difference between write-off and technical write-off is that -in the write-off the bank does not retain the right to pursue the recovery, whereas in technical write-off the bank retains the right to recover the NPA.
18.8.2023	**Fair Lending Practice - Penal Charges in Loan Accounts:** Penalty on loans, if charged, shall be treated as 'penal charges' and shall not be levied in the form of 'penal interest' that is added to the rate of interest charged on the advances. There shall be no capitalisation of penal charges i.e., no further interest computed on such charges. However, this will not affect the normal procedures for compounding of interest in the loan account. The quantum and reason for penal charges shall be clearly disclosed by the banks to the customers in the loan agreement and displayed on bank's website under Interest rates and Service Charges. Any instance of levy of penal charges and the reason therefor shall also be communicated to the borrower.
18.8.2023	Reset of Floating Interest Rate on Equated Monthly Instalments (EMI) based Personal Loans: 1 At the time of sanction, REs shall clearly communicate to the borrowers about the possible impact of change in interest rate on the loan leading to changes in EMI and/or tenor or both. Subsequently, any increase in the EMI/ tenor or both on account of the above shall be communicated to the borrower immediately through appropriate channels. 2 Provide option to the borrowers to switch over to a fixed rate 3 The borrowers shall also be given the choice to opt for (i) enhancement in EMI or elongation of tenor or for a combination of both options; and, (ii) to prepay, either in part or in full, at any point during the tenor of the loan. Levy of foreclosure charges/ pre-payment penalty shall be subject to extant instructions.
25.9.2023	**Display of information - Secured assets possessed under the SARFAESI Act, 2002:** Banks shall display information in their website in respect of the borrowers whose secured assets have been taken into possession by them under the SARFAESI Act.
6.10.2023	**Gold loan bullet payment-limit enhanced:** Gold loan bullet payment limits increased from Rs.2.00 lakh to 4 lakh for UCBs (other than salary earners banks) who achieved priority sector and sub-sector targets.
26.10.2023	**Deposits without premature withdrawal clause:** Term deposits accepted from individuals and Hindu Undivided Families for amount of Rupees one crore and below shall have premature-withdrawal-facility. The banks are free to have non-callable clause in other deposits.
30.10.2023	**NOC from RBI for amendments to bye-laws:** The UCBs should seek NOC from RBI for amendments to their bye-laws on account of change in the name of the bank.

Complied by – Sudhakara Bhat, Banking Advisor.

SREE SUBRAMANYESWARA CO-OPERATIVE BANK LIMITED

Estd : 1971 (R.B.I. Licence No.UBD KA 550 P)
H.O. & A.O., "Rajatha Bhavana" No.106, R.V.Road, V.V.Puram, Bangalore-560 004
e-mail: sscbank@yahoo.com, website: www.subcobank.com, Fax: 41312650, PH:080-26500879

BRANCHES	
V.V.PURAM BRANCH B-04	Ph: 26622462, 22422461/63
AVENUE ROAD BRANCHB-09	Ph: 22262722, 22281261, 22260043
VIJAYANAGAR BRANCH B-40	Ph: 23400993, 23206878
SUBRAMANYANAGAR BRANCH B-21	Ph: 23321252, 23426677
PADMANABHANAGAR BRANCH, B-85	Ph: 26694660, 26797274.
KACHARAKANAHALLI BRANCH, B-84	Ph; 25490999, 25487147
YESHWANTHAPURA BRANCH, B-54	Ph; 23378136, 23378137
NAGARABHAVI BRANCH, B-72	Ph: 23183787 / 788
KONANKUNTE BRANCH, B-62	Ph: 26320086 / 87

FINANCIAL HIGHLIGHTS AS ON 31-03-2023	
Number of Members	36091
Own Funds Exceeds	Rs.94.00 Crores
Total Business Exceeds	Rs.605.00 Crores
Deposits	Exceeds Rs.405.00 Crores
Advances	Exceeds Rs.200.00 Crores
Credit Facilities	Max., Rs.2.40 Crores per Individual
Operating profit	Rs.5.76 Crores
Capital Adequacy	21.94%

INTEREST RATES

DEPOSITS			LOANS	p.a. *
PERIOD	GENERAL	Sr. Citizen	Personal Loans	13% / 17%
			Housing Loans	8.50% to 9.25%
30 days to 180 days	5.50%	5.50%	Vehicle Loans	11.50% to 13.00%
181 days to 364 days	6.00%	6.00%	Gold Loan	8% to 9.00%
1 year and above less than 2 years	7.25%	7.75%	S.S.I. Loans (SME Loan)	11.00%
			Business	11.00% to 11.50%
2 years and above less than 3 years	7.60%	8.10%	Self-Employment	11.50%
			Education	10% to 12%
3 years & above	7.25%	7.75%	Mortgage Loan	12.00% to 12.50%
Savings Bank A/c	3.00%		Loan on LIC/NSC/KVP	13.00%
* Senior Citizen (person completed 60 years in age)			* After interest concession for prompt & regular repayment of loan installments –1%.	

SALIENT FEATURES:

- RTGS / NEFT/NACH and E-stamping facility available.
- Lockers facilities available
- Deposit up to Rs.5.00 Lakhs is Guaranteed under the Deposit Insurance Scheme
- Attractive Deposit schemes to the choice of all classes of people
- CLEAN & Secured Financial assistance to MEMBERS of all classes for Legitimate credit needs
- Prompt Personal & Efficient services always.
- Free Personal Accident Insurance Coverage for Borrowers.

BOARD OF DIRECTORS

Dr. K.M. Rangadhama Setty - Founder President
Sri. Vijaya Sarathi D R - Vice President

Sri CA Venkatachalapathy B.L.,
Sri Nanjegowda,
Smt. Annnapurnamma,
Sri Ravi K,
Sri Palanetrappa M C

Sri Rudramurthy P,
Sri Suresh Babu M K,
Smt.Jayalakshmi G Totager,
Sri Maruthi H,

Sri Sathyamurthy,
Smt.Mahalakshmi,
Sri Raveendra P K,
Sri Nagabhushan S A,

Sri K.N.Krishnaiah Setty - I/c General Manager

ಕಿರುತೆರೆ, ಹಿರಿತೆರೆಗಳಲ್ಲಿ ಮಿಂಚುತ್ತಿರುವ ಉತ್ತರ ಕರ್ನಾಟಕದ ಪ್ರತಿಭೆ

ಚಿತ್ಕಲಾ ಬಿರಾದಾರ್

ಚಿತ್ಕಲಾ ಬಿರಾದಾರ್ ಅಂದರೆ ತಟ್ಟನೆ ನೆನಪಾಗದ್ದಿದ್ದರೂ, ಅಮ್ಮಮ್ಮ ಎಂದ ಕೂಡಲೆ ಓಹ್! ಕನ್ನಡತಿ ಧಾರವಾಹಿಯ ರತ್ನಮಾಲ ಪಾತ್ರದ ದುಂಡು ನಗುಮೊಗ ನೆನಪಾಗುತ್ತದೆ. ಅಷ್ಟರ ಮಟ್ಟಿಗೆ ಇವರಿಗೆ ಆ ಪಾತ್ರ ಹೆಸರನ್ನು ತಂದು ಕೊಟ್ಟಿದೆ. ಸೊಷಿಯಲ್ ಮಿಡಿಯಾದಲ್ಲಿ ಸಾವಿರಾರು ಅಭಿಮಾನಿಗಳ ದೊಡ್ಡ ದಂಡೆ ಇರುವುದು ಚಿತ್ಕಲಾ ಅವರಿಗೆ ಖುಷಿ ತಂದಿದೆ. ಧಾರವಾಹಿಯಿಂದ ಬಿಡುವು ಪಡೆದು ಅಮೇರಿಕಾದಲ್ಲಿರುವ ತಮ್ಮ ಮಕ್ಕಳನ್ನು ನೋಡಲು ಹೋದರೆ, ಇಲ್ಲಿ ಸೊಷಿಯಲ್ ಮಿಡಿಯಾದಲ್ಲಿ ಅವರನ್ನು ಕೂಡಲೆ ಕರೆಸುವಂತೆ ವೀಕ್ಷಕರಿಂದ ದೊಡ್ಡ ಅಬ್ಬರವೇ ನಡೆಯುತ್ತದೆ.

ಚಿತ್ಕಲಾ ಬಿರಾದಾರ್ ಉತ್ತರ ಕರ್ನಾಟಕದ ಪ್ರತಿಭೆ. ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಚಿತ್ಕಲಾ ನಂತರ ಕಾಲೇಜೊಂದರಲ್ಲಿ ಇಂಗ್ಲೀಷ್ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಕೆಲ ಕಾಲ ಜರ್ಮನಿಗೆ ತೆರಳಿ ಅಲ್ಲಿಯೂ ಬೋಧನೆ ಮಾಡಿದ್ದಾರೆ. ನಂತರ ಕೆಲ ವರ್ಷಗಳ ಹಿಂದೆ ಬಂದೇ ಬರತಾವ ಧಾರವಾಹಿಯ ಮೂಲಕ ಕಿರುತೆರೆಯಲ್ಲಿ ಕಾಣಿಸಿಕೊಂಡವರು ಅಲ್ಲಿಂದ ಹಿಂತಿರುಗಿ ನೋಡಿದ್ದೇ ಇಲ್ಲ.

ತಮ್ಮ ಮನೆಯ ಬಳಿ ಇರುವ ರಂಗಶಂಕರದಲ್ಲಿ ನಾಟಕ ನೋಡುತ್ತಿದ್ದರು, ನಂತರ ಅದೇ ರಂಗಶಂಕರದಲ್ಲಿ ನಾಟಕಗಳಲ್ಲಿ ಅಭಿನಯಿಸಲಾರಂಭಿಸಿದರು. ಇವರು ನಟಿಸಿದ್ದ ಅವನು ಮತ್ತೆ ಶ್ರಾವಣಿ ಧಾರಾವಾಹಿಯಲ್ಲಿನ ತಮಿಳ್ ಅಯ್ಯಂಗಾರ್ ಪುಷ್ಪವಲ್ಲಿ ಪಾತ್ರಧಾರಿಯಾಗಿ ಕಾಣಿಸಿಕೊಂಡಿದ್ದು ಇವರಿಗೆ ಮತ್ತಷ್ಟು ಜನಪ್ರಿಯತೆಯನ್ನು ತಂದು ಕೊಟ್ಟಿತು. ಇದಕ್ಕೆಲ್ಲ ಕಾರಣ; ಚಿತ್ಕಲಾ ಅವರು ಮಾತನಾಡುವ ಸೊಗಸಾದ ಕನ್ನಡ ವೀಕ್ಷಕರ ಕಿವಿಗೆ ಇಂಪಾಗಿರುವುದು.

ನಿಮ್ಮ ಉಳಿತಾಯದ ಹಾದಿ ಯಾವುದು ಎಂದರೆ; ಅಯ್ಯೋ ಅದನ್ನೆಲ್ಲ ನೋಡಿಕೊಳ್ಳೊಕೆ ನಮ್ಮ ಜಗದೀಶ್ ಜಿರ್ಗಿ ಅವರಿದ್ದಾರೆ ಎಂದು ತಮ್ಮ ಪತಿಯತ್ತ ನೋಡುತ್ತಾರೆ.

Knight FinTech Transforms Banking with its state-of-the-art Treasury Management and Lending Solutions

In the fast-paced and ever-evolving world of banking, traditional banks are facing numerous challenges. Legacy systems, with their lack of flexibility and customization options, are becoming major hurdles to embracing digital transformation. Meeting the expectations of today's customers, who demand seamless and intuitive banking experiences, is another significant obstacle. Many banks find themselves in the early stages of their digital journey, struggling to keep up with these evolving customer demands.

The rise of digital and neo banks has intensified competition, pushing traditional banks to seek collaborations with FinTech companies. However, integrating with these new players can be complex due to the limitations imposed by legacy systems. Adding to the complexity is the ever-increasing importance of regulatory compliance. Manual processes and disjointed systems inherent in legacy systems raise the risk of breaches and violations. Regulatory bodies such as the Reserve Bank of India (RBI) continuously introduce stricter requirements to ensure stability and security in the financial ecosystem. Adhering to these regulations while maintaining operational efficiency becomes a critical concern for banks.

Addressing these challenges head-on, Knight FinTech offers innovative solutions in lending, and treasury management. These solutions empower traditional banks to overcome obstacles and thrive in the digital landscape.

Knight FinTech's treasury management solution, Knight Beacon, revolutionizes bank treasury operations. With unparalleled automation, control, analytics, and decision-making support, Knight Beacon empowers treasury teams to streamline processes, reduce errors, and enhance overall efficiency. Its intelligent decision support system provides valuable insights and data-driven recommendations, enabling treasury professionals to make informed decisions swiftly and confidently. Knight Beacon ensures comprehensive accounting and risk management, ensuring resilience in the face of changing market conditions and regulatory requirements making it an option most sought-after by financial institutions.



Knight Utopia by Knight FinTech is another end-to-end lending solution that streamlines the credit life cycle for financial institutions. Automating tasks like credit assessment, onboarding, disbursal, and monitoring, Knight Utopia ensures accurate evaluations for swift lending decisions. It simplifies onboarding through streamlined workflows and automated documentation, enhancing operational efficiency and customer experience. Real-time monitoring enables proactive risk management and compliance. Advanced reporting and analytics provide valuable insights for data-driven decision-making and strategic planning.

With its user-friendly interface and advanced technology, Knight Utopia empowers financial institutions to streamline processes, reduce costs, mitigate risks, and deliver superior customer experiences in the competitive financial landscape.

Knight FinTech's commitment to delivering top-notch services and solutions has forged partnerships with over 60 prominent financial institutions in India. These collaborations have provided invaluable insights into the industry's unique challenges and opportunities, allowing Knight FinTech to tailor its offerings to meet specific client needs and stay ahead of industry trends.

By continually developing innovative solutions and pushing boundaries, Knight FinTech is actively shaping the future of banking. Through its unwavering commitment to excellence and continued investment in technology, Knight FinTech remains at the forefront of the banking industry, driving positive change.

ಸಹಕಾರದ ಬಗ್ಗೆ ಗಣ್ಯರ ಅನಿಸಿಕೆ

ಸಹಕಾರ ಚಳವಳಿ, ಸಹಕಾರ ವ್ಯವಸ್ಥೆ ಇಂದು ಎಲ್ಲ ನಾಗರೀಕರಿಗೂ ಅವಶ್ಯ, ಅನಿವಾರ್ಯ ಎನಿಸಿದೆ. ಸಹಕಾರದ ಬಗ್ಗೆ ಸಮಾಜದ ವಿವಿಧ ಸ್ಥರಗಳ ಪ್ರಮುಖರು ಆಸ್ತೆ ತೋರುತ್ತಿರುವುದು ವಿಶೇಷವೇ ಸರಿ. ಸಹಕಾರದ ಬಗ್ಗೆ ಇಲ್ಲಿ ಕೆಲವು ಗಣ್ಯರ ಅನಿಸಿಕೆಯನ್ನು ಕೊಡಲಾಗಿದೆ.

ಸಮಾಜದ ಅಭಿವೃದ್ಧಿಗೆ ವಿಜ್ಞಾನ–ತಂತ್ರಜ್ಞಾನದ ಹಾಗೂ ಸಹಕಾರ ಕ್ಷೇತ್ರದ ಕೊಡುಗೆಗಳು ಪೂರಕವಾಗಿವೆ.

– ಡಾ. ದಾರುಕೇಶ್ವರ,
ಇಸ್ರೋದ ವಿಜ್ಞಾನಿ

ಜನಸಾಮಾನ್ಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಹಕಾರಿ ವ್ಯವಸ್ಥೆ ಉತ್ತಮ ವೇದಿಕೆಯಾಗಿದೆ.

– ಯು.ಟಿ. ಖಾದರ್,
ವಿಧಾನಸಭೆ ಸಭಾಧ್ಯಕ್ಷ

ಪ್ರಾಮಾಣಿಕತೆ, ನಿಸ್ವಾರ್ಥತೆ ಹಾಗೂ ಸಮಾಜದ ಬಗ್ಗೆ ಕಳಕಳಿ ಹೊಂದಿದಾಗ ಮಾತ್ರ ಸಹಕಾರಿ ಕ್ಷೇತ್ರ ಬೆಳೆಯಲು ಸಾಧ್ಯವಾಗುತ್ತದೆ.

– ಡಾ. ಶರಣಪ್ರಕಾಶ್ ಆರ್. ಪಾಟೀಲ,
ವೈದ್ಯಕೀಯ ಶಿಕ್ಷಣ ಸಚಿವರು

ಸಹಕಾರಿ ಆಂದೋಲನವು ಜನರ ಆಂದೋಲನವಾಗಿದೆ. ಜನರ ಆರ್ಥಿಕ ಹಾಗೂ ಸರ್ವತೋಮುಖ ಬೆಳವಣಿಗೆಗೆ ಅಡಚಣೆಯಾಗುವ ಸಹಕಾರ ಕಾಯ್ದೆಗಳಿಗೆ ತಿದ್ದುಪಡಿ ತರಲಾಗುತ್ತದೆ.

– ಕೆ.ಎನ್. ರಾಜಣ್ಣ,
ಸಹಕಾರ ಸಚಿವರು

THE RADDI SAHAKARA BANK NIYAMITHA, DHARWAD

HEAD OFFICE, Bank Road, Dharwad - 580001

Reg. No. 724, Est: 04-02-1914

Reserve Bank of India - Licence No. UBD: KAN. 1140 P

Ph. No. 0836-2796215, 2448118, Website: www.raddibank.com, E-mail-headoffice@raddibank.com

We are serving the people since 109 Years throughout 25 Branches and 1 Extension Counter with in inter-state of Karnataka

BRANCHES

Dharwad, Hubballi, Haveri, Ranebennur, Gadag, Navalgund, Annigeri, Naragund, Mulagund, Belgavi, Saundatti, Ramdurg, Gokak, Yaragatti, Mudalagi, Bagalkot, Jamkhandi, Mudhol, Galagali, Vijayapur, Muddebihal, Chitradurga, Davanagere, Huvin-Hadagali, Koppal, Extension Counter- Saraswatpur- Dharwad

- Share Capital Rs. 19.70 Crores (As on 31-03-2023)
- Reserve & Other Funds Rs. 76.20 Crores
- Working Capital Rs. 704.62 Crores
- Deposits Rs. 608.72 Crores
- Loans & Advances Rs. 371.40 Crores
- Bank is under FSWM (Financial Sound Well Managed) category
- Deposits are Insured D. I.C. G. C. and Attractive Interest Rates on Deposit
- Senior Citizen 0.50 % Extra on Deposit
- Safe Deposit Lockers Available
- Competitive Interest Rates on Loans and Advances
- Core Banking Solution with new technical features
- RTGS/NEFT facilities Available
- Direct Clearing Member (C. T. S.)
- Shortly we are Introducing A T M Facility
- Net N.P.A.0.00%

Sri. V.R. Nagavi
Chief Executive Officer

Sri. K.B. Naik
Vice-President

Sri. K.L. Patil
President

BOARD OF DIRECTORS Shri. H.K. Patil, Shri N.H. Konaraddi, Shri V.D. Kamaraddi, Shri L.R. Udapudi, Shri R.G. Budihal, Shri K.V. Hulakoti, Shri V.H. Bidari, Shri M.V. Manakur, Shri P.V. Chavannavar, Shri H.S.Koraddi, Shri S.R.Sonwalkar, Shri S.N. Nadagoudar, Smt.B.V. Navalagund, Smt. S.C. Huchchannavar, Shri D.G. Jogannavar, Shri A.L. Potnis, Shri G.B. Vantagodi

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು

ಶ್ರೀ ಪರಮಶಿವಯ್ಯ ಬಿ.ಎಸ್.
ಉಪಾಧ್ಯಕ್ಷರು

ಶ್ರೀ ಡಿ.ಟಿ. ಪಾಟೀಲ
ನಿರ್ದೇಶಕರು

ಶ್ರೀ ರುದ್ರೇಗೌಡ
ನಿರ್ದೇಶಕರು

ಶ್ರೀ ಅಶೋಕ ಮಲ್ಲಪ್ಪ
ಮನಗೂಳಿ, ನಿರ್ದೇಶಕರು

ಶ್ರೀ ಕೃಷ್ಣ ಹೆಚ್.ಸಿ.
ನಿರ್ದೇಶಕರು

ಶ್ರೀ ಕೋಗುಂಡಿ ಬಕ್ಕೇಶಪ್ಪ
ನಿರ್ದೇಶಕರು

ಶ್ರೀ ಬಸವರಾಜ ಈಶ್ವರಪ್ಪಾ
ಕಲ್ಯಾಣಶೆಟ್ಟಿ, ನಿರ್ದೇಶಕರು

ಶ್ರೀ ಹರೀಶ್ ಆಚಾರ್
ನಿರ್ದೇಶಕರು

ಶ್ರೀ ಕೃಷ್ಣಮೂರ್ತಿ ಭಂಡಾರಿ
ನಿರ್ದೇಶಕರು

ಶ್ರೀ ರಾಘವ ವಿಷ್ಣು ಬಾಳೇರಿ
ನಿರ್ದೇಶಕರು

ಶ್ರೀ ಮಲಕಣ್ಣ ಡಿ. ಪಾಟೀಲ
ನಿರ್ದೇಶಕರು

ಶ್ರೀ ರಾಜಕುಮಾರ ಬಸವರಾಜ
ಬಾದವಾಡಗಿ, ನಿರ್ದೇಶಕರು

ಶ್ರೀ ನಿರಂಜನ್ ಟಿ.ಎಸ್.
ನಿರ್ದೇಶಕರು

ಶ್ರೀ ವಾಸು ಹೆಚ್.
ನಿರ್ದೇಶಕರು

ಡಾ. ಎಂ.ಬಿ. ಮಂಚೇಗೌಡ
ನಿರ್ದೇಶಕರು

ಶ್ರೀಮತಿ ಮಲ್ಲಮ್ಮಾ ಶಿ.
ಯಾಳವಾರ, ನಿರ್ದೇಶಕರು

ಶ್ರೀಮತಿ ವೀರಮ್ಮ ಪಿ.
ನಿರ್ದೇಶಕರು

ಶ್ರೀ ಕೆ. ರಾಜೇಂದ್ರ, ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು

ಶ್ರೀ ಎಸ್.ಬಿ.ಎಂ. ಮಂಜು
ವಿಶೇಷ ಆಹ್ವಾನಿತರು

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಎಂ.ಕೆ. ಪಟ್ಟಣಶೆಟ್ಟಿ
ವಿಶೇಷ ಆಹ್ವಾನಿತರು

ಶ್ರೀ ರಘುನಾಥ್ ಸಿ.
ವಿಶೇಷ ಆಹ್ವಾನಿತರು

ಶ್ರೀ ರಾಜಶೇಖರ್ ಎಸ್.
ಹಾವಣಗಿ, ವಿಶೇಷ ಆಹ್ವಾನಿತರು

ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು

ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ

ಶ್ರೀ ಎಂ.ಎಂ. ಮೆಟಗುಡ್ಡ

ಶ್ರೀ ಶರಣಪ್ಪ ಎಸ್. ವಾರದ

ಶ್ರೀ ಆರ್.ಎಸ್. ಸುಬ್ರಹ್ಮಣ್ಯ

ಶ್ರೀ ಬಿ.ಎನ್. ಲೋಕೇಶ್

ಶ್ರೀ ಚಂದ್ರಮೌಳಿ ಎಸ್.

ಶ್ರೀ ವಿಕ್ರಮ ಆರ್. ಸಿರೂರ

ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ

ಡಾ. ಆರ್. ಇಳಂಗೋವನ್

ದಿನಾಂಕ:20.10.2023ರಂದು ಹೊಸಪೇಟೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು, ನಿರ್ದೇಶಕರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ ಬಿ.ಒ.ಎಂ. ಸದಸ್ಯರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀನಿರಂಜನ್ ಟಿ.ಎಸ್., ಶ್ರೀಮತಿ ವೀರಮ್ಮ ಪಿ., ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಷಣ್ಮುಖಪ್ಪ ಎಸ್. ಮುಚ್ಚಂಡಿ, ವಿಕ್ರಮ ಆರ್. ಸಿರೂರ, ವಿಕಾಸ ಸೌಹಾರ್ದ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ವಿಶ್ವನಾಥ ಚ. ಹಿರೇಮಠ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎನ್. ಕೇರೂರೆ, ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಸುಧಾಕರ ಭಟ್ ಮತ್ತಿತರರು ಉಪಸ್ಥಿತರಿದ್ದರು.

ದಿನಾಂಕ:24.11.2023ರಂದು ಹುಬ್ಬಳ್ಳಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ವಿಕ್ರಮ ಆರ್. ಸಿರೂರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ., ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ರಾಜಶೇಖರ್ ಎಸ್. ಹಾವಣಗಿ, ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಮಹಾಮಂಡಳದ ಅಧಿಕಾರಿ ಶ್ರೀ ಆರ್.ಹೆಚ್. ಕುಮಾರ್ ಉಪಸ್ಥಿತರಿದ್ದರು.

Safe Breaker's Nightmare!!
Kammar
The Mark of Security, Safety
Strength and Durability
KAMMAR UDYOG
MANUFACTURES OF :
• Steel Fire and Burglar Proof Safes
• Steel Safe Deposit Locker Cabinets
• Steel Safe with Safe Deposit Locker Cabinets
• Steel Strong Room Door with Grill Gate
• Steel Dressing Cabinets / Office Cabinets
• Steel Cash Boxes
• Cabins for M/s. BEML, KGF & MYSORE
Siddheshwar Compound, Bankapur Chowk, P.B. Road, HUBBALLI-580 024.
E-mail : kuhubli@gmail.com Website : www.kammarudyog.in
Mob : 9620777726, 9980524275